ಯೆಂದು ಮಾನ್ಯ ಸದಸ್ಯಣಿಯಾದ ನಾಗರತ್ನಮ್ಮನವರು ಅಪ್ಪಣೆ ಕೊಡಿಸಿದರು. ಆದರೆ ಸಹಿ ಮಾಡದೆ ಇರುವವರು ಮಾತನಾಡುವುದಕ್ಕೆ ಆಗುವುದಿಲ್ಲವೇ ? ಆದ್ದರಿಂದ ನಾನು ಸೂಚನೆ ಮಾಡುತ್ತೇನೆ ಅವರಿಗೆ ಒಪ್ಪಿಗೆ ಇದ್ದರೆ ಈ ವಿಷಯವನ್ನು ಅಲ್ಪಕಾಲಾವಧಿ ಚರ್ಚೆಯನ್ನಾಗಿ ತೆಗೆದುಕೊಳ್ಳೋಣ. ಮತ್ತು ನಾಳೆ ಒಂದು ವಿಷಯವನ್ನು ಮತ್ತು ನಾಳಿದ್ದು ಒಂದು ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ನಾವು ಸಹ ಅದನ್ನೇ ಒತ್ತಾಯ ಮಾಡುತ್ತಿದ್ದೆವು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಸಭಾ ನಾಯಕರು ಮೊದಲೇ ಈ ಮಾತನ್ನು ಹೇಳಿದ್ದರೆ 5 ನಿಮಿಷದಲ್ಲಿ ಇದೆಲ್ಲಾ ಮುಗಿಯುತ್ತಿತ್ತು. ಆದ್ದರಿಂಥ ತಾವು ಕೂಡ ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕೃಷ್ಣಾರೆಡ್ಡಿಯವರು ಬರಗಾಲ ಪರಿಸ್ಥಿತಿಯ ಬಗ್ಗೆ ನಿನ್ನೆ ಅರ್ಧಕ್ಕೆ ನಿಲ್ಲಿಸಿದ್ದ ಚರ್ಚೆಯನ್ನು ಮುಂದುವರಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಿಯಮ 334 ಏನಾಯಿತು ?

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಕ್ರಿಯಾಲೋಪ ಇದೆ. ನಿಯಮ 334ರ ಪ್ರಕಾರ ನಾವು ಕಳುಹಿಸಿಕೊಟ್ಟಿದ್ದ ನೋಟೀಸ್‌ಗಳು ಏನಾದವು,

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ. ನಿಯಮ 334ರ ನೋಟೀಸ್‌ಗಳನ್ನು ನಾಳೆ ತೆಗೆದು ಕೊಳ್ಳೋಣವೆಂದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಪ್ರೇಕ್ಷಕರ ಗ್ಯಾಲರಿಗೆ ಸಾರ್ವಜನಿಕರನ್ನು ಬಿಡುವ ವಿಚಾರವನ್ನು ಈಗಲಾದರೂ ಇತ್ಯರ್ಥ ಮಾಡಬಹುದಲ್ಲವೇ ? ಅಲ್ಲಿ ಬಾಂಬ್ ಇಟ್ಟಿಲ್ಲ ಯಾವುದೂ ಇಲ್ಲ. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಾರ್ವಜನಿಕರು ಕುಳಿತುಕೊಂಡು ಸದನದ ಕಾರ್ಯಕಲಾಪ ಗಳನ್ನು ವೀಕ್ಷಣೆ ಮಾಡಲಿ. ಮತ್ತು ವಿಧಾನಸೌಧದ ಸುತ್ತಮುತ್ತಲು ಇರುವ ಪೋಲೀಸರನ್ನು ತೆಗೆ ಯಿರಿ. ಈ ಬಗ್ಗೆ ಮಾನ್ಯ ಗೃಹ ಸಚಿವರು ಏನಾದರೂ ಹೇಳಲಿ ?

ಶ್ರೀ ಬಿ. ರಾಚಯ್ಯ.—ಆ ತೀರ್ಮಾನ ಅಧ್ಯಕ್ಷರಿಗೆ ಬಿಟ್ಟಿದ್ದುದು.

ಅಧ್ಯಕ್ಷರು.—ತಾವು ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ತಾವು ಪ್ರೇಕ್ಷಕರನ್ನು ಗ್ಯಾಲರಿಗಳಿಗೆ ಬಿಡುವ ಬಗ್ಗೆ ಇವೊತ್ತೆ ಒಂದು ತೀರ್ಮಾನ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು.—ನಾಳೆ ಹೇಳುತ್ತೇನೆ ಕುಳಿತುಕೊಳ್ಳಿ.

ವಿಷಯ : ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ.

*ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಸನ್ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಈ ಬರ ಗಾಲ ಪರಿಸ್ಥಿತಿಯಿಂದ ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಪರಿಸ್ಥಿತಿ ಯಾವ ರೀತಿಯಲ್ಲಿ ಇರುತ್ತದೆ ಎಂದು ನಿನ್ನೆಯ ದಿವಸ ನಾನು ಪ್ರಸ್ತಾಪ ಮಾಡುತ್ತಿದ್ದೆ. ಹಳ್ಳಿಗಾಡಿನಲ್ಲಿ ವಾಸ ಮಾಡತಕ್ಕಂಥ ರೈತ ಕೇವಲ ಕೆರೆ, ಬಾವಿಗಳನ್ನೇ ಅವಲಂಬಿಸಬೇಕಾಗಿದೆ. ಕೆರೆ ಮತ್ತು ಬಾವಿಗಳನ್ನು ನಂಬಿಕೊಂಡು ಇವೊತ್ತಿನ ದಿವಸ ರೈತ ತನ್ನ ಬೇಸಾಯವನ್ನು ಮಾಡಬೇಕಾಗಿದೆ. ಈ ಬಗ್ಗೆ ಮಾನ್ಯ ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಇಡೀ ಕರ್ನಾಟಕ ರಾಜ್ಯದ ಬರಗಾಲದ ಬಗ್ಗೆ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾನು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಸದನದ ಒಂದು ಸಮಿತಿಯನ್ನು ನೇಮಕ ಮಾಡಿ ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಸಿಂಹಾವಲೋಕನ ಮಾಡಬೇಕೆಂದು ಸಹ ನಾನು ಸಲಹೆ ಕೊಡುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದ್ದರೂ ಸಹ ಕೇಂದ್ರ ಸರ್ಕಾರದಿಂದ ಕೇವಲ 22 ಕೋಟಿ ರೂಪಾಯಿಗಳ ನೆರವು ಮಾತ್ರ ನಮಗೆ ಬಂದಿದೆ. ಆದ್ದರಿಂದ ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಸಲಹೆ ಯನ್ನು ಮಾಡುತ್ತೇನೆ. ಅದೇನೆಂದರೆ ಕೇಂದ್ರ ಸರ್ಕಾರದಲ್ಲಿ ತಮ್ಮ ಪಕ್ಷದ ಸರ್ಕಾರವಿದೆ. ರಾಜ್ಯದಲ್ಲಿ ಇಷ್ಟು ಬರಗಾಲವಿದ್ದರೂ ಕೇಂದ್ರದಿಂದ ಬಂದಿರತಕ್ಕಂಥ ಹಣ ಸಾಕೇ ಎಂದು ಏತಕ್ಕೆ ಪ್ರಶ್ನೆ ಮಾಡಲಿಲ್ಲ? ಬೇರೆ ರಾಜ್ಯಗಳಿಗೆ ಈ ಮೊತ್ತವನ್ನು ಹೋಲಿಕೆ ಮಾಡಿ ನೋಡಿದರೆ ಬಹಳ ಕಡಿಮೆ ಹಣವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮತ್ತು ಸದನದ ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಗೆ ಮಾನ್ಯ ವಿರೋಧಪಕ್ಷದ ನಾಯಕರೇ ಮುಂದಾಳಾಗಿ ನಿಂತು ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ನೆರವು ಕೊಡಿಸಿಕೊಡುವಂತೆ ಒತ್ತಾಯ ಮಾಡಬೇಕು ಮತ್ತು ನಾನು ಕೆಲವೊಂದು ಅಂಕಿಅಂಶಗಳನ್ನು ಸಭೆಯ

ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ 1983-84ನೇ ಇಸವಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಕೇವಲ 14 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಅದೇ ಕೇರಳ ರಾಜ್ಯಕ್ಕೆ ಬರಗಾಲದ ನೆರವೆಂದು ಸುಮಾರು 42 ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ತಮಿಳುನಾಡಿಗೆ ಸುಮಾರು 59ಕೋಟಿ ರೂಪಾಯಿಗಳನ್ನು ಒದಗಿಸಿ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು 10 ನಿಮಿಷಗಳಲ್ಲಿ ಭಾಷಣವನ್ನು ಮುಗಿಸಿದರೆ ಒಳ್ಳೆಯದು. ತಾವು ಬೇರೆ ಸದಸ್ಯರು ಹೇಳಿದಂತಹ ವಿಷಯಗಳನ್ನು ಪುನರಾವರ್ತನೆ ಮಾಡುವುದು ಬೇಡ. ಇನ್ನೂ 34 ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ, ಈ ಸದನದ ಎರಡೂ ಕಡೆಯ ಮಾನ್ಯ ಸದಸ್ಯರುಗಳು ಬರಗಾಲ ಪರಿಸ್ಥಿತಿಯ ತೀವ್ರತೆಯನ್ನು ಸದನದ ಗಮನಕ್ಕೆ ತಂದಿದ್ದಾರೆ. ಇಡೀ ಕರ್ನಾಟಕದಲ್ಲಿ ಇರತಕ್ಕ ಬರಗಾಲವನ್ನು ಸಮೀಕ್ಷೆ ನಡೆಸಲು ಸದನದ ಸಮಿತಿಯನ್ನು ನೇಮಕ ಮಾಡಬೇಕೆಂದು ವಿರೋಧ ಪಕ್ಷದ ಸದಸ್ಯರು ಒತ್ತಾಯ ಮಾಡಿದ್ದಾರೋ, ಅದೇ ರೀತಿ ಈ ಬರಗಾಲದ ಪರಿಸ್ಥಿತಿಯ ಎದುರಿಸಲಿಕ್ಕೆ ಕೇಂದ್ರದಿಂದ ಬಂದಿರತಕ್ಕಂಥ ಪರಿಹಾರ, ಬೇರೆ ರಾಜ್ಯಗಳಿಗೆ ಜಾಸ್ತಿ ಬಂದಿದೆ ನಮ್ಮ ರಾಜ್ಯಕ್ಕೆ ಕಡಿಮೆ ಬಂದಿದೆ, ಇದನ್ನು ವಿಮರ್ಶೆ ಮಾಡಲು ಇದೇ ಸದನದ ಒಂದು ಸಮಿತಿಯನ್ನು ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಂಗಾರಪ್ಪನವರ ಮುಖಂಡತ್ವದಲ್ಲಿ ಏತಕ್ಕೆ ರಚನೆ ಮಾಡಬಾರದು ಎಂದು ತಮ್ಮ ಮೂಲಕ ನಾನು ಈ ಸದನವನ್ನು ಕೇಳುತ್ತಿದ್ದೇನೆ. ಈ ವರ್ಷ ನಮ್ಮ ರಾಜ್ಯಕ್ಕೆ ಇದಕ್ಕಾಗಿ 8.41 ಕೋಟಿ ರೂಪಾಯಿಗಳು ಬಂದಿದೆ. ಅದೇ ತಮಿಳು ನಾಡಿಗೆ 18.39 ಕೋಟಿ ರೂಪಾಯಿಗಳು ಹೋಗಿದೆ. ಹೋದ ವರ್ಷ ಅಲ್ಲಿಗೆ 42.72 ಕೋಟಿ ಹೋಗಿದ್ದರೆ, ನಮಗೆ 13 ಕೋಟಿ ಬಂದಿದೆ. ನನ್ನ ಅಂಕಿ ಅಂಶ ತಪ್ಪಿರಬಹುದು. ತಪ್ಪಿದ್ದರೆ ಅದನ್ನು ತಿದ್ದಿ. ಈ ಸಲ ಕೇಂದ್ರದ ಒಂದು ಬರಗಾಲ ಅಧ್ಯಯನ ತಂಡ ಕೋಲಾರ ಜಿಲ್ಲೆಯಲ್ಲಿ ಪರ್ಯಟನೆ ಮಾಡಿತು. ನಾನು ನಮ್ಮ ಶಾಸಕ ಮಿತ್ರರಾದ ಶ್ರೀ ಮುನಿಸ್ವಾಮಪ್ಪನವರು, ಶ್ರೀ ಮಣಿಯವರು ತಂಡದೊಂದಿಗೆ ಹೋಗಿದ್ದೆವು. ಕೋಲಾರಜಿಲ್ಲೆಯಲ್ಲಿರತಕ್ಕ ಬರಗಾಲದ ಪರಿಸ್ಥಿತಿಯನ್ನು ಕರ್ನಾಟಕ ಸರ್ಕಾರದ ಅಧಿಕಾರಿಗಳ ತಂಡದೊಂದಿಗೆ, ಅಧ್ಯಯನ ತಂಡದವರು ಚರ್ಚೆ ಮಾಡಿದರು. ನಾವೂ ಕೋಲಾರ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿಯನ್ನು ಅಧ್ಯಯನ ತಂಡದೊಂದಿಗೆ ಸವಿಸ್ತಾರವಾಗಿ ಚರ್ಚೆ ಮಾಡಿದೆವು. ಅವರೂ ಸಹ ಒಪ್ಪಿಕೊಂಡರು. ಕೋಲಾರ ಜಿಲ್ಲೆಯ ಪರಿಸ್ಥಿತಿ ಬಹಳ ಬಿಕ್ಕಟ್ಟಾಗಿದೆ, 250 ಹಳ್ಳಿಗಳಲ್ಲಿ ನೀರಿಲ್ಲ, ಮೇವಿಲ್ಲ, ಬೆಳೆಗಳು ಒಣಗಿ ಹೋಗಿವೆ, ಇದನ್ನೆಲ್ಲಾ ತಂಡದ ಗಮನಕ್ಕೆ ನಾವು ತಂದೆವು. ಅವರೂ ಒಪ್ಪಿಕೊಂಡರು. ಆದಕಾರಣ ನಾನು ವಿರೋಧ ಪಕ್ಷದವರಲ್ಲಿ ಮನವಿ ಮಾಡುವುದು ಇಷ್ಟೆ. ಬರಗಾಲದ ಬಗ್ಗೆ ರಾಜಕೀಯ ಬೇಡ. ನಾವೆಲ್ಲಾ ಒಂದಾಗಿ ಕರ್ನಾಟಕಕ್ಕೆ ಒದಗಿರತಕ್ಕಂಥ ಪರಿಸ್ಥಿತಿಯನ್ನು ತೀವ್ರವಾಗಿ ಗಮನಿಸಬೇಕು. ನಮಗೆ ಕೇಂದ್ರದಿಂದ ಬಂದಿರತಕ್ಕಂಥ ಹಣ ಒಟ್ಟು 23 ಕೋಟಿ ರೂಪಾಯಿಗಳು ಏನಿದೆ ಅದು ಏನೇನೂ ಸಾಲದು. ನಾವೆಲ್ಲಾ ಏತಕ್ಕೆ ಇದರ ಬಗ್ಗೆ ಕೇಂದ್ರಕ್ಕೆ ಒತ್ತಾಯ ಮಾಡಬಾರದು? ಬರಗಾಲ ಪರಿಸ್ಥಿತಿ ಸಮೀಕ್ಷೆ ಮಾಡಲು ಯಾವ ರೀತಿ ಒಂದು ಸದನದ ಸಮಿತಿಯನ್ನು ರಚನೆ ಮಾಡಬೇಕೆಂದು ಮಾನ್ಯ ಬಂಗಾರಪ್ಪನವರು ಒತ್ತಾಯ ಮಾಡಿದ್ದಾರೆ ಅದೇ ರೀತಿ ಇದರ ಬಗ್ಗೆ ಕೇಂದ್ರವನ್ನು ಒತ್ತಾಯ ಮಾಡಲೂ ಒಂದು ಸದನದ ಸಮಿತಿಯನ್ನು ನೇಮಕ ಮಾಡಬೇಕು ಎಂದು ನಾನು ಹೇಳುತ್ತೇನೆ. ಬೇರೆ ರಾಜ್ಯಗಳಿಗೂ ನಮ್ಮ ರಾಜ್ಯಕ್ಕೂ ಕೊಡತಕ್ಕ ಹಣದಲ್ಲಿ ಬಹಳ ವ್ಯತ್ಯಾಸ ಇದೆ. ಇದರ ಬಗ್ಗೆ ಒತ್ತಾಯ ಮಾಡಲು ತಾವುಗಳು ಮುಂದೆ ಬರಬೇಕೆಂದು ತಮ್ಮ ಮೂಲಕ ವಿರೋಧ ಪಕ್ಷದವರನ್ನೂ ಹಾಗೂ ಸರಕಾರವನು ಒತ್ತಾಯ ಮಾಡುತ್ತೇನೆ. ಕೋಲಾರ ಜಿಲ್ಲೆಯ ಪರಿಸ್ಥಿತಿಯಂತೂ ಬಹಳ ಭೀಕರವಾಗಿದೆ. ಇದರ ಬಗ್ಗೆ ಮಾನ್ಯ ಸಭಾನಾಯಕರು ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದನ್ನು 15 ದಿವಸಗಳಲ್ಲಿ ಮಳೆ ಬರದಿದ್ದರೆ ತೀವ್ರವಾದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಬರುತ್ತದೆ. ಖಂಡಿತವಾಗಿ ಈ ಸಂದರ್ಭದಲ್ಲಿ ನಾವು ಮತ್ತು ವಿರೋಧ ಪಕ್ಷದವರು ಒಂದಾಗಿ ನಮಗೆ ಕೇಂದ್ರದಿಂದ ಬಂದಿರತಕ್ಕ ಹಣ ಏನಿದೆ, ನಮ್ಮ ಸಂಪನ್ಮೂಲ ಏನಿದೆ, ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಇದರ ಬಗ್ಗೆ ಕೇಂದ್ರವನ್ನು ಒತ್ತಾಯ ಮಾಡಲು ಒಂದು ಸದನದ ಸಮಿತಿಯು ಬಹಳ ಅಗತ್ಯವಾಗಿದೆ ಅದನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಶಿವನಂಜಪ್ಪನವರೇ, ಇನ್ನು 15 ನಿಮಿಷದಲ್ಲಿ ತಾವು ಭಾಷಣವನ್ನು ಮುಗಿಸಬೇಕು. ಎಲ್ಲರೂ ಹೇಳಿರುವುದನ್ನು ಬಿಟ್ಟು ಹೊಸದಾಗಿ ಏನಾದರೂ ಇದ್ದರೆ ತಾವು ಹೇಳಿ ?

* ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನನಗೆ ಬಂದಿರತಕ್ಕಂಥ ಅನುಮಾನವನ್ನು ಮಾನ್ಯ ಸಚಿವರಾದ ಬೊಮ್ಮಾಯಿಯವರ ಹತ್ತಿರ ಕೇಳಬೇಕಾಗಿದೆ. ಮಾನ್ಯ ಸಚಿವರು ದಯಮಾಡಿ ಈ ಕಡೆ ಗಮನಹರಿಸಬೇಕು.

ಅಧ್ಯಕ್ಷರು.—ಇಲ್ಲಿ ಎಲ್ಲಾ ರೆಕಾರ್ಡ್ ಆಗುತ್ತಿದೆ. ರೆಕಾರ್ಡ್ ಆದುದನ್ನು ಅವರು ಸಾಯಂಕಾಲ ತರಿಸಿಕೊಂಡು ಓದುತ್ತಾರೆ. ನೀವು ಹೇಳಿದ್ದು ಒಂದು ಅಕ್ಷರ ಸಹ ಬಿಟ್ಟು ಹೋಗುವುದಿಲ್ಲ, ನೀವು ಮುಂದುವರಿಸಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಹಾಗಾದರೆ ನಾವು ಎಲ್ಲಾ ಬರೆದು ಕೊಂಡು ಬಂದು ಕೊಟ್ಟು ಬಿಡುತ್ತೇವೆ. ಮಾನ್ಯ ಸಚಿವರುಗಳು ಏತಕ್ಕೆ ಇಲ್ಲಿ ಇರಬೇಕು.

ಅಧ್ಯಕ್ಷರು.—ಮಾತನಾಡಲು 34 ಜನ ಹೆಸರು ಕೊಟ್ಟಿದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ಸದನದಲ್ಲಿ ಕೊಟ್ಟಿರತಕ್ಕ ರಿಪೋರ್ಟ್ ಮಿಸ್‌ಲೀಡಿಂಗ್ ಆಗಿದೆ ಎಂದು ತಮ್ಮ ಮೂಲಕ ಸದನಕ್ಕೆ ಹೇಳುತ್ತೇನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ 289 ಹೆಡ್ ಮೇಲೆ ರಿಲೀಫ್ ಅಮೌಂಟ್ ಕೊಡಬೇಕು. ಅದರ ಮೂಲಕ ಕೆಲಸ ತೆಗೆದು ಕೊಂಡಿದ್ದೇವೆಂದು ಹೇಳಿದ್ದಾರೆ. ಕೇಂದ್ರದವರು ಕೆಲಸ ತೆಗೆದುಕೊಳ್ಳುವ ನಿಯಮ ಹೇಳಿಕಳುಹಿಸಿರುವುದು ಎನ್.ಆರ್.ಇ.ಪಿ.ಯಲ್ಲಿ ಕೆಲಸ ತೆಗೆದುಕೊಳ್ಳಿ ಎಂದು. ಆದರೆ ನೀವು ಎನ್.ಆರ್.ಇ.ಪಿ. ಕೆಲಸಗಳನ್ನು ಯಾವರೀತಿ ನಿರ್ವಹಣೆ ಮಾಡುತ್ತೀರಿ ಎಂದರೆ, ಅದು ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಅಪ್ರೂವ್ ಆಗಬೇಕು. ಅಪ್ರೂವ್ ಆಗಿರುವ ಕೆಲಸಗಳನ್ನಷ್ಟೇ ತೆಗೆದುಕೊಳ್ಳಿ ಅದನ್ನು ಬಿಟ್ಟು ಬೇರೆ ಆಗುವುದಿಲ್ಲ ಎಂದು ಹೇಳಿ ದರೆ, ಕೇಂದ್ರ ಸರ್ಕಾರದವರು ನಿಮಗೆ ಎನ್. ಆರ್. ಇ. ಪಿ.ಗೆ ಹಣ ಕೊಡುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೆ ಚರ್ಚೆಗೆ ಅನುಕೂಲವಾಗಲಿ ಎಂದು ಒಂದು ವಿಚಾರ ಹೇಳುತ್ತೇನೆ. ಬರಗಾಲಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡತಕ್ಕಂಥ ಹಣವನ್ನು ಯಾವರೀತಿ ಖರ್ಚು ಮಾಡಬೇಕೆಂಬ ಬಗ್ಗೆ ಕೇಂದ್ರ ಸರ್ಕಾರದ ಆದೇಶ ಇದೆ. ಆದರೆ ಯೋಜನಾಬದ್ಧವಾದ ಕಾರ್ಯಕ್ರಮಗಳ ಮುಖಾಂತರ ಖರ್ಚು ಮಾಡುವುದಕ್ಕೆ ನಾವು ಕಡಿತ ಮಾಡಿಲ್ಲ. ಕೇಂದ್ರ ಸರ್ಕಾರದ ಹಣವನ್ನು 64 ಫ್ಯಾಮೈನ್ 289 ಪ್ರಕಾರ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಉಲ್ಲೇಖ ಮಾಡಿರುತ್ತೇನೆ ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಎನ್.ಆರ್.ಇ.ಪಿ., ಡಿ.ಪಿ.ಎ.ಪಿ, ಯೋಜನೆಗಳಲ್ಲೇ ಖರ್ಚು ಮಾಡಬೇಕು. ಬೇರೆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಪೇಜ್ 3ರಲ್ಲಿ ಯಾವರೀತಿ ಮಾಡ ಬೇಕೆಂದು ಉಲ್ಲೇಖ ಮಾಡಿರುತ್ತೇನೆ. ಅದನ್ನು ಸ್ವಲ್ಪ ಓದಿಕೊಳ್ಳಿ.

ಶ್ರೀ ಜಿ. ಎಸ್. ಶಿವನಂಜಪ್ಪ. ಸ್ಕೇರ್ಸಿಟಿ ಅಮೌಂಟ್ 289ರ ಪ್ರಕಾರ ನೀವೂ ಖರ್ಚುಮಾಡ ಬೇಕು. ಎನ್.ಆರ್.ಇ.ಪಿ. ವರ್ಕ್ಸ್ ಯಾವುದು ಅಪ್ರೂವ್ ಆಗಿದೆ ಅಷ್ಟನ್ನು ಮಾತ್ರ ತೆಗೆದುಕೊಳ್ಳಿ ಎಂದು ನೀವು ಆದೇಶ ಕೊಟ್ಟಿದ್ದೀರಿ. ಎರಡೂ ಹೆಡ್ ಪ್ರಕಾರ ಸ್ಕೇರ್ಸಿಟಿ ವರ್ಕ್ಸ್ ತೆಗೆದುಕೊಳ್ಳುವಾಗ ಎನ್.ಆರ್.ಇ.ಪಿ. ನಿಯಮಗಳನ್ನು ಅನುಸರಿಸಬೇಕೆಂದು ಹೇಳಿದ್ದೀರಿ. ಎನ್.ಆರ್.ಇ.ಪಿ. ನಿಯಮ ಗಳನ್ನು ಅನುಸರಿಸಿ ಕೆಲಸ ಮಾಡಬೇಕಾದರೆ ಅರ್ಜೆಂಟಾಗಿ ಬೇಕಾಗಿರತಕ್ಕಂಥ ಕೆಲಸಗಳನ್ನು ಆಯಾ ಕ್ಷೇತ್ರ ದಲ್ಲಿ ಆಯಾ ತಾಲ್ಲೂಕುಗಳಲ್ಲಿ ತೆಗೆದುಕೊಳ್ಳಬೇಕೆಂದು ಕಾನೂನು ಇದೆ. ಆದರೆ ನೀವು ಕೊಟ್ಟಿರತಕ್ಕಂಥ ಸುತ್ತೋಲೆಯ ಪ್ರಕಾರ ಈಗ 4-5 ತಿಂಗಳಿಂದ, ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಅಪ್ರೂವ್ ಆದ, ಅದರಲ್ಲಿ ಸೇರಿಸಿರತಕ್ಕಂಥ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಬೇರೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬರುವು ದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಮತ್ತೊಂದು ತಪ್ಪು ಕಲ್ಪನೆ ಇದೆ ಇಲ್ಲಿ ತಾವು ಪಟ್ಟಿ ಕೊಟ್ಟಿದ್ದೀರಿ, ಒಂದೊಂದು ಪಂಚಾಯಿತಿಯಲ್ಲಿ ಎರಡೆರಡು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಆದರೆ ನನ್ನ ಗುಬ್ಬಿ ಕ್ಷೇತ್ರದಲ್ಲಿ ಯಾವ ಪಂಚಾಯಿತಿಯಲ್ಲಿ ಎರಡು ಕೆಲಸಗಳನ್ನು ತೆಗೆದು ಕೊಂಡಿದ್ದೀರಿ ಎಂಬುದನ್ನು ಹೇಳುವುದಕ್ಕೆ ಸಾಧ್ಯ ಇದೆಯೇ ಸ್ವಾಮಿ ? ಸದನವನ್ನು ತಪ್ಪು ದಾರಿಗೆ ಎಳೆ ಯುವಂತಹ ಮಾಹಿತಿಗಳನ್ನು ಕೊಟ್ಟು, ಅಧಿಕಾರಿಗಳು ತಯಾರು ಮಾಡಿರತಕ್ಕಂಥ ಅಂಕಿಅಂಶಗಳನ್ನು ಕೊಟ್ಟು ಸದನದಲ್ಲಿ ಚರ್ಚೆಮಾಡಿ ಎಂದು ಹೇಳುತ್ತಿದ್ದೀರಿ.

ಅಧ್ಯಕ್ಷರು.—ನಿಮ್ಮಲ್ಲಿ ಏನಾದರೂ ನಿರ್ದಿಷ್ಟವಾದುದು ಇದ್ದರೆ ಹೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ರಾಜ್ಯದ ಬಗ್ಗೆಯೂ ಹೇಳುತ್ತಿದ್ದೇನೆ. ನಿರ್ದಿಷ್ಟವಾಗಿ ನನ್ನ ಕ್ಷೇತ್ರದ ಬಗ್ಗೆ ಸಹ ಹೇಳುತ್ತಿದ್ದೇನೆ. ಯಾವ ಪಂಚಾಯಿತಿಯಲ್ಲಿಯೂ ಎರಡು ಕೆಲಸಗಳನ್ನು ತೆಗೆದು ಕೊಂಡಿಲ್ಲ. ಆ ರೀತಿ ತೆಗೆದುಕೊಳ್ಳುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಒಂದು ತಾಪತ್ರಯ ಇದೆ. ಹಣ ಇಲ್ಲ ಎಂದರೆ ನೀವು ಅವರ ಕುತ್ತಿಗೆಗೆ ನೇಣು ಹಾಕುತ್ತೀರಿ. ಹಣ ಇದೆ ಎಂದರೆ, ಜನಗಳು ಕೆಲಸಮಾಡಿ ಎಂದು ಅಧಿಕಾರಿಗಳಿಗೆ ನೇಣು ಹಾಕುತ್ತಾರೆ. ಆ ಅಧಿಕಾರಿಗಳು ಎಲ್ಲಿಗೆ ಹೋಗಬೇಕು ? ಸ್ಕೇರ್ಸಿಟಿ ಅಮೌಂಟ್‌ನಲ್ಲಿ ನಮ್ಮ ತಾಲ್ಲೂಕಿನಲ್ಲಿ 27 ಸಾವಿರ, 37 ಸಾವಿರ ಖರ್ಚು ಮಾಡುತ್ತೇವೆಂದು ಹೇಳಿ ದ್ದೀರಿ. ಎನ್.ಆರ್.ಇ.ಪಿ.ಗೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೇ ? ಕೇಂದ್ರ ಸರ್ಕಾರದಿಂದ

ಬಂದಿರತಕ್ಕಂಥ ಹಣವನ್ನು ಎನ್.ಆರ್.ಇ.ಪಿ.ಗೆ ಕೊಟ್ಟು ಮತ್ತೆ ಸ್ಕೇರ್ಸಿಟಿ ರಿಲೀಫ್‌ನಲ್ಲಿ ಬೇರೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಆಗಿಲ್ಲ. ಕೆಲಸಗಳನ್ನು ತೆಗೆದುಕೊಳ್ಳಬಾರದು ಎಂಬ ಕಟ್ಟು ಪಾಡು ಹಾಕಿಕೊಂಡಿದ್ದೀರಿ. ಈ ಚೌಕಟ್ಟಿನಲ್ಲಿ ಜನಗಳಿಗೆ ಖಂಡಿತಾ ಯಾವರೀತಿಯ ಸಹಾಯವೂ ಆಗುವುದಿಲ್ಲ ಎಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳಲು ಇಷ್ಟಪಡುತ್ತೇನೆ.

ಇನ್ನು ಜನಗಳಿಗೆ ಕೆಲಸಗಳನ್ನು ಕೊಡತಕ್ಕದ್ದು. ತುಮಕೂರು ಜಿಲ್ಲೆಯಲ್ಲಿ ಜನಗಳಿಗೆ ಕೆಲಸಗಳನ್ನು ಕೊಟ್ಟಿದ್ದೀರಾ ? ನಮ್ಮ ಒಂದು ತಾಲ್ಲೂಕಿನಲ್ಲೇ ಸುಮಾರು 20 ಸಾವಿರ ಜನ ಕೆಲಸವಿಲ್ಲದೇ ಇದ್ದಾರೆ. ಮಳೆ ಬಂದು ಮೂರು ವರ್ಷ ಆಯಿತು. ಗೊಬ್ಬರ ಕೂಡಾ ಚೆಲ್ಲಿರಲಿಲ್ಲ. ಜಮೀನುಗಳನ್ನು ಹಾಗೆ ಬಿಟ್ಟಿದ್ದಾರೆ. ಈ ವರ್ಷ ಅಲ್ಲಲ್ಲೇ ಪ್ಯಾಚಸ್ ಆಗಿ ಮಳೆ ಬಂದಿದೆ. ಉಳುಮೆ ಮಾಡಿದ್ದಾರೆ. ಮಳೆಗಾಲಕ್ಕಾಗಿ ಜನ ಕಾಯುತ್ತಿದ್ದಾರೆ, ರೈತರಿಗೆ ಕೆಲಸ ಇಲ್ಲ. ದನಗಳ ಗೋಳು ನಿಜವಾಗಿಯೂ ಕೂಡಾ ಯಾರ ಕಣ್ಣಿನಲ್ಲಾದರೂ ನೀರು ತರಿಸುತ್ತದೆ. ಅವುಗಳಿಗೆ ಮೇವಿಲ್ಲ, ನೀರಿಲ್ಲ. ನ್ಯಾಷನಲ್ ಹೈವೇ ನಂಬರ್ ಫೋರ್‌ನಲ್ಲಿ ನೋಡಬೇಕು. ಸುಮಾರು ಒಂದೂವರೆ ಎರಡು ಸಾವಿರ ದನಗಳನ್ನು, ಇನ್ನೂ ಎರಡು ವರ್ಷ ಕೆಲಸ ಮಾಡುವಂತಹ ದನಗಳನ್ನು ಕಸಾಯಿಖಾನೆಗೆ ಹೊಡೆಯುತ್ತಿದ್ದಾರೆ. ಕಾರಣ ಅವುಗಳಿಗೆ ಮೇವಿಲ್ಲ. ಒಂದು ಸಣ್ಣ ಹೊರೆ ಹುಲ್ಲು 30 ರೂಪಾಯಿಗಳು ಆಗಿದೆ. ತುಮಕೂರು ಜಿಲ್ಲೆಗೆ ಎಷ್ಟು ಲಾರಿ ಹುಲ್ಲನ್ನು ಅಧಿಕಾರಿಗಳು ಕಳುಹಿಸಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ನಾವು ಸುಮಾರು 25 ಅರ್ಜಿಗಳನ್ನು ಕೊಟ್ಟಿದ್ದೇವೆ. ಕೇವಲ 25 ಸಾವಿರ ರೂಪಾಯಿಗಳನ್ನು ನಮ್ಮ ತಾಲ್ಲೂಕಿಗೆ ಕೊಟ್ಟಿದ್ದಾರೆ, 10 ಜನ ಹರಿಜನರು ಅರ್ಜಿ ಹಾಕಿದ್ದಾರೆ. ಅದರಲ್ಲಿ 4 ಜನ ಮಾತ್ರ ತೆಗೆದುಕೊಂಡು ಬಂದಿದ್ದಾರೆ. ರಿಪೋರ್ಟ್‌ನಲ್ಲಿ ಬಂದಿರತಕ್ಕ ವಿಷಯಗಳಿಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ನಿಮ್ಮ ಧೈರ್ಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ರೈತ ದೇಶದ ಬೆನ್ನೆಲುಬು, ರೈತನಿಗೆ ಬೆನ್ನೆಲುಬು ಗೋವುಗಳು. ಗೋವುಗಳು ಇಲ್ಲದೇ ಹೋದರೆ ಬೆನ್ನೆಲುಬು ಇರುತ್ತದೆಯೇ ಇದನ್ನು ತಾವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ, ಲಘುವಾಗಿ ತಿಳಿದುಕೊಂಡಿದ್ದೀರಿ ಇದು ಸರಿಯಲ್ಲ. 27 ಕೋಟಿ ಅಥವಾ 37 ಕೋಟಿ ತೆಗೆದುಕೊಂಡು ನಮಗೆ ಕೆಲಸಕೊಡಿ ಅಧಿಕಾರಿಗಳಿಗೆ ಕೆಲಸ ಕೊಡಿ. ಎನ್‌ಆರ್‌ಇಪಿ. ಕೆಲಸದಲ್ಲಿ ಏನು ಕೊಟ್ಟಿದ್ದೀರಿ, ಬಿಲ್ಡಿಂಗ್ ಕೆಲಸಗಳನ್ನೆಲ್ಲಾ ನಿಲ್ಲಿಸಿಬಿಡಿ. ಒಂದು ಲಕ್ಷ ಕಾಮಗಾರಿ ಕೆಲಸಗಳನ್ನು ಕಡತದಿಂದ ವಜಾ ಮಾಡಿದ್ದೀರಿ. ಒಂದೊಂದು ಪಂಚಾಯಿತಿಯಲ್ಲೂ ಆಗಬೇಕಾದ ಕೆಲಸಕ್ಕೆ ಗಮನ ಕೊಡಿ. ಈಗಲಾದರೂ ಆದೇಶ ಕೊಟ್ಟು ಕ್ರಮ ಕೈಗೊಳ್ಳುವುದು ಒಳ್ಳೆಯದು. ನಮ್ಮ ಜನ ಬದುಕಬೇಕು, ನಮ್ಮ ದನ ಬದುಕಬೇಕು. ಮಾನ್ಯ ಬಸವಣ್ಣಪ್ಪನವರು ಹೇಳಿದರು, ಹೆಚ್ಚಿಗೆ ಹಣ ಕೊಟ್ಟಿದ್ದೇವೆಂದು. ಆ ಹಣವನ್ನು ಯಾರು ತರುವುದು ? ಸೊಸೈಟಿಗಳಿಗೆ ಈ ವಿಚಾರವಾಗಿ ಬೇರೆ ವ್ಯವಸ್ಥೆ ಮಾಡಬೇಕು. ಡಿ.ಸಿ. ಅಲಾಟ್ ಮಾಡಿರುವ ಹಣವನ್ನು ಹಳ್ಳಿಗಾಡುಗಳಿಗೆ ತೆಗೆದುಕೊಂಡು ಹೋಗತಕ್ಕ ಶಕ್ತಿ ಇಲ್ಲ. ಇದನ್ನು ಯಾರು ಮಾಡುವುದು ? ಆಹಾರವನ್ನು ಏನೋ ಒದಗಿಸುತ್ತಾರೆ. ಇದರ ಬಗ್ಗೆ ಗಮನ ಕೊಡಬೇಕಾಗಿ ಕೇಳುತ್ತೇನೆ. ಕೊನೆಯದಾಗಿ ಇವೊತ್ತಿನ ದಿವಸ ಶ್ರೀಮಾನ್ ಜಾಲಪ್ಪನವರು ರೈತರುಗಳ ಸಾಲವನ್ನು ಹೆಚ್ಚಿನ ರೀತಿಯಲ್ಲಿ ವಸೂಲ್ಮಾಡಿದ್ದಾರೆ. ಅನೇಕ ಜನಗಳ ಆಸ್ತಿಯನ್ನು ಹರಾಜು ಮಾಡಿದ್ದಾರೆ. ಇದು ಜನತಾ ಸರ್ಕಾರದ ನೀತಿ ಅಲ್ಲ. ಯಾರಿಗೆ ಅಧಿಕಾರ ಜಾಸ್ತಿ ಇದೆ, ಯಾರಿಗೆ ಹಣ ಕೊಡಲಿಕ್ಕೆ ಶಕ್ತಿ ಇದೆ ಅಂತಹವರಿಗೆ ಆದೇಶ ಕೊಡಿ. ಕೇವಲ 2-3 ಎಕರೆ ಇರುವವರನ್ನೂ ಡಿ.ಸಿ. ಅವರು ಹರಾಜು ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಶಿವನಂಜಪ್ಪನವರೇ, ಬೇಗ ಮುಗಿಸಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈಗ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಮಾನ್ಯ ಬೊಮ್ಮಾಯಿಯವರು ಧಾರವಾಡ ಜಿಲ್ಲೆ ಮಾತ್ರ ಇಡೀ ಕರ್ನಾಟಕ ಎಂದು ತಿಳಿದು ಕೊಂಡಿದ್ದಾರೆ. ಅವರು ನಮ್ಮ ಜಿಲ್ಲೆಗೆ ಬಂದಿರಲಿಲ್ಲ, ಅವರು ಬಂದಿದ್ದರೆ ನಮ್ಮ ಪರಿಸ್ಥಿತಿ ಅರ್ಥವಾಗುತ್ತಿತ್ತು. ಇವೊತ್ತಿಗೂ ನೇಗಿಲು ಹೊಡೆಯದೇ ಇರುವ ಭೂಮಿ ಬೇಕಾದಷ್ಟು ಇದೆ. ಹುಲ್ಲಿಗೆ 20 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಆಹಾರವನ್ನು ಡಿ.ಸಿ. ಅಲಾಟ್ ಮಾಡುತ್ತಾರೆ. ಯಾವ ಆಹಾರವನ್ನು ತೆಗೆದುಕೊಂಡು ಹೋಗಬೇಕು ಎಂಬ ಬಗ್ಗೆ ನಿಯಮ ಇಲ್ಲ. ಸೊಸೈಟಿಯವರಿಗೆ ಬೇರೆ ವ್ಯವಸ್ಥೆ ಮಾಡಿ ಅವರ ಮೂಲಕ ವಿತರಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ.

ಅಧ್ಯಕ್ಷರು.—ದಯವಿಟ್ಟು ಬೇಗ ಮುಗಿಸಿ.

ಶ್ರೀ ಜಿ. ಎಸ್. ಶಿವನಂಜಪ್ಪ.—129 ಬೋರ್‌ವೆಲ್‌ಗಳನ್ನು ಮಂಜೂರ್ಮಾಡಿ 4 ತಿಂಗಳಾಯಿತು. ಇವರು ಅಧಿಕಾರವನ್ನು ಕೇಂದ್ರೀಕರಣದಿಂದ ಹಿಡಿದು ವಿಕೇಂದ್ರೀಕರಣ ಮಾಡುವುದಾಗಿ ಹೇಳುತ್ತಾರೆ. ಡಿ.ಸಿ. ಅವರಿಗೆ ಅರ್ಜಿ ಕೊಟ್ಟರೆ ಒಂದು ಬೋರ್‌ವೆಲ್ ಕೂಡ ಹಾಕುವುದಿಲ್ಲ. 8 ಬಾವಿ

ಗಳಿಗೆ ಒಂದು ರಿಗ್‌ಬೋರ್ ಹಾಕುವುದಾಗಿ ಹೇಳುತ್ತೀರಿ. ಇಲ್ಲಿ 129 ಸ್ಕೇರ್ಸಿಟಿ ಹಳ್ಳಿಗಳನ್ನು ಆಯ್ಕೆ ಮಾಡಿದ್ದೀರಿ ? ಕುಡಿಯುವ ನೀರನ್ನು ಒದಗಿಸುವ ಕಾರ್ಯ ತ್ವರಿತವಾಗಿ ಆಗಬೇಕು. ಇಲ್ಲದೇ ಹೋದರೆ ಸುಮಾರು 80 ಭಾಗ ಜನ ಶಿವಮೊಗ್ಗ ಜಿಲ್ಲೆಗೋ ಅಥವಾ ಎಲ್ಲೆಲ್ಲಿಗೋ ಹೋಗುತ್ತಾರೆ. ಇದು ಬಹಳ ಗಂಭೀರವಾದ ವಿಷಯ. ಕೇವಲ ಅಂಕಿ ಅಂಶಗಳನ್ನು ನೋಡಿಕೊಂಡು ತೃಪ್ತಿಪಟ್ಟುಕೊಂಡರೆ ಸಾಲದು. ನಿಜವಾದ ಅಂಕಿ ಅಂಶಗಳನ್ನು ತರಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ನಮ್ಮ ಆತ್ಮೀಯ ಸ್ನೇಹಿತರಾದ ಕಾಂಗ್ರೆಸ್‌ನವರು ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಆಗಬೇಕೆಂದು ಹೇಳಿ ಒಂದು ವಾದವನ್ನು ಮಂಡಿಸಿದರು. ಈಗ ಚರ್ಚೆಯನ್ನು ಮಾಡುತ್ತಿದ್ದೇವೆ. The tragedy is that they try to expose us.

(Interruptions)

ಅಧ್ಯಕ್ಷರು.—ಅದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಬರಗಾಲದ ಬಗ್ಗೆ ನಮ್ಮ ಸರ್ಕಾರವನ್ನು ತಿವಿದು ಮಾತನಾಡಿದರು.

ಅಧ್ಯಕ್ಷರು.—ನೀವು ಅವರನ್ನು ರೇಗಿಸುವುದಕ್ಕೆ ಹೋಗಬೇಡಿ. ಬರಗಾಲದ ಬಗ್ಗೆ ಉತ್ತಮವಾದ ಸಲಹೆ; ಸೂಚನೆಗಳನ್ನು ಕೊಡಿ.

ಶ್ರೀ ವೇದಾಂತ ಹೆಮ್ಮಿಗೆ.—ಅವರು ಹೇಳಿದ್ದನ್ನೆಲ್ಲಾ ನಾವು ಒಪ್ಪಿಕೊಳ್ಳಬೇಕೆಂದು ಅರ್ಥ. ನಿನ್ನೆ ಧರ್ಮಸಿಂಗ್‌ರವರು ಈ ಸದನದ documentನ್ನು ಹರಿದು ಹಾಕಿದರು. It is not a paper. It is an important document of this House.

ಅಧ್ಯಕ್ಷರು.—ಅದು ನಿಯಮಕ್ಕೆ ವಿರುದ್ಧ. ನಾವು ಕ್ರಮ ತೆಗೆದುಕೊಳ್ಳಬಹುದಿತ್ತು. ಇರಲಿ ಎಂದು ಬಿಟ್ಟಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಜನತಾ ಸರ್ಕಾರ ಬಡ ರೈತರ ಬಗ್ಗೆ ಕಾಳಜಿ ಹೊಂದಿದೆ, ಜನತಾ ಸರ್ಕಾರ ರೈತರ ಬಗ್ಗೆ ತೆಗೆದುಕೊಂಡಿರುವ ಕ್ರಮ ಪ್ರಾಮಾಣಿಕವಾದ ಪ್ರಾರಂಭದ ಒಂದು ದಾಖಲೆ ಎಂದು ಹೇಳಬಹುದು, ಸರ್ಕಾರ ಪ್ರಾಮಾಣಿಕತೆಯಿಂದ ಬರಗಾಲ ಪರಿಸ್ಥಿತಿಯಲ್ಲಿ ಕೆಲಸ ಮಾಡಿದೆ, ಸರ್ಕಾರ ನಿದ್ದೆ ಮಾಡಿಲ್ಲ. ಸರ್ಕಾರ ಬಡವರ ಹತ್ತಿರ ಹೋಗಿದೆ ಎನ್ನುವುದಕ್ಕೆ ಈ ಡಾಕ್ಯುಮೆಂಟ್‌ನಲ್ಲಿ ಹೇಳಿದೆ.

2-30 p.m.

ಸ್ವಾಮಿ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಾವು ಇದಕ್ಕಾಗಿ ಕೇಂದ್ರ ಸರ್ಕಾರವನ್ನು 89 ಕೋಟಿ ರೂಪಾಯಿಯನ್ನು ಕೊಡಬೇಕು ಎಂದು ಕೇಳಿದೆವು. ಅವರು ಕೊಟ್ಟಿದ್ದುದು ಎಷ್ಟು 22.16 ಕೋಟಿ ರೂಪಾಯಿಗಳು ಮಾತ್ರ. ಬಡವರ ಬಗ್ಗೆ ಕಾಳಜಿ ಇರತಕ್ಕಂಥಾ ಕೇಂದ್ರ ಸರ್ಕಾರ ಬಡ ರೈತರನ್ನು ಉದ್ಧಾರ ಮಾಡತಕ್ಕಂಥ ಸರ್ಕಾರ, ಹರಿಜನರನ್ನು ಉದ್ಧಾರ ಮಾಡತಕ್ಕಂಥ ಸರ್ಕಾರ ನಮಗೆ ಕೊಟ್ಟ ಹಣ ಎಷ್ಟು ? 22.16 ಕೋಟಿ ರೂಪಾಯಿಗಳು ಮಾತ್ರ. ಈ ಅಭಾವ ಪೀಡಿತ ಗ್ರಾಮೀಣ ಪ್ರದೇಶಗಳಲ್ಲಿನ ಒಟ್ಟು ಜನಸಂಖ್ಯೆ 142.63 ಲಕ್ಷ ಇದ್ದು, ಸಣ್ಣ ಮತ್ತು ಅತಿ ಸಣ್ಣ ವರ್ಗದ ರೈತ ಕುಟುಂಬಗಳ ಸಂಖ್ಯೆ 13.42 ಲಕ್ಷ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳ ಸಂಖ್ಯೆ 19.28 ಲಕ್ಷ ಆಗಿತ್ತು. ಇದಕ್ಕಾಗಿ ನಮ್ಮ ಜನತಾ ಸರ್ಕಾರ ಕೇಂದ್ರ ಸರ್ಕಾರದ ನೆರವನ್ನು ಕೇಳಿದ್ದು, ಉದ್ಯೋಗ ನಿರ್ಮಾಣಕ್ಕಾಗಿ 38 ಕೋಟಿ ರೂಪಾಯಿಗಳು, ಗ್ರಾಮೀಣ ನೀರು ಪೂರೈಕೆಗೆ 29.77 ಕೋಟಿ ರೂಪಾಯಿಗಳು, ನಗರ ಪೂರೈಕೆಯ ಆಹಾರ ಧಾನ್ಯಗಳ ಪೂರೈಕೆ, ಮೇವು ಪೂರೈಕೆ ಮತ್ತು ಪಶು ವೈದ್ಯಕೀಯ ರಕ್ಷಣೆ, ಕೃಷಿ ಪರಿಸರಗಳು ಇತ್ಯಾದಿಗಳಿಗಾಗಿ ಒಟ್ಟು 89 ಕೋಟಿ ರೂಪಾಯಿಗಳನ್ನು ಕೇಳಿದ್ದಕ್ಕೆ ಅವರು ಕೊಟ್ಟಿದ್ದು ಎಷ್ಟು 22.16 ಕೋಟಿ ರೂಪಾಯಿಗಳು ಮಾತ್ರ. ಅವರು ನಾವು ಕೇಳಿದ್ದರಲ್ಲಿ ಕಾಲು ಭಾಗದಷ್ಟು ಮಾತ್ರ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂಥ ಅಷ್ಟು ಹಣದಲ್ಲೆ ಇಷ್ಟೆಲ್ಲಾ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ಪ್ರಶ್ನೆ ನಾನು ಹಾಕುತ್ತೇನೆ. ನನ್ನ ಪ್ರಮುಖವಾದ ಪ್ರಶ್ನೆ ಏನೆಂದರೆ 1984-85ರಲ್ಲಿ 14604 ಕೊರೆ ಬಾವಿಗಳನ್ನು 32 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತೋಡಲಾಗಿದ್ದರೆ, ಪ್ರಸ್ತುತ ವರ್ಷದಲ್ಲಿ ಜೂನ್ ತಿಂಗಳ ಅಂತ್ಯದ ವೇಳೆಗೆ 3.52 ಕೋಟಿ ರೂಪಾಯಿ ವೆಚ್ಚದಲ್ಲಿ ಇನ್ನೂ 1500 ಕೊರೆ ಬಾವಿಗಳನ್ನು ತೋಡಿದ್ದಾರೆ. ನಾವು ಇದರ ಬಗ್ಗೆ ಏನು ಕೆಲಸ ಮಾಡಿದ್ದೇವೆ ಅದಕ್ಕೆ ನಮ್ಮ ಸ್ನೇಹಿತರು ಮೆಚ್ಚುಗೆ ಕೊಡಬೇಕಾಗಿತ್ತು. ಅವರು ಮಾತನಾಡಿದ ಧಾಟಿ ನೋಡಿದರೆ ಈ ಸರ್ಕಾರ ಬಡವರ ಬಗ್ಗೆ ಏನೂ ಕೆಲಸ ಮಾಡಲಿಲ್ಲ ಎನ್ನುವ

ಮಾತನ್ನು ಹೇಳಿದ್ದಾರೆ. ಇದರಲ್ಲಿ ಇನ್ನೊಂದು ವಿಶೇಷ ಏನೆಂದರೆ, ವಿಶೇಷವಾಗಿ ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಆಹಾರ ಧಾನ್ಯಗಳನ್ನು ಸರಬರಾಜು ಮಾಡಿದ್ದೇವೆ. 1-4-1984ರಂದು ಒಟ್ಟು 11,432 ನ್ಯಾಯ ಬೆಲೆಯ ಅಂಗಡಿಗಳಿದ್ದು ಮತ್ತು ಅಲ್ಲಿಂದೀಚೆಗೆ ಇನ್ನೂ ಹೆಚ್ಚಿಗೆಯಾಗಿ 719 ಅಂಗಡಿಗಳನ್ನು ತೆರೆಯಲಾಗಿದೆ. ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ ಕಾರ್ಯಕ್ರಮದ ಮೇರೆಗೆ ಈ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಸರಬರಾಜು ಮಾಡುವ ಸಲುವಾಗಿ 2452.56 ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ವಾಸ್ತವವಾಗಿ 1985-86ನೇ ಸಾಲಿಗೆ ಭಾರತ ಸರ್ಕಾರದವರು ಮಂಜೂರು ಮಾಡಿದ 22.16 ಕೋಟಿ ನೆರವಿನ ಪರಿಮಿತಿ (ಸೀಲಿಂಗ್)ಯಲ್ಲಿ ಈವರೆಗೆ 10 ಕೋಟಿ ರೂಪಾಯಿಗಳನ್ನು ಮಾತ್ರ ಮುಂಗಡವೆಂದು (ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್) ಎಂದು ಬಿಡುಗಡೆ ಮಾಡಿದೆ. ಇಷ್ಟು ಹಣ ಕೊಟ್ಟಿದ್ದರೂ ಕೂಡ ನಮ್ಮ ಸರ್ಕಾರ ಧೈರ್ಯ ತೆಗೆದುಕೊಂಡು 22.16 ಕೋಟಿ ರೂಪಾಯಿಗಳಷ್ಟು ಹಣವನ್ನು ಈ ಬಾಬಿನ ಖರ್ಚಿಗಾಗಿ ಬಿಡುಗಡೆ ಮಾಡಿದೆ. ವಸ್ತು ಸ್ಥಿತಿ ಹೀಗಿದ್ದರೂ ಕೂಡ ಈ 22.16 ಕೋಟಿ ರೂಪಾಯಿಗಳ ಹಣವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಇಲಾಖಾ ಮುಖ್ಯಸ್ಥರಿಗೆ ಕೊಟ್ಟು ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗುವ ಹಾಗೆ ಈಗಾಗಲೇ ಹೇಳಿದ್ದಾರೆ. ನಾನು ಈ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮಳೆ ಬಂದಾಗ ಛತ್ರಿ ಹಿಡಿಯುವ ಬದಲು ಕರ್ನಾಟಕದಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಇಂತಹ ಬರಗಾಲ ಬರುತ್ತದೆ ಎನ್ನುವ ಒಂದು 10 ವರ್ಷದ ಒಂದು ಅಂದಾಜು ಇಟ್ಟುಕೊಂಡು ಸರ್ವೆ ಮಾಡಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಯೋಜನೆ ಮಾಡಿದರೆ ಒಳ್ಳೆಯದು. ಇದರ ಬಗ್ಗೆ ಅರ್ಥಿಕ ತಜ್ಞರನ್ನೂ ಕೇಳಿ 100 ಕೋಟಿ ರೂಪಾಯಿಗಳ ಬರಗಾಲ ಪರಿಹಾರ ನಿಧಿಯೊಂದನ್ನಾದರೂ ಮಾಡಿ ಅವರ ಕಷ್ಟವನ್ನು ಹೋಗಲಾಡಿಸುವಂತೆ ಮಾಡಿದರೆ ಒಳ್ಳೆಯದು. ಆವಾಗ ಕಷ್ಟ ಬಂದಾಗ ಮತ್ತೊಬ್ಬರನ್ನು ಕೈಚಾಚುವ ಪರಿಸ್ಥಿತಿಗೆ ಬರುವುದಿಲ್ಲ. ನಮ್ಮ ಎದುರುಗಡೆ ಸ್ನೇಹಿತರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಏನೆಂದರೆ, ನಮ್ಮ ನಮ್ಮಲ್ಲೇ ಜಗಳ ಆಡುವುದು ಬೇಡ. ಗಂಡ ಹೆಂಡಿರ ಜಗಳದಿಂದ ಕೂಸು ಬಡವಾಯಿತು ಎನ್ನುವ ಹಾಗೆ ನಾವು ಮಾಡಿಕೊಳ್ಳುವುದು ಬೇಡ. ನಾವೂ ನೀವೂ ಎಲ್ಲರೂ ಈ ಬಗ್ಗೆ ಕೇಂದ್ರ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳೋಣ. ಇದರಲ್ಲಿ ಆ ಪಕ್ಷ ಈ ಪಕ್ಷ ಅನ್ನುವುದು ಬೇಡ. ಬಡವರ ಬಗ್ಗೆ ಖಾಜಿ ಇರತಕ್ಕಂಥ ನಾವೆಲ್ಲರೂ ಕೂಡ ಕೇಂದ್ರ ಸರ್ಕಾರವನ್ನು ಈ ಬಡವರ ಕೆಲಸಕ್ಕಾಗಿ ಹಣ ಕೊಡಬೇಕು ಎಂದು ಕೇಳಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇದರ ಬಗ್ಗೆ ಮಾಸ್ಟರ್ ಪ್ಲಾನ್ ಎಂದು ಏನು ಹೇಳಿದರು ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ಜಾರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ, ಮಾನ್ಯ ಸಚಿವರು ಈ ಬಗ್ಗೆ ಏನೊಂದು ಹೇಳಿಕೆ ಈ ಸದನದಲ್ಲಿ ಇಟ್ಟಿದ್ದಾರೆ ಅದಕ್ಕೆ ಸ್ವಾಗತ ನೀಡಿ, ಸರ್ಕಾರ ಇದರ ಬಗ್ಗೆ ಮೆಚ್ಚುಗೆಯಿಂದ ಬಹಳ ಕೆಲಸ ಮಾಡಿದೆ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

* ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸರ್ಕಾರ ಏನು ಒಂದು ಹೇಳಿಕೆ ಕೊಟ್ಟಿದೆಯೋ, ಅದರಲ್ಲಿ ಈ ಸ್ಕೇರ್ಸಿಟಿ ಬಗ್ಗೆ ಏನು ಒಂದು ಅಂಕಿ ಅಂಶ ಅಂತ ಇದೆಯೋ ಇದು ಸತ್ಯಕ್ಕೆ ಗೂರವಾದುದು ಎಂದು ನನಗೆ ಅನ್ನಿಸುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನನ್ನ ಕ್ಷೇತ್ರದಲ್ಲಿ ಅದರಲ್ಲೂ ಸಂಡೂರು ತಾಲ್ಲೂಕಿನಲ್ಲಿ ಸ್ಕೇರ್ಸಿಟಿ ಮೀಟಿಂಗ್‌ನಲ್ಲಿ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಹೇಳಿದೆ. ಆ ಭಾಗದ ಜನರಿಗೆ ಕೃಷಿ ಕಾರ್ಮಿಕರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಅಧಿಕಾರಿಗಳನ್ನು ಹೋಗಿ ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ ಸರ್ಕಾರಕ್ಕೆ ಬರೆದು ಹಣ ತರಿಸಿಕೊಡುತ್ತೇವೆ, ಹೆಚ್ಚಿನ ಕೆಲಸಗಳನ್ನು ಕೊಡುತ್ತೇವೆ ಎಂದು ಮಾತ್ರ ಹೇಳುತ್ತಾರೆ. ಇದೇ ರೀತಿಯಾಗಿ ಜಿಲ್ಲಾಭಿವೃದ್ಧಿ ಸಭೆಯಲ್ಲೂ ಕೂಡ ಈ ಸ್ಕೇರ್ಸಿಟಿ ಒಳಗೆ ಬರತಕ್ಕಂಥ ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ., ಡಿ.ಪಿ.ಎ.ಪಿ. ಯಲ್ಲಿ ಬರತಕ್ಕಂಥ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಪ್ರಸ್ತಾಪ ಮಾಡಿದ್ದೇವೆ. ಮುಖ್ಯವಾಗಿ ಹೇಳಬೇಕಾದರೆ ಜಿಲ್ಲಾಧಿಕಾರಿಯವರು ಇದಕ್ಕೆಲ್ಲಾ ಖರ್ಚು ಮಾಡುವುದಕ್ಕೆ ಹಣ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ಹಣ ಇಲ್ಲ ಎನ್ನುವುದಾದರೆ ಈ ಬಗ್ಗೆ ಜಿಲ್ಲಾಭಿವೃದ್ಧಿ ಕೈಗಾರಿಕಾ ಸಂಸ್ಥೆಯವರು ಏನು ಒಂದು ವರದಿ ಕೊಟ್ಟಿದ್ದಾರೆ ಅವರು ಏನೊಂದು ನೋಟ್ ಬರೆದಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. All the Bills are submitted to the Treasury but not encashed ಎಂದು ಕೊಟ್ಟಿದ್ದಾರೆ. ಅವರು ಏತಕ್ಕೆ ಹೀಗೆ ಬರೆದಿದ್ದಾರೆ ಎಂದು ನಾನು ಕೇಳುತ್ತೇನೆ. ನೀವು ಇಲ್ಲಿ ಕೊಟ್ಟಿರತಕ್ಕಂಥ ವರದಿ ನೋಡಿದರೆ ರೈತರಿಗೆ

ಅತಿ ಸಣ್ಣ ರೈತರಿಗೆ ಬೀಜ ಗೊಬ್ಬರ ಇವೆಲ್ಲವನ್ನೂ ಕೊಟ್ಟಿದ್ದೇವೆ ಎಂದು ಇದೆ. ಅಲ್ಲಿ ನಾನು ಹೋಗಿ ನೋಡಿದರೆ ಯಾವ ಕೆಲಸವೂ ನಡೆಯುತ್ತಾ ಇಲ್ಲ. ಯಾರಿಗೂ ಏನೂ ಕೊಡುತ್ತಾ ಇಲ್ಲ. ನಾನು ಇಲ್ಲಿಗೆ ಬರುವುದಕ್ಕೆ ಎರಡು ದಿವಸಕ್ಕೆ ಮುನ್ನ ಅಸಿಸ್ಟೆಂಟ್ ಡೈರಕ್ಟರ್ ಆಫ್ ಅಗ್ರಿಕಲ್ಚರಲ್ ಅವರ ಜೊತೆಯಲ್ಲಿ ಹಳ್ಳಿಗಳಿಗೆ ಹೋಗಿ ಭೇಟಿ ಮಾಡಿದಾಗ ಹಳ್ಳಿಯವರನ್ನು ಕರೆಯಿಸಿ, ಪ್ರತ್ಯೇಕವಾಗಿ ಕಂಡು ಮಾತನಾಡಿದರೆ, ಈ ಹಂಚಿಕೆಯಾಗತಕ್ಕಂಥ ಬೀಜ ಗೊಬ್ಬರ ಇವೆಲ್ಲವೂ ಕೂಡ ಶ್ರೀಮಂತರಿಗೆ ಹೋಗುತ್ತಾ ಇದೆ ಎಂದು ಹೇಳಿದರು. ಈ ವಿಷಯವನ್ನು ಈ ಸಭೆಯ ಗಮನಕ್ಕೆ ನಾನು ತರಬಯಸುತ್ತೇನೆ. ಹೀಗೆ ಇರುವಾಗ ಕೇಂದ್ರದಿಂದ 89 ಕೋಟಿ ರೂಪಾಯಿಗಳ ಸಹಾಯ ಇದಕ್ಕಾಗಿ ಕೇಳಿದ್ದೇವೆ ಎಂದು ಏನು ಹೇಳಿದ್ದೀರಿ ಇದನ್ನು ನಮ್ಮ ರಾಜ್ಯ ಪಡೆಯುವುದಕ್ಕೆ ನಾವು ಕೂಡ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ಇದರ ಬಗ್ಗೆ ಕೇಂದ್ರ ಸರ್ಕಾರ ಒಂದು ರೀತಿಯಲ್ಲಿ ಅನ್ಯಾಯ ಮಾಡುತ್ತಾ ಇದೆ ಎನ್ನುವ ಅಭಿಪ್ರಾಯವನ್ನು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಛೇರ್ಮನ್ : ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಪೀಠವನ್ನು ಅಲಂಕರಿಸಿದರು)

ಒಟ್ಟಿನಲ್ಲಿ ಈ ವರದಿಯಲ್ಲಿ ನೋಡುವುದಾದರೆ ಹೆಚ್ಚು ಹೆಚ್ಚಾಗಿ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಹಣ ಖರ್ಚು ಮಾಡಿದ್ದಾರೆ. ಬಹಳಷ್ಟು ಕಡೆ ಹಳ್ಳಿಗಳಲ್ಲಿ ನೀರಿನ ಅಭಾವ ಎದ್ದು ಕಾಣುತ್ತಾ ಇಲ್ಲ. ಆದರೆ ದನಗಳ ಮೇವಿಗೆ ಬಹಳ ಕಷ್ಟ ಇದೆ. ದನಗಳ ಮೇವಿನ ಅಭಾವ ಎದ್ದು ಕಾಣುತ್ತಾ ಇದೆ. ನಾನು 16ನೇ ತಾರೀಖು ಚಿಕ್ಕಂದೂರು ಗ್ರಾಮಕ್ಕೆ ಭೇಟಿ ಮಾಡಿದಾಗ ಅಲ್ಲಿನ ಜನಗಳು ಹೇಳಿದರು ಮೇವಿನ ಅಭಾವದಿಂದ ಕೆಲವು ದನಗಳು ತೀರಿಹೋಗಿವೆ ಎಂದು. ಸರ್ಕಾರ ಈ ದನಗಳ ಮೇವಿನ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಈ ದನಗಳ ಮೇವಿನ ಬಗ್ಗೆ ರಫ್ತು ಮಾಡುವುದನ್ನು ನಿಷೇಧ ಮಾಡಿದ್ದೇವೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಆಗ 500 ಟನ್ ಅಷ್ಟು ಹುಲ್ಲನ್ನು ದನಗಳಿಗೆ ಒದಗಿಸುವ ವ್ಯವಸ್ಥೆ ಮಾಡಿ ಒಂದು ಕೆ.ಜಿ.ಗೆ 1-50 ಪೈಸೇಯಂತೆ ದರ ಇಟ್ಟಿದ್ದರು. ಆ ಹುಲ್ಲನ್ನು ನೋಡಿದರೆ ಅದರ ಮೇಲೆ ಸಿಡುಬಿನ ಮುಳ್ಳು ಇದ್ದ ಹಾಗೆ ಇತ್ತು. ಅದನ್ನು ದನಗಳು ತಿನ್ನಲಾರದ ರೀತಿಯಲ್ಲಿತ್ತು. ಇವರು ಈ ಹುಲ್ಲನ್ನು ಸರಬರಾಜು ಮಾಡುವಾಗ ಫ್ರೀ ಡಿಸ್ಟ್ರಿಬ್ಯೂಷನ್ ಎಂದು ಹೇಳುತ್ತಾರೆ, ಆದರೆ ಅದರ ಟ್ರಾನ್ಸ್‌ಪೋರ್ಟ್ ಛಾರ್ಜನ್ನು ಕೊಡುವರ್ಯಾರು ? ಒಂದು ಸಾರಿ ಲಾರಿಯಲ್ಲಿ ಹುಲ್ಲು ಬಂದಾಗ ನಾನೇ ಹೇಳಿ ಆ ಲಾರಿಯನ್ನು ಹಿಡಿಯಬೇಡಿ, ಅದು ಹಳ್ಳಿಗೆ ಹೋಗಲಿ ಎಂದು ಕಳುಹಿಸಿದೆ. ಕೆಲವು ಕಡೆ 4–5 ಟನ್ನುಗಳಷ್ಟು ಹುಲ್ಲನ್ನು ಒದಗಿಸುತ್ತಾರೆ. ಆ ಹುಲ್ಲಿನಲ್ಲಿ ಸಿಡುಬಿನ ಮುಳ್ಳು ಇರುವುದರಿಂದ ಆ ದನಗಳು ಅದನ್ನು ತಿಂದು ಸಾಯುತ್ತವೆ. ನಾನು ಉದಾಹರಣೆಗೆ ಮಾತ್ರ ಇದು ಒಂದನ್ನು ಹೇಳಿದೆ. ಈ ಹುಲ್ಲಿನಲ್ಲಿ ಮಣ್ಣು, ಕಲ್ಲು, ಎಲ್ಲಾ ಇರುತ್ತದೆ. ಇದನ್ನು ದನಗಳು ತಿನ್ನಬೇಕಾಗಿದೆ. ದನಗಳು ಹಾಕಿದ ಸಗಣಿಯಲ್ಲಿ ಕಲ್ಲು ಎಲ್ಲಾ ಇರುತ್ತದೆ. ಸರ್ಕಾರದವರು ಮೇವಿನ ಸರಬರಾಜಿಗಾಗಿ ಇಷ್ಟು ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದಾರೆ ಎಂದು ಸ್ಟೇಟ್‌ಮೆಂಟಿನಲ್ಲಿ ಮಾನ್ಯ ಬೊಮ್ಮಾಯಿಯವರು ಹೇಳುತ್ತಿದ್ದಾರೆ. ಇದರ ಜೊತೆಗೆ ಆಹಾರ ಧಾನ್ಯಗಳ ಸರಬರಾಜು ಇದೆ. ಮಾನ್ಯ ಸದಸ್ಯರೊಬ್ಬರು ಹೇಳುತ್ತಾ ಇದ್ದರು, ಎಲ್ಲಾ ಸೊಸೈಟಿಗಳು ಡೀಫಂಕ್ಟ್ ಆಗಿವೆ, ಆಹಾರ ಧಾನ್ಯಗಳ ಸರಬರಾಜನ್ನು ಹೇಗೆ ಮಾಡುತ್ತಿದ್ದೀರಿ ಎಂದು. ಹಳ್ಳಿಗಳಲ್ಲೂ ಇದೇ ಮಾತು ಇದೆ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ ಹಲವಾರು ನ್ಯಾಯ ಬೆಲೆ ಅಂಗಡಿಗಳಲ್ಲಿ ಧಾನ್ಯ, ಕಾಳು ಇಲ್ಲ ; ಹೇಗೆ ಮಾಡುತ್ತೀರಿ ಎಂದು ನಾನೂ ಕೇಳಬೇಕಾಗಿದೆ. ಹಣವೇ ಇರಲಾರದಂಥ ಸೊಸೈಟಿಗಳಲ್ಲಿ ಧಾನ್ಯವನ್ನು ಹೇಗೆ ಕೊಡುತ್ತಾರೆ ? ಅಂತಹ ಸೊಸೈಟಿಗಳಿಗೆ ಸಾಲದ ರೂಪವಾಗಿ ಧಾನ್ಯಗಳನ್ನು ಏಕೆ ಸರಬರಾಜು ಮಾಡಬಾರದು. ಅವರು ಮುಂದಿನ ಕಂತುಗಳಲ್ಲಿ ತೀರಿಸ್ತಾರೆ. ಆಗ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಕೃಷಿ ಕಾರ್ಮಿಕರಿಗೆ ಕಡಿಮೆ ಬೆಲೆಯಲ್ಲಿ ದವಸ ಧಾನ್ಯಗಳನ್ನು ಖರೀದಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸದನದ ಮುಂದೆ ಈ ಅಭಿಪ್ರಾಯವನ್ನು ನಾನು ಮಂಡಿಸುವುದಕ್ಕೆ ಇಚ್ಛೆಪಡುತ್ತೇನೆ. ಆರ್.ಎಲ್.ಇ.ಜಿ.ಪಿ., ಎನ್.ಆರ್.ಇ.ಪಿ. ಕೆಳಗೆ ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಜೋಳ್ಳೂರಿನಲ್ಲಿ ಕಾಳಂಗೇರಿ ಹಳ್ಳಿಗೆ ಸೇರಿದಂತೆ ಮೂರೂವರೆ ಲಕ್ಷದ ರೋಡಿನ ಕೆಲಸವನ್ನು ತೆಗೆದುಕೊಂಡಿದ್ದಾರೆ. ನಾನು ಶಾಸಕನಾದಂದಿನಿಂದಲೂ ನೋಡುತ್ತಿದ್ದೇನೆ. ಯಾರೂ ಅಲ್ಲಿ ಕಲ್ಲು ಹಾಕುತ್ತಾ ಇಲ್ಲ. ಸಂಬಂಧಪಟ್ಟ ಇಂಜನಿಯರನ್ನು ಕೇಳಿದರೆ ಸರ್ಕಾರ ಹಣ ಕೊಟ್ಟಿಲ್ಲ, ಕೊಟ್ಟ ಮೇಲೆ ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ಕಾಮಗಾರಿಗಳನ್ನು ಪ್ರಾರಂಭಮಾಡಿದ್ದೇವೆ, ಹಳ್ಳಿಯಲ್ಲಿರತಕ್ಕ ಕೃಷಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸುತ್ತೇವೆ ಎಂದು ಕೊಟ್ಟಿರುವ ಹೇಳಿಕೆ ಏನಿದೆ ಅದು ಸತ್ಯಕ್ಕೆ ದೂರವಾದುದಲ್ಲವೇ ? ಆರ್.ಎಲ್.ಇ.ಜಿ.ಪಿ.ಯಲ್ಲಿ ಕೆಲಸ ಏನಿದೆ ಅದು ಯಾರೋ ಇಂಜನಿಯರ್‌ಗೆ ಸಂಬಂಧಪಟ್ಟ ಕೆಲಸ, ಅದಕ್ಕೆ ಸಂಬಂಧಪಟ್ಟ

ಕಂಟ್ರಾಕ್ಟರ್ ನಾಪತ್ತೆಯಾಗಿದ್ದಾರೆ. ಅವನ ಕೈಕೆಳಗೆ 8 ಜನ ಕೆಲಸ ಮಾಡುತ್ತಾರೆ. ಅವರು ಯಾವಾಗ ಕೆಲಸ ಮಾಡುತ್ತಾರೋ ಗೊತ್ತಿಲ್ಲ. ಬಿಲ್ ಬರುತ್ತದೆ, ಹಣ ತೆಗೆದುಕೊಳ್ಳುತ್ತಾರೆ, ಕೆಲಸ ಮಾತ್ರ ಆಗುವುದಿಲ್ಲ. ಒಂದು ಕಡೆ ಜನಗಳು ಸಾಯುತ್ತಾರೆ, ಇನ್ನೊಂದು ಕಡೆ ದನಗಳು ಮೇವಿಲ್ಲದೆ ಸಾಯುತ್ತಾ ಇವೆ. ನಿನ್ನೆ ಕನ್ನಡ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಬಳ್ಳಾರಿಯಲ್ಲಿ ಮೇವಿಲ್ಲದೆ ಜಾನುವಾರುಗಳನ್ನು ಕಸಾಯಿಖಾನೆಗೆ ಮಾರಾಟ ಮಾಡುತ್ತಿದ್ದಾರೆ ಎಂದು. ಒಂದು ಸಾವಿರ ರೂಪಾಯಿಗಳ ಬೆಲೆ ಬಾಳತಕ್ಕ ಜಾನುವಾರನ್ನು ನೂರು, ಇನ್ನೂರು ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ; ಕಳೆದ ವರ್ಷ ಈ ರೀತಿ ಮಾಡಿರಬಹುದು. ಪ್ರತಿ ದಿವಸ ಒಂದು ಲಾರಿಯಲ್ಲಿ 500 ಕೆ.ಜಿ. ಯಷ್ಟು ಮಾಂಸವನ್ನು ಬೊಂಬಾಯಿಗೆ ಸರಬರಾಜು ಮಾಡಿದರು ಎಂದು ಅದರಲ್ಲಿ ಹೇಳಿದೆ. ಅದು ಬೊಂಬಾಯಿಂದ ಮುಸ್ಲಿಂ ರಾಷ್ಟ್ರಗಳಿಗೆ ಹೋಗುತ್ತದೆ. ಬಳ್ಳಾರಿಯಿಂದ ಬೇರೆ ಕಡೆಗೆ ಹೋಗುತ್ತದೆ. ಜಾನುವಾರುಗಳನ್ನು ಕಟ್ ಮಾಡಬೇಕಾದರೆ ಮುನಿಸಿಪಲ್ ಆಕ್ಟ್ ಪ್ರಕಾರ ಕಟ್ ಮಾಡಬೇಕು ಎಂದು ಇದೆ. ಅಲ್ಲಿರತಕ್ಕ ವೆಟರ್ನರಿ ಡಾಕ್ಟರುಗಳಿಗೆ ರಾತ್ರಿ 7–8 ಗಂಟೆಯ ನಂತರ ಲಂಚ ಸಿಗುತ್ತದೆ. ಒಂದು ಕಡೆ ದನಗಳಿಗೆ ಮೇವು ಇಲ್ಲ, ಇನ್ನೊಂದು ಕಡೆ ದನಗಳನ್ನು ಕುಡಿಯುವುದನ್ನು ತಡೆಯತಕ್ಕ ಕಾರ್ಯಕ್ರಮ ಸರ್ಕಾರದಲ್ಲಿಲ್ಲ : ಕಾರ್ಯಕ್ರಮವಿದ್ದರೂ ಅಧಿಕಾರಿಗಳು ಅವರ ಮಾತನ್ನು ಕೇಳುವುದಿಲ್ಲ, ಐ.ರ್.ಡಿ.ಪಿ. ಕೆಳಗೆ ಇರತಕ್ಕಂಥ ಸ್ಕೀಮಿನಲ್ಲಿ ಪಾವರ್ಟಿಲೈನ್‌ಗಿಂತ ಕೆಳಗೆ ಇರುವವರು ಮೇಲೆ ಬರಬೇಕು ಎಂದು ಹೇಳುತ್ತೀರಿ. ಆದರೆ ದನಗಳಿಗೆ ಮೇವಿಲ್ಲದೆ ಮಾಂಸಕ್ಕಾಗಿ ಅವರು ದನಗಳನ್ನು ಅನಿವಾರ್ಯವಾಗಿ ಮಾರಾಟ ಮಾಡಿಕೊಳ್ಳುತ್ತಾ ಇದ್ದಾರೆ, ಇದರ ಬಗ್ಗೆ ಸರ್ಕಾರದವರು ಗಮನಹರಿಸಿ ಆದಷ್ಟುಬೇಗ ಮೇವಿನ ಸರಬರಾಜನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕು. ಆದರೆ ಮೇವನ್ನು ಕೊಟ್ಟಿದೆ ಎಂದು ಹೇಳಿ ಗುಡಿಸಲಿಗೆ ಹಾಕತಕ್ಕ ಹುಲ್ಲನ್ನು ಕೊಟ್ಟರೆ ಆಗುವುದಿಲ್ಲ. ಜೋಳದ ಸೊಪ್ಪು ನವಣೆ ಹುಲ್ಲು ಅಥವಾ ಭತ್ತದ ಹುಲ್ಲನ್ನು ರಸಬರಾಜು ಮಾಡಬೇಕು. ನಮ್ಮ ರಾಜ್ಯದಲ್ಲಿ ಎಲ್ಲಿ ಇದು ಸಿಗುತ್ತದೋ ಅಂತಹ ಸಿಗುವ ಕಡೆಯಿಂದ ತರಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮೇವು ಎಲ್ಲಿದೆ ?

ಶ್ರೀ ಯು. ಭೂಪತಿ.—ನಮ್ಮ ರಾಜ್ಯದಲ್ಲಿ ರಫ್ತು ಆಗುವುದನ್ನು ತಡೆದಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಲ್ಲಿ ಒಂದು ವಿನಂತಿಮಾಡಿಕೊಳ್ಳುತ್ತೇನೆ. ನಾವು ಹೇಳಿಕೆಯಲ್ಲಿ ಹೇಳಿರುವುದು ಮತ್ತು ಈ ಹಿಂದೆ 1984ರ ಸಮಯದಲ್ಲಿ ಇದ್ದಂಥ ಬರಗಾಲದ ಪರಿಸ್ಥಿತಿಯಲ್ಲೂ ನಮ್ಮಲ್ಲಿರತಕ್ಕಂಥ ಮೇವು ಹೊರಗಡೆ ಹೋಗುತ್ತಿದ್ದುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮಹಾರಾಷ್ಟ್ರ ಬಾರ್ಡರ್ ಅಂದರೆ ಅಥಣಿ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದ ಜೋಳದ ಕಡ್ಡಿಯನ್ನು ನಿಲ್ಲಿಸುವ ಪ್ರಯತ್ನ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಹೋದವರ್ಷ ಏನು ಪರಿಸ್ಥಿತಿ ಉಂಟಾಗಿತ್ತು, ಈ ವರ್ಷ ಅದು ಇನ್ನೂ ಬಿಗಡಾಯಿಸತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಹೋದವರ್ಷ 19 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಬರಗಾಲವಿತ್ತು. ಮೇವನ್ನು ತಂದು ಕೊಡಿ ಎಂದರೆ ಮೇವು ಸಿಗತಕ್ಕ ಪ್ರದೇಶಗಳಾದ ಮಂಡ್ಯ, ಹಾಸನದ ಕೆಲವು ಭಾಗಗಳು, ಶಿವಮೊಗ್ಗದ ಕೆಲವು ಭಾಗಗಳನ್ನು ಬಿಟ್ಟರೆ, ದಾವಣಗೆರೆ, ಹರಿಹರದ ಕೆಲವು ಭಾಗಗಳನ್ನು ಬಿಟ್ಟರೆ ನೆಲ್ಲು ಹುಲ್ಲು ಬೇರೆ ಭಾಗಗಳಲ್ಲಿ ಸಿಕ್ಕಿದರೂ ಅವರವರಿಗೇ ಪೂರೈಕೆಯಾಗುತ್ತಿದೆ. ಇನ್ನೆಲ್ಲಿ ಹುಲ್ಲು ಸಿಗುತ್ತದೆ? ಇದು ನಾವು ಕಾಣತಕ್ಕ ಪರಿಸ್ಥಿತಿ. ಇನ್ನು ಬೇರೆ ರಾಜ್ಯಗಳಿಂದ ಇದನ್ನು ತರಿಸಿ ಕೊಡತಕ್ಕ ಪ್ರಶ್ನೆ ಇದೆ. ಆಂಧ್ರದಲ್ಲಿ ಕೇಳಿದಾಗ ಅಲ್ಲಿಯೂ ಬರಗಾಲ, ಮಹಾರಾಷ್ಟ್ರದಲ್ಲಿಯೂ ಬರಗಾಲವಿದೆ. ತಮಿಳುನಾಡಿನಲ್ಲಿ ಕೇಳಿದರೂ ಅಲ್ಲಿಂದಲೂ ಇದು ಬರತಕ್ಕ ಸನ್ನಿವೇಶ ಕಾಣಲಿಲ್ಲ. ಇದು ವಸ್ತುನಿಷ್ಠವಾದಂಥ ಪರಿಸ್ಥಿತಿ. ಆ ಒಂದು ಹಿನ್ನೆಲೆಯಲ್ಲಿ ತಾವು ನೋಡಬೇಕು. ನಾವು ಹೊರಗಡೆ ಹೋಗುತ್ತಿದ್ದುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದು ಇರತಕ್ಕಂಥ ಪರಿಸ್ಥಿತಿ. ಈ ಆಧಾರದ ಮೇಲೆ, ವಸ್ತುನಿಷ್ಠವಾದಂಥ ಆಧಾರದ ಮೇಲೆ, ತಾವು ಏನಾದರೂ ಸಲಹೆ ಸೂಚನೆಗಳನ್ನು ಕೊಡಿ, ಎಲ್ಲಾದರೂ ಹುಲ್ಲು ಸಿಗುವ ಹಾಗಿದ್ದರೆ ಅಲ್ಲಿಂದ ತರಿಸತಕ್ಕ ಸರ್ವ ಪ್ರಯತ್ನವನ್ನೂ ನಾವು ಮಾಡುತ್ತೇವೆ.

ಶ್ರೀ ಕೆ.ಹೆಚ್. ಪಾಟೀಲ್.—155 ತಾಲ್ಲೂಕುಗಳಲ್ಲಿ ಬರಗಾಲ ಇದೆ. ಒಟ್ಟು ರಾಜ್ಯದಲ್ಲಿ 175 ತಾಲ್ಲೂಕುಗಳಿವೆ. ಇದರಲ್ಲಿ ತುಲನೆ ಮಾಡಬಹುದು. ಆದರೆ ಎಲ್ಲೂ ಮೇವು ಇಲ್ಲವೇ ? ನಮ್ಮ ಅಭಿಪ್ರಾಯವೇನೆಂದರೆ, ಎಲ್ಲಿ ಮೇವನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶವಿತ್ತೋ ಅಲ್ಲಿ ಹಣವನ್ನು ಖರ್ಚುಮಾಡಿ ಮಾಡಬೇಕಾಗಿತ್ತು. ಕಾರವಾರದಲ್ಲಿ ಹುಲ್ಲಿನ ಹುಂಡಿ ಮಾಡತಕ್ಕ ಕಾರ್ಖಾನೆ

ಯನ್ನು ಎಕ್ಸ್‌ಪಾನ್‌ಷನ್ ಮಾಡಬೇಕಾಗಿತ್ತು. ಆ ಬಗ್ಗೆ ತಾವು ಒಂದು ಪೈಸೆಯನ್ನೂ ಖರ್ಚು ಮಾಡಲಿಲ್ಲ; ವ್ಯವಸ್ಥೆಯನ್ನೂ ಮಾಡಲಿಲ್ಲ. ಈ ರೀತಿಯಾಗಿ ಹುಲ್ಲನ್ನು ಸಂಗ್ರಹ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಫಾರೆಸ್ಟ್‌ನಿಂದ ಹುಲ್ಲನ್ನು ಸಂಗ್ರಹಣೆ ಮಾಡಿದ್ದರೆ, ಯೋಗ್ಯರೀತಿಯಿಂದ ಹಸಿ ಹುಲ್ಲಿನ ಹುಂಡಿ ಮಾಡಿದ್ದರೆ ಇವೊತ್ತು ಸದಸ್ಯರು ಇದರ ಬಗ್ಗೆ ಹೇಳುವಂಥ ಅವಕಾಶ ಇರುತ್ತಾ ಇರಲಿಲ್ಲ. ಈಗಲಾದರೂ ಸಮಯ ಮೀರುವ ಮುನ್ನ ಕೆಲಸ ಮಾಡಿ. ನಿಜವಾಗಿ ತಮಗೆ ಅಭಿಲಾಷೆ ಇದೆ, ತಾಳ್ಮೆ ಇದೆ; ಸರ್ಕಾರ ನಿಮ್ಮ ಕೈಯಲ್ಲಿದೆ. ಅಮೆರಿಕಾದಿಂದ ಏರೋಪ್ಲೇನಿನಲ್ಲಿ ಹುಲ್ಲನ್ನು ತೆಗೆದುಕೊಂಡು ಬನ್ನಿ, ಎಲ್ಲಾ ಕಡೆ ದನಗಳಿಗೆ ಕೊಟ್ಟುಬಿಡಿ ಎಂದು ಹೇಳುವುದಲ್ಲ. ಮೊದಲು ಜನಗಳಿಗೆ ಜಾನುವಾರುಗಳಿಗೆ ರಕ್ಷಣೆ ಕೊಡಬೇಕು. ನಿಮ್ಮಲ್ಲಿ ಅಷ್ಟು ಹಣ ಇಲ್ಲದೇ ಹೋದರೆ ಅಕ್ಕಿ ಕೊಡಿ, ಜೋಳ ಕೊಡಿ, ಸೀರೆ ಕೊಡಿ, ಕುಪ್ಪಸ ಕೊಡಿ ಎಂದು ಯಾರು ಹೇಳಿದರು ? ನಾವು ಬದುಕಿದ್ದರೆ ತಾನೇ ನೀವು ಎಲ್ಲಾ ಯೋಚನೆ ಮಾಡುವುದು. ನಮ್ಮ ದನ ಸತ್ತರೆ, ಜನ ಸತ್ತರೆ ಏನು ಮಾಡುವುದು ? ದನ ಇಲ್ಲದೆ, ಜನಗಳು ಇಲ್ಲದೆ ನಿಮ್ಮ ಯೋಜನೆಗಳಿಂದ ಏನು ಫಲ.

ಶ್ರೀ ಯು. ಭೂಪತಿ.—ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದಂತೆ ವಸ್ತು ಸ್ಥಿತಿಯನ್ನು ತಿಳಿದುಕೊಳ್ಳದೆ ಮಾತನಾಡುವಂಥ ಮೂರ್ಖ ನಾನಲ್ಲ.

ಛೇರ್ಮನ್.—ಅವರು ಆ ರೀತಿ ಹೇಳಲಿಲ್ಲ. ವಸ್ತುಸ್ಥಿತಿ ಏನಿದೆ ಎಂದು ಹೇಳಿದರು.

ಶ್ರೀ ಯು. ಭೂಪತಿ.—ವಸ್ತುಸ್ಥಿತಿಯನ್ನು ತಿಳಿದುಕೊಳ್ಳದೆ ಮಾತನಾಡುವಂಥ ಮೂರ್ಖ ನಾನಲ್ಲ. ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುವುದಿಲ್ಲ. ಸರ್ಕಾರ ಕೆಲಸ ಮಾಡಿದೆ, ಅದು ಸಾಲುವುದಿಲ್ಲ ಎನ್ನುವಂಥ ಅಭಿಪ್ರಾಯ ಹೇಳುವುದಕ್ಕೆ ನಾನು ಉದಾಹರಣೆ ಹೇಳಿದೆ. ಮಾನ್ಯ ಮಂತ್ರಿಗಳು ಹೇಳಿಕೆಯಲ್ಲಿ ಈ ರೀತಿ ಹೇಳಿದ್ದಾರೆ.

> "ಪ್ರತಿಯೊಂದು ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಯಾವುದೇ ಸಮಯದಲ್ಲೂ ಮೇಲೆ ತಿಳಿಸಿದ ಯಾವುದೇ ಕಾರ್ಯಕ್ರಮಗಳ ಮೇರೆಗೆ ಕನಿಷ್ಟ ಪಕ್ಷ 2 ಕಾಮಗಾರಿಗಳು ನಡೆಯುವಂತೆ ನೋಡಿ ಕೊಳ್ಳಬೇಕಾಗಿದೆ"

ಇದು ಸತ್ಯಕ್ಕೆ ದೂರವಾದ ಮಾತು. ಹೋಬಳಿಯಲ್ಲಿ ಎರಡು ಕಾಮಗಾರಿಗಳನ್ನು ತೆಗೆದುಕೊಂಡರೆ ಒಳ್ಳೆಯದು. ನನಗೆ ಗೊತ್ತಿರುವ ಹಾಗೆ ನನ್ನ ತಾಲ್ಲೂಕಿನಲ್ಲಿ ಮೊನ್ನೆ ಮೀಟಿಂಗ್‌ಗೆ ಅಟೆಂಡ್ ಮಾಡಿದ್ದೇನೆ. ಸಣ್ಣ ಪುಟ್ಟ ಕಾಮಗಾರಿ ಕೆಲಸಗಳಿಗೂ ತಲೆ ಕೆಳಗೆ, ಕಾಲು ಮೇಲೆ ಮಾಡಿದ್ದಾರೆ. ಹದಿಮೂರುವರೆ ಲಕ್ಷ ರೂಪಾಯಿಗಳು ಜಿಲ್ಲಾಧಿಕಾರಿಗಳ ಹತ್ತಿರ ಇದೆ ಎಂದು ಹೇಳಿದಿರಿ. ಆದರೆ ಅಧಿಕಾರಿಗಳೇ ಹೇಳುತ್ತಾರೆ, ಸದನದಲ್ಲಿ ಮಾತನಾಡಿ ಎಂದು. ಆ ರೀತಿ ನಾವು ಇಲ್ಲಿ ಮಾತನಾಡುತ್ತಾ ಇದ್ದೇವೆ. ಅಲ್ಲಿ ಬಂದಿರತಕ್ಕ ಅಂಕಿ ಅಂಶಗಳಿಗೂ, ಅಲ್ಲಿ ಮಾಡತಕ್ಕ ಕೆಲಸಗಳಿಗೂ ಇಲ್ಲಿ ಕೊಡತಕ್ಕ ಅಂಕಿಅಂಶಗಳಿಗೂ ಹೋಲಿಕೆ ಇರಬೇಕು. ಹೋಲಿಕೆ ಇಲ್ಲದೇ ಹೋದರೆ ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟು ಸಮಾಧಾನ ಪಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನನಗೆ ಗಂಭೀರ ಪರಿಸ್ಥಿತಿಯ ಬಗ್ಗೆ ಕಳಕಳಿ ಇರುವುದರಿಂದ ಹೇಳುತ್ತಿದ್ದೇನೆ. ಸರ್ಕಾರವನ್ನು ಟೀಕೆ ಮಾಡಬೇಕೆಂದು ನನ್ನ ಅಭಿಪ್ರಾಯ ಅಲ್ಲ. ನಾನು ಕಣ್ಣಾರೆ ನೋಡಿ ಬಂದಿದ್ದನ್ನು ಹೇಳುತ್ತಿದ್ದೇನೆ. ನಾನು ಹಳ್ಳಿಯ ಜನರ ಕಷ್ಟ ಸುಖಗಳನ್ನು ವಿಚಾರಿಸಲಿಕ್ಕೆ ಹೋದರೆ ಜನರು ತಮ್ಮ ಮಗನ ತರಹ ನೋಡಿಕೊಳ್ಳುತ್ತಾರೆ. ಆದರೆ ಅವರು ಕೇಳತಕ್ಕ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ನಮಗೆ ಆಗುವುದಿಲ್ಲ. ಪರಿಸ್ಥಿತಿಯನ್ನು ಕಣ್ಣಾರೆ ನೋಡಿದರೂ ಸಹ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳು ಹಣ ಇಲ್ಲ ಎಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಹಣ ಖರ್ಚು ಮಾಡಿದ್ದೇವೆಂದು ನೀವು ಹೇಳುತ್ತೀರಿ. ಹಳ್ಳಿಗಳಲ್ಲಿ ನೂರಕ್ಕೆ ನಲವತ್ತರಷ್ಟು ಜನರು ಹೊತ್ತಿಗೆ ಮುಂಚೆ ಚಿಮಣಿ ಎಣ್ಣೆಗೆ ದುಡ್ಡು ಇಲ್ಲದೆ, ಸಂಜೆಯಾದನಂತರ ತಮ್ಮ ತಮ್ಮ ಮನೆಯ ಬಾಗಿಲ ಹೊರಗಡೆ ಕುಳಿತಿರುತ್ತಾರೆ. ಹಳ್ಳಿಯ ಜನರ ಹತ್ತಿರ ಸೀಮೆಎಣ್ಣೆ ಕೊಳ್ಳಲಿಕ್ಕೆ ಹಣ ಇರುವುದಿಲ್ಲ, ಅಂಥಾದ್ದರಲ್ಲಿ ಅವರು ಬ್ಲಾಕ್ ರೇಟಿನಲ್ಲಿ ಆಹಾರ ಧಾನ್ಯವನ್ನು ಎಲ್ಲಿ ಕೊಳ್ಳಲಿಕ್ಕೆ ಆಗುತ್ತದೆ. ತಾವು ಸೀಮೆಎಣ್ಣೆ ಹಂಚುವ ಬಗ್ಗೆ ಸರಿಯಾದಂಥ ವ್ಯವಸ್ಥೆ ಮಾಡಿದ್ದೀರಾ ? ನ್ಯಾಯಬೆಲೆ ಅಂಗಡಿಗಳು ಏನು ಮಾಡುತ್ತಿವೆ, ಅವುಗಳ ಮೂಲಕ ಸೀಮೆಎಣ್ಣೆ ಸಿಕ್ಕುತ್ತಿದೆಯೇ ? ಇಂತಹ ಸಂದರ್ಭದಲ್ಲಿ ನಾವು ಕೇಳಿಕೊಳ್ಳುವುದು ಇಷ್ಟೇ, ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿ ತಾರತಮ್ಯ ಇಲ್ಲದಂತೆ ಕಾಮಗಾರಿ ಕೆಲಸವನ್ನು ಎಲ್ಲಾ ಕಡೆ ಕೊಡಿ. ಬಳ್ಳಾರಿ ಜಿಲ್ಲೆಯ ಸಂಡೂರು ಪ್ರಾಪರ್ ಟೌನ್ ಬಿಟ್ಟರೆ ಶೇಕಡ 30ರಷ್ಟು ಮಳೆಯಾಗಿದೆ. ಇನ್ನು ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕಿನಲ್ಲಿ ಅತ್ಯಂತ ಭೀಕರ ಬರಗಾಲ ಇದೆ. ತಾವು ಅಂಕಿಅಂಶ ತರಿಸಿ ನೋಡಿದರೆ ಇದು ಗೊತ್ತಾಗುತ್ತದೆ, ಎಲ್ಲೆಲ್ಲಿ ಇನ್‌ಫ್ಲ್ಯೂಯೆನ್ಷ್ ಪರ್‌ಸನ್ಸ್ ಇದ್ದಾರೆ ಅಲ್ಲಿ ಕಾಮಗಾರಿ ಕೆಲಸ ನಡೆದಿದೆ. ಅಲ್ಲಿಗೆ ಮಾತ್ರ ಫಂಡ್ಸ್ ಹೋಗಿದೆ, ಬೇರೆ

ಕಡೆಗೆ ಹೋಗಿಲ್ಲ. ಈ ಮಾತನ್ನು ಹೇಳಿದರೆ ಮಂತ್ರಿಗಳಿಗೆ ಕೋಪ ಬರುತ್ತದೆ. ಇದನ್ನು ಕಣ್ಣಾರೆ ನಾನು ನೋಡಿ ಬಂದು ಹೇಳುತ್ತಿದ್ದೇನೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಏನಿದ್ದಾರೆ ಅವರು ಇಲ್ಲಿ ಮಾಹಿತಿ ಕೊಡಬೇಕಾದರೆ, ಸರಿಯಾದ ಮಾಹಿತಿ ಕೊಡುವುದಿಲ್ಲ. ಎಷ್ಟು ಭಾಗದಲ್ಲಿ ಬಿತ್ತನೆಯಾಗಿದೆ ಎಂದು ಸರಿಯಾಗಿ ನೋಡುವುದಿಲ್ಲ. ಒಂದು ಸಾರಿ ನಾನು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರನ್ನು ಕರೆದುಕೊಂಡು ಹೋಗಿ ಟೂರ್ ಮಾಡಿಕೊಂಡು ಬಂದಿದ್ದೇನೆ. ಬೀಜ, ಗೊಬ್ಬರ ಯಾರಿಗೆ ಕೊಟ್ಟಿದ್ದೀರಿ ಎಂದು ಅಲ್ಲಿಯೇ ಕೇಳಿ ಹೇಳಿದ್ದೇನೆ. ಏನೋ ತಪ್ಪಾಗಿದೆ, ಮುಂದಿನ ಸಾರಿ ಸರಿಮಾಡುತ್ತೇನೆಂದು ಅವರು ಹೇಳಿದ್ದಾರೆ. ಆದ್ದರಿಂದ, ಸರ್ಕಾರ ಬರಗಾಲ ಕಾಮಗಾರಿ ಕೆಲಸವನ್ನು ಹೆಚ್ಚು ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯ ಇದೆ. ಮತ್ತೆ ಜಾನುವಾರುಗಳಿಗೆ ಮೇವನ್ನು ಒದಗಿಸಿಕೊಡುವುದು ಸಹ ಬಹಳ ಜರೂರಾಗಿ ಆಗಬೇಕಾಗಿದೆ. ಇನ್ನು ನನ್ನ ಕ್ಷೇತ್ರದ ಅತಿ ಮುಖ್ಯವಾದ ವಿಚಾರ ಎಂದರೆ, ನಮ್ಮಲ್ಲಿ ಎಲ್ಲಾ ಕೆರೆಗಳು ಒಣಗಿಹೋಗಿವೆ. ಕೆಲವೊಂದು ಕೆರೆಗಳು ರಿಪೇರಿಗೆ ಬಂದಿವೆ. ಒಂದು ಕೆರೆಯನ್ನು ರಿಪೇರಿಗೆ ತೆಗೆದುಕೊಳ್ಳಲಿಕ್ಕೆ ಸರ್ಕಾರ ತಯಾರಿಲ್ಲ. ಆದ್ದರಿಂದ ಕೂಡಲೇ ಈ ಬಗ್ಗೆ ನಿಮ್ಮ ಅಧಿಕಾರಿಗಳಿಗೆ ಸರ್ಕಾರದಿಂದ ಆದೇಶ ಕೊಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ ಇರತಕ್ಕ ಭಾಗದಲ್ಲಿ ಹೆಚ್ಚಿನ ಕಾಮಗಾರಿ ಕೆಲಸ ತೆಗೆದುಕೊಳ್ಳಲಿಕ್ಕೆ ಆದೇಶ ಕೊಡಬೇಕು. ಇನ್ನೊಂದು ವಿಚಾರ ತಮಗೆ ತಿಳಿಸಬೇಕೆಂದರೆ, ನಾವು ಜಿಲ್ಲಾ ಅಭಿವೃದ್ಧಿ ಸಮಿತಿಗೆ ಹೋದಾಗ ಆ ಸಭೆಗೆ ಅಧಿಕಾರಿಗಳು ಪತ್ರಕರ್ತರನ್ನು ಕರೆಯುವುದಿಲ್ಲ. ಏಕೆಂದರೆ ಅವರು ಬಂದರೆ ಭಯ, ಕಾರಣ ಎಂದರೆ ಅವರು ಪತ್ರಿಕೆಗಳಲ್ಲಿ ಪ್ರಕಟಿಸಿಬಿಟ್ಟು ಇರತಕ್ಕ ವಿಚಾರ ತಿಳಿಸಿಬಿಡುತ್ತಾರೆ. ಆಗ ವಸ್ತುಸ್ಥಿತಿ ಕಂಡುಬರುತ್ತದೆ. ಮೊನ್ನೆತಾನೆ ನಡೆದಂಥ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿ ಸಮಿತಿಯ ಸಭೆಗೆ ಪತ್ರಕರ್ತರನ್ನು ಕರೆಯಲಿಲ್ಲ, ಅಧಿಕಾರಿಗಳನ್ನು ಕೇಳಿದರೆ ಇದಕ್ಕೂ ಬೈಂಡಿಂಗ್ಸ್ ಇದೆ ಎಂದು ಹೇಳುತ್ತಾರೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪತ್ರಿಕಾಕರ್ತರು ಹೇಳುತ್ತಿರುತ್ತಾರೆ, ಆದರೆ ಬೈಂಡಿಂಗ್ಸ್ ಏನು ಎಂದು ತಿಳಿಯುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಏನು ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ, ಸರ್ಕಾರ ಏನು ಕೆಲಸಕಾರ್ಯ ಮಾಡುತ್ತಿದೆ ಅದು ಜನತೆಗೆ ಪತ್ರಿಕೆ ಮುಖಾಂತರ ತಿಳಿಯಬಾರದೇನು ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಸರ್ಕಾರ ಬರಗಾಲ ಕಾಮಗಾರಿ ಕೆಲಸದ ಬಗ್ಗೆ ಹೆಚ್ಚಿನ ಕೆಲಸ ಮಾಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಗೋಪಾಲ ಮುಕುಂದ ಕಾನಡೆ(ಶಿರಸಿ).--ಸನ್ಮಾನ್ಯ ಅಧ್ಯಕ್ಷಣಿಯವರೆ, ಒಂದು ವಿಚಿತ್ರವಾದ ವಿಚಾರ ಎಂದರೆ ನಮ್ಮ ಉತ್ತರ ಕನ್ನಡ ಜಿಲ್ಲೆಗೆ 5 ಲಕ್ಷ ರೂಪಾಯಿಗಳ ಪರಿಹಾರದ ಬಗ್ಗೆ ಇಲ್ಲಿ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಅದನ್ನು ಉತ್ತರ ಕನ್ನಡ ಜಿಲ್ಲೆಗೆ ಕೊಟ್ಟಿದ್ದಾರೋ ಅಥವಾ ಮಂತ್ರಿಗಳ ಊರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಚೀಫ್ ಮಿನಿಸ್ಟರ್ ಊರಿಗೆ ಹೋಗಿದೆ. ಅದೇ ಶಿರಸಿ, ಸಿದ್ಧಾಪುರಕ್ಕೆ ಹಣ ಇಲ್ಲ. ಮುಂಡಗೋಡಿಗೆ ಹೋಗಿದೆ. ಉತ್ತರ ಕನ್ನಡ ಜಿಲ್ಲೆಗೆ 5 ಲಕ್ಷ ರೂಪಾಯಿಗಳು ಎಂದು ಕೊಟ್ಟಿದ್ದಾರೆ. ನಮ್ಮ ಕಡೆಯ ವಿಚಾರ ನಮ್ಮ ಹೆಗಡೆಯವರಿಗೂ ಗೊತ್ತಿದೆ, ಅಲ್ಲಿ ತೋಟಗಳು ಎಲ್ಲಾ ಹಾಳಾಗಿವೆ. ಮೊದಲು ನಾವು ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ ಬರಗಾಲ ಇದೆ ಎಂದು ಕೇಳುತ್ತಿದ್ದೆವು, ಅದು ಈಗ ನಮ್ಮ ಊರಿನಲ್ಲೂ ಬಂದಿದೆ, ನಾನು ಕಾಂಗ್ರೆಸ್ (ಐ) ಸದಸ್ಯ ಎಂದು ನನ್ನ ಕ್ಷೇತ್ರಕ್ಕೆ ಹಣವನ್ನು ಕೊಟ್ಟಿಲ್ಲವೋ ಏನೋ ಗೊತ್ತಿಲ್ಲ. ನಮ್ಮ ಬಾರ್ಡರ್, ಮುಂಡಗೋಡ್‌ಗೆ ಕೊಟ್ಟಿದ್ದಾರೆ. ಅದು ನಮ್ಮ ದೇಶಪಾಂಡೆಯವರ ಭಾಗಕ್ಕೆ ಸೇರುತ್ತದೆ, ಅದೇ ನಮ್ಮ ಬನವಾಸಿ ಭಾಗಕ್ಕೆ ಕೊಟ್ಟಿಲ್ಲ. ಉತ್ತರ ಕನ್ನಡ ಜಿಲ್ಲೆ ಎಂದರೆ, ಅನೇಕ ಪ್ರದೇಶಗಳು ಬರುತ್ತವೆ. ಇವರ ಹೇಳಿಕೆ ಪ್ರಕಾರ ಪ್ರತಿ ಗ್ರಾಮಕ್ಕೆ ಎರಡು ಕೆಲಸ ಎಂದರೆ, ನಮ್ಮ ಭಾಗದಲ್ಲಿ 300 ಚಿಲ್ಲರೆ ಹಳ್ಳಿಗಳು ಇವೆ, ಅದರ ಪ್ರಕಾರ ಲೆಕ್ಕ ತೆಗೆದುಕೊಂಡರೆ 600 ಕೆಲಸಗಳನ್ನು ಕೊಡಬೇಕಾಗಿತ್ತು. ಅಷ್ಟು ಕೆಲಸಗಳನ್ನು ಸರ್ಕಾರದವರು ಕೊಟ್ಟಿದ್ದರೆ ಅದರಿಂದ ಹೆಗಡೆಯವರಿಗೆ ಒಳ್ಳೆಯ ಹೆಸರು ಬರುತ್ತಿತ್ತು. ನಾನು ಮಾಡುವ ಪ್ರಯತ್ನ ಮಾಡುತ್ತೇನೆ. ಹೆಗಡೆಯವರು ಕೊಟ್ಟರೆ, ಹೆಗಡೆಯವರು ಕೊಟ್ಟಿದ್ದಾರೆಂದು ಹೇಳುತ್ತೇನೆ. ಇಲ್ಲದೇ ಇದ್ದರೆ, ಹೆಗಡೆಯವರು ಕೊಟ್ಟಿಲ್ಲ, ನಾನು ಕಾಂಗ್ರೆಸ್ (ಐ) ಸದಸ್ಯ ಎಂದು ಕೊಟ್ಟಿಲ್ಲ ಎಂದು ಹೇಳುತ್ತೇನೆ. ಇನ್ನು ನೀರಿನ ವಿಚಾರ ಎಂದರೆ ನೀರಿನ ಬದಲು ಪ್ರತಿಯೊಂದು ಹರಿಜನ ಕೇರಿಯಲ್ಲೂ ಹೆಂಡದ ಅಂಗಡಿಯನ್ನು ಕೊಟ್ಟಿದ್ದಾರೆ. ಎಷ್ಟು ಹೊತ್ತಿಗೆ ಹೋದರು ಹೆಂಡ ಸಿಕ್ಕುತ್ತದೆ. ಇನ್ನು ಅರಲಕಟ್ಟೆ ಹರಿಜನ ಕೇರಿಯಲ್ಲಿ ಹನುಮಂತನ ದೇವಸ್ಥಾನ ಇದೆ, ಗಣಪತಿ ದೇವಸ್ಥಾನ ಇದೆ, ಅಲ್ಲಿಗೆ ಒಂದು ಸಾರಾಯಿ ಅಂಗಡಿ ಕೊಟ್ಟಿದ್ದಾರೆ. ಅದನ್ನು ತೆಗೆಸಿರಿ ಎಂದು ಎಷ್ಟು ಹೇಳಿದರೂ ಸಹ ತೆಗೆಸಿಲ್ಲ, ನನ್ನ ಮನೆಗೆ ಸರಿಯಾಗಿ ಆ ಅಂಗಡಿ ಸುಮಾರು 400 ಅಡಿ ದೂರ ಆಗಬಹುದು ಪೂರ್ತಿ ಹರಿಜನರು ಇರುವಂಥ ಸ್ಥಳ ಅದು. ಅಲ್ಲಿಗೆ ನೀರನ್ನು ಕೊಡುವ ಬದಲು ಸಾರಾಯಿ ಕೊಟ್ಟ

ದ್ದಾರೆ. ಸಾರಾಯಿ ಕುಡಿದು ಜನ ಸಾಯಲಿ ಎಂದು ಕೊಟ್ಟಿದ್ದಾರೆ. ಹರಿಜನರಿಗೂ ಇನ್ನು ಡೈರೆಕ್ಟ್ ಅಪಾಯಿಂಟ್‌ಮೆಂಟ್ ಬಗ್ಗೆ ಹೇಳುವುದಾದರೆ ಈ ಸರ್ಕಾರೆ ಬಂದಮೇಲೆ ಹರಿಜನ ಗಿರಿಜನರಲ್ಲಿ ಎಷ್ಟು ಜನರಿಗೆ ಡೈರೆಕ್ಟ್ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ? ಮಾನ್ಯ ಹೆಗಡೆಯವರು ಎದುರಿಗೆ ಇದ್ದಾರೆ ಅವರೇ ಹೇಳಲಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಬರಗಾಲದ ಬಗ್ಗೆ ಹೇಳುವುದು ಒಳ್ಳೆಯದು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಮ್ಮ ಊರಿನಲ್ಲಿ ಮನೆ ಸುಟ್ಟಂತಹ ವಿಚಾರ ಇದೆ. ಅದೇ ರೀತಿ ಬಹಳ ಸಮಸ್ಯೆಗಳು ಇವೆ. ಇದು ಮಾನ್ಯ ಹೆಗಡೆಯವರಿಗೂ ಸಹ ಗೊತ್ತಿದೆ. ಈಗ ಎರಡು ರೂಪಾಯಿ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದೀರಿ, ಎಷ್ಟು ಸಾವಿರ ಜನರಿಗೆ ಈ ರೀತಿ ಅಕ್ಕಿ ಕೊಟ್ಟಿದ್ದೀರಿ ? ತಾಳಿಭಾಗ್ಯ ಏನಾಯಿತು ? ಸೀರೆಗಳನ್ನು ಎಲ್ಲಿ ಕೊಟ್ಟಿರಿ ?

ಛೇರ್‌ಮನ್.—ಮಾನ್ಯ ಸದಸ್ಯರು ವಿಷಯದ ಮೇಲೆ ಮಾತನಾಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಮ್ಮ ಶಿರಸಿ, ಸಿದ್ದಾಪುರಕ್ಕೆ ಇವರು ಒಂದು ಪೈಸೆಯನ್ನು ಕೊಟ್ಟಿಲ್ಲ ಎಂದು ಖಡಾಖಂಡಿತವಾಗಿ ನಾನು ಹೇಳುತ್ತೇನೆ. ಆದ್ದರಿಂದ, ನಮ್ಮ ಬನವಾಸಿ, ಕಲಕೆರೆ, ಬಿದರಾನೆ, ಶಿರಸಿ ಸಿದ್ದಾಪುರಕ್ಕೆ ಬರಗಾಲ ಕಾಮಗಾರಿ ಕೆಲಸಕ್ಕೆ 25 ಲಕ್ಷ ರೂಪಾಯಿಗಳು ಕೊಡಬೇಕು. ಇನ್ನೂ ಬಿತ್ತನೆ ಬೀಜ, ಗೊಬ್ಬರ ನಮ್ಮ ಕಡೆ ಕೊಟ್ಟಿಲ್ಲ, ಮಳೆಗಾಲ ಮುಗಿಯುತ್ತಾ ಬಂದಿದೆ. ಅದರ ಕಡೆ ಹೆಚ್ಚು ಗಮನವನ್ನು ಸರ್ಕಾರ ಹರಿಸಬೇಕು. ಇನ್ನು ನಮ್ಮ ಭಾಗದಲ್ಲಿ ನೀರಿಗಾಗಿ ಕೊಳವೆ ಬಾವಿಗಳನ್ನು ತೆಗೆಯುತ್ತಿದ್ದಾರೆ, ಕೊಳವೆ ಬಾವಿಗಳಿಂದ ನಮ್ಮ ಕಡೆ ಉಪಯೋಗವಾಗುವುದಿಲ್ಲ. ನಮ್ಮ ಭಾಗದಲ್ಲಿ ಓಪನ್ ಬಾವಿಗಳನ್ನು ತೆಗೆಸುವುದು ಒಳ್ಳೆಯದು. ನಮ್ಮಲ್ಲಿ ನೀರು ಇಂಗಿ ಹೋಗುವಂತಾದ್ದು ಇರುತ್ತದೆ. ಈಗ ನಮ್ಮ ಜಿಲ್ಲೆಗೆ ಕೊಟ್ಟಿರತಕ್ಕ ಹಣ 5 ಲಕ್ಷ ರೂಪಾಯಿಗಳು ಮಾನ್ಯ ದೇಶಪಾಂಡೆಯವರ ಊರಿಗೆ ಹೋಗಿದೆ. ಆದ್ದರಿಂದ, ಅದಷ್ಟು ಬೇಗ ನಮ್ಮ ಶಿರಸಿ ಸಿದ್ದಾಪುರಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3-00 p.m.

ಶ್ರೀ ಬಿ. ಸಿ. ಸಿದ್ಧನಗೌಡ.—ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡಿ ತಿಳಿಸಿದ್ದಾರೆ. ಬರಗಾಲ ನಿವಾರಣೆಗಾಗಿ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ನಾನು ಹೇಳುವುದೇನೆಂದರೆ ಕಾಮಗಾರಿ ಕೆಲಸದಲ್ಲಿ ದಿನಗೂಲಿ ಮಾಡತಕ್ಕವರಿಗೆ ಈಗ ದಿನಕ್ಕೆ 7 ರೂಪಾಯಿಗಳ 80 ಪೈಸೆಯನ್ನು ಕೊಡುತ್ತಿದ್ದಾರೆ. ಕೊಡತಕ್ಕ ಕೂಲಿ ಕಡಿಮೆ ಇದೆಯೆಂದು ಕೆಲಸ ಮಾಡಲಿಕ್ಕೆ ಯಾರೂ ಬರುತ್ತಿಲ್ಲ. ಸರ್ಕಾರ ಕನಿಷ್ಟ ಪಕ್ಷ 12 ರೂಪಾಯಿಗಳ ಕೂಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೂಲಿ ಹೆಚ್ಚು ಮಾಡುವ ಬಗ್ಗೆ ಅನೇಕ ಕಡೆ ಬೇಡಿಕೆ ಇದೆ. ಸರ್ಕಾರ ಈಗ ಕೊಡತಕ್ಕ ಕೂಲಿಯನ್ನು ಹೆಚ್ಚು ಮಾಡಬೇಕು. ಬರಗಾಲ ಪರಿಹಾರ ಕೆಲಸಕಾರ್ಯಗಳಲ್ಲಿ ಕೆರೆಗಳ ರಿಪೇರಿ ಕೆಲಸ ಸಾಕಷ್ಟು ನಡೆಯುತ್ತಿಲ್ಲ. ಕೆರೆಗಳ ರಿಪೇರಿ ಕೆಲಸ ಸಾಕಷ್ಟು ನಡೆಯುತ್ತಿಲ್ಲ, ಕೆರೆಗಳ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಸಭಾಧ್ಯಕ್ಷಿಣೀಯವರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆಮಾಡುವಾಗ ಮಾನ್ಯ ಬೊಮ್ಮಾಯಿಯವರು ಎರಡು ಹೇಳಿಕೆಗಳನ್ನು ಸದನದ ಮುಂದಿಟ್ಟಿದ್ದಾರೆ. ಒಂದು ಹೇಳಿಕೆ ದಿನಾಂಕ 29-3-1985ರಂದು ಮತ್ತೊಂದು ಹೇಳಿಕೆಯನ್ನು ಮೊನ್ನೆತಾನೇ ಸಭೆಯ ಮುಂದಿಟ್ಟಿದ್ದಾರೆ. ನಾನು ಬಹಳ ಸೂಕ್ಷ್ಮವಾಗಿ ಎರಡೂ ಹೇಳಿಕೆಗಳನ್ನು ನಾನು ಪರಿಶೀಲನೆ ಮಾಡಿದ್ದೇನೆ. ದಿನಾಂಕ 29-3-1985ರಂದು ಕೊಟ್ಟ ಹೇಳಿಕೆ ಸದನದಲ್ಲಿ ಚರ್ಚೆಯಾಗಿಲ್ಲ. ನಿನ್ನೆ ಈ ವಿಚಾರ ಚರ್ಚೆಗೆ ಬಂದಾಗ ಬರೀ ಹೇಳಿಕೆಗಳಿಂದ ಈ ಸದನದ ಸದಸ್ಯರಿಗೆ ತೃಪ್ತಿಯಾಗುವುದಿಲ್ಲ, ಸುದೀರ್ಘವಾಗಿ ಚರ್ಚೆಮಾಡಿದ ಮೇಲೆ ಮಂತ್ರಿಗಳು ಹೇಳಿಕೆ ಕೊಡಲಿಯೆಂದು ನಾವು ಪ್ರಸ್ತಾಪ ಮಾಡಿದ್ದೇವೆ. ಉದ್ದೇಶ ಇಷ್ಟೆ, ತಾವು ಕೊಟ್ಟಂತಹ ಹೇಳಿಕೆಗಳನ್ನು ದಯಮಾಡಿ ಪರಾಂಭರಿಸಿ ನೋಡಬೇಕು. ಎರಡೂ ಹೇಳಿಕೆಗಳಲ್ಲಿ 22 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದನ್ನು ಬಿಟ್ಟರೆ ಸಾಧಾರಣ ಅಂಕಿಸಂಖ್ಯೆಗಳಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಬಹುಶಃ ಅವಸರದಲ್ಲಿ ಹಿಂದಿನ ಹೇಳಿಕೆಗಳ ಒಂದೆರಡು ಪುಟಗಳನ್ನು ಬದಲಾವಣೆ ಮಾಡಿ ಈ ರೀತಿ ಹೇಳಿಕೆ ಕೊಡುವುದು ಸರಿಯಲ್ಲ, ಕ್ಷಮಿಸಬೇಕು, ಕಣ್ಣೊರೆಸುವ ಕೆಲಸ ತಮ್ಮಿಂದ ಆಗಿದೆಯೆಂದು ನಾನು ಹೇಳುವುದಿಲ್ಲ. ನಿಮ್ಮ ಅಧಿಕಾರಿಗಳು ಕೊಟ್ಟಂತಹ ಆಧಾರದ ಮೇಲೆ ತಾವು ಜವಾಬ್ದಾರಿಯಿಂದ ಹೇಳಿಕೆಯನ್ನು ಕೊಡುತ್ತೀರಿ. ಆದರೆ ಈ ಹೇಳಿಕೆಗಳ

ಒಂದು ಸ್ಥೂಲವಾದಂತಹ ಸ್ವರೂಪವನ್ನು ನೋಡಿದರೆ, ಬರಗಾಲದ ಕೆಲಸಕಾರ್ಯಗಳು ಕೂಡ ಇದೇ ಧಾಟಿಯಲ್ಲಿ ಸಾಗಿದೆಯೆಂದು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲಿಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಮುಂದೆ ಹೇಳತಕ್ಕಂತಹ ವಿಚಾರದಲ್ಲಿ ತೋರಿಸತಕ್ಕ ಅಂಕಿಸಂಖ್ಯೆಗಳಿಂದ ಬಹುಶಃ ವಿಚಾರದ ಮನವರಿಕೆ ಸಚಿವರಿಗೆ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಸುಮಾರು ಮೂರು ವರ್ಷಗಳಿಂದ ಬರಗಾಲ ತೀವ್ರವಾಗಿ ಕರ್ನಾಟಕ ರಾಜ್ಯದಲ್ಲಿ ಆಗುತ್ತಾ ಇದೆ. ಅದರ ಪ್ರಕಾರ 1981ರಿಂದ 1984ರವರೆಗೆ ಕೇಂದ್ರ ಸರ್ಕಾರದ ಸ್ಟಡಿ ಟೀಂ ಅನ್ನು ನಮ್ಮ ರಾಜ್ಯಕ್ಕೆ ಕಳುಹಿಸಿ ಪರಿಶೀಲನೆಯನ್ನು ಆಗಾಗ ನಡೆಸಿದ್ದಾರೆ. ಹಣವನ್ನು ಸಹ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. 7ನೇ ಹಣಕಾಸಿನ ಆಯೋಗದ ವರದಿ ಬಂದಮೇಲೆ ಬರಗಾಲ ಪರಿಹಾರಕ್ಕಾಗಿ ಖರ್ಚು ಮಾಡುತ್ತಿದ್ದ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ನಿನ್ನೆ ಕೂಡ ಮಾನ್ಯ ಸಚಿವರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರಲ್ಲಿ ಕೆಲವು ಅನುಕೂಲಗಳಿವೆ, ಕೆಲವು ಅನಾನುಕೂಲಗಳಿವೆ. ಅನುಕೂಲ ಏನೆಂದರೆ ಹೆಚ್ಚಿಗೆ ಹಣ ನಾನ್ ಪ್ಲಾನ್‌ನಲ್ಲಿ ಖರ್ಚಾಗಿದೆ, ಅದಕ್ಕೆ ಕಡಿವಾಣ ಹಾಕಬೇಕು ಅದರಿಂದ ಅನುಕೂಲಗಳಾಗುತ್ತವೆ. ಇದರಿಂದ ದುರುಪಯೋಗ ಕೂಡ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ, ಆದನ್ನು ಮಾಡಿರುವುದು ಉಂಟು ; ಇದರಿಂದ ಅನಾನುಕೂಲಗಳು ಏನಾಗಿದೆ ಎಂದರೆ ಬರಗಾಲ ಬಾರದೆ ಇರತಕ್ಕ ಪ್ರದೇಶಗಳಿಗೆ ಇದು ಸ್ವಲ್ಪ ವಿಸ್ತಾರವಾಗಿಲ್ಲ. ಏಕೆಂದರೆ ಡೆವಲಪ್‌ಮೆಂಟ್ ಪ್ಲಾನ್‌ನಲ್ಲಿ ಖರ್ಚುಮಾಡತಕ್ಕ ಹಣ ಎನ್.ಆರ್.ಇ.ಪಿ., ಆರ್.ಎಲ್.ಇ.ಪಿ, ಯಾವ ಕೆಲಸ ಇದೆ ಅದನ್ನು ಎಲ್ಲಾ ಕಡೆಗೂ ಕೊಟ್ಟು ಕೆಲಸವಾಗಬೇಕು. ಬರಗಾಲ ಇರಲಿ, ಇಲ್ಲದೇ ಇರಲಿ ಎಲ್ಲರೂ ಕೂಡ ತಮ್ಮ ತಾಲ್ಲೂಕುಗಳನ್ನು ಬರಗಾಲ ಪ್ರದೇಶವೆಂದು ಘೋಷಿಸಬೇಕೆಂದು ಹೇಳಿಕೊಂಡು ಬರಗಾಲ ಪ್ರದೇಶಗಳಿಗಾಗಿ ಬರತಕ್ಕ ಹಣವನ್ನು ಎಲ್ಲರೂ ಹಂಚಿಕೊಳ್ಳತಕ್ಕ ಪ್ರಯತ್ನ ಬಹುಶಃ 7ನೇ ಹಣಕಾಸಿನ ಆಯೋಗ ಬದಲಾವಣೆಯನ್ನು ರೂಪಿಸಿದಾಗ ಇದು ಆಗಿದೆಯೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಹಿಂದೆ ಯಾವ ಪ್ರದೇಶ ಬರಗಾಲ ಪ್ರದೇಶವೆಂದು ಘೋಷಿತವಾಗುತ್ತಿತ್ತು ಆ ಪ್ರದೇಶಕ್ಕೆ ಮಾತ್ರ ಬರಗಾಲ ಪರಿಹಾರಕ್ಕಾಗಿ ಬರುತ್ತಿದ್ದ ಹಣವನ್ನು ಖರ್ಚು ಮಾಡಲಾಗುತ್ತಿತ್ತು. ಇದನ್ನು ನಮ್ಮ ಶಾಸಕರೆಲ್ಲರೂ ಕೂಡ ಅರ್ಥಮಾಡಿಕೊಳ್ಳತಕ್ಕ ಅವಶ್ಯಕತೆ ಇದೆ. ಸರ್ಕಾರ ಬರಗಾಲ ಪೀಡಿತ ಪ್ರದೇಶಗಳಿಗೆ ಕೈಗೊಳ್ಳತಕ್ಕ ಕೆಲಸಕಾರ್ಯಗಳನ್ನು ಆಯಾ ಕ್ಷೇತ್ರಗಳಿಗೆ ಕೇಂದ್ರೀಕೃತಗೊಳಿಸಿ, ಬರಗಾಲದ ವಿರುದ್ಧ ಹೋರಾಟ ಮಾಡತಕ್ಕಂತಹ ವ್ಯಾಪಕವಾದ ಒಂದು ವ್ಯವಸ್ಥೆಯನ್ನು, ಆಡಳಿತ ಯಂತ್ರವನ್ನು ಸಚೇತನಗೊಳಿಸಬೇಕಾದ ಅವಶ್ಯಕತೆ ಇದೆಯೆಂದೂ ಅದನ್ನು ಒತ್ತಾಯ ಮಾಡಬೇಕೆಂದು ಈ ವಿಚಾರವನ್ನು ಹೇಳುತ್ತಿದ್ದೇನೆ. ನಾನು ಹೇಳುವ ಅಂಕಿ ಅಂಶಗಳನ್ನು ನೋಡಿದರೆ ಆದು ತಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. 1984-85ರಲ್ಲಿ 125 ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಘೋಷಿಸಲಾಗಿದೆ. 1984ರ ಜೂನ್‌ನಲ್ಲಿ 150 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಘೋಷಿಸಲಾಗಿದೆ. ಮೊನ್ನೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ತೆಗೆದುಕೊಂಡರೂ ಸಹ ಇದರಲ್ಲಿ ಯಾವುದೇ ಬದಲಾವಣೆ ಕಾಣುವುದಿಲ್ಲ. ರಾಜ್ಯದ ಎಲ್ಲಾ ಕಡೆ ಮಳೆ ನಿಂತುಹೋಗಿದೆ. ಮಾನ್ಯ ಸದಸ್ಯರಾದ ಪಾಟೀಲ್‌ರವರು ಹೇಳಿದ

ಹಾಗೆ I will just read out the figures.

Human population affected	....	142.63 lakhs
Cattle population affected	....	82.90 lakhs
Small and marginal farmers affected	....	13.42 lakhs
Agricultural labourers affected	....	19.28 lakhs

ಪರಿಸ್ಥಿತಿ ಇಷ್ಟು ಗಂಭೀರವಾಗಿದೆ. ಇಷ್ಟು ಗಂಭೀರವಾದಂತಹ ಪರಿಸ್ಥಿತಿಯನ್ನು ನಾವು ಯಾವರೀತಿಯಲ್ಲಿ ಎದುರಿಸಿದ್ದೇವೆ ಎಂಬುದನ್ನು ನಾವು ಸ್ವಲ್ಪ ನೋಡಿದಾಗ ಅರಾಕಾಸುರನಿಗೆ ಮೂರು ಕಾಸಿನ ಮಜ್ಜಿಗೆ ಎಂದಹಾಗೆ ಆಗುತ್ತದೆ. ಇದು ಕಳೆದ ವರ್ಷ ಇರಬಹುದು ಈ ವರ್ಷ ಇರಬಹುದು ಯಾವುದನ್ನು ನೋಡಿದರೂ ಅದೇರೀತಿ ಇದೆ, ನೀವು ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ? 3 ಲಕ್ಷದ 4 ಸಾವಿರದ 69 ಜನಗಳಿಗೆ ಮಾತ್ರ ಕೆಲಸ ಕೊಟ್ಟಿದ್ದೀರಿ. ಜನಸಂಖ್ಯೆಯ ಪ್ರಕಾರ ಇದು ಕಡಿಮೆ ಎಂದರು 32.70 ಲಕ್ಷ ಜನರಿಗೆ ನೀವು ಕೆಲಸ ಕೊಡಬೇಕಾಗಿತ್ತು. ಅದರಲ್ಲಿ ನೀವು 3 ಲಕ್ಷ ಜನರಿಗೆ ಕೆಲಸಕೊಟ್ಟರೆ ಬರಗಾಲ ಪರಿಹಾರ ಕಾಮಗಾರಿ ಕೆಲಸವನ್ನು ಯಾವರೀತಿ ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ.

ಬೀದರ್ ಜಿಲ್ಲೆಗೆ ನಾನು ಒಮ್ಮೆ ಪ್ರವಾಸ ಹೋಗಿದ್ದಾಗ ನೋಡಿದ್ದೆ ಎರಡೂವರೆ ಸಾವಿರ ಮಂದಿ ಒಂದು ದಿನದಲ್ಲಿ ಕೆಲಸದಲ್ಲಿದ್ದರು. ಜೂನ್, ಜುಲೈ ಮತ್ತು ಆಗಸ್ಟ್‌ಗಳಲ್ಲಿ ಇದೇ ಕತೆ ನಡೆದಿತ್ತು. ಇದು ಕೇವಲ ಉದಾಹರಣೆ ಅಷ್ಟೇ. ಬೇರೆ ಎಲ್ಲ ಕಡೆಗಳಲ್ಲೂ ಹೀಗೆ ನಡೆದಿದೆಯೇ ? ಅಲ್ಲಿ ಒಂದು ಪ್ರೊಜೆಕ್ಟ್‌ಗೆ ಹೋದಾಗ ಎರಡೂವರೆ ಸಾವಿರ ಮಂದಿ ಕೆಲಸದಲ್ಲಿದ್ದರೆಂದು ಅರ್ಥವಾಗುತ್ತದೆ. ಅವರು ತೋರಿಸಿರುವ ಅಂಕಿಸಂಖ್ಯೆಗಳು ಮೇಜರ್ ಇರಿಗೇಷನ್‌ದು ಎಂದೂ ಅರ್ಥವಾಗುತ್ತದೆ. ಇದನ್ನು

ತಾವು ಆಲೋಚನೆ ಮಾಡಬೇಕಾಗುತ್ತದೆ. ಈಗ ಬಿಜಾಪುರ ಜಿಲ್ಲೆಯನ್ನೇ ತೆಗೆದುಕೊಳ್ಳಿ. ಅಕ್ಟೋಬರ್ 84ರಲ್ಲಿ ಅವರೇಜ್ ಲೆವೆಲ್ ಆಫ್ ಎಂಪ್ಲಾಯ್‌ಮೆಂಟ್ ಆನ್ ರಿಲೀಫ್ ವರ್ಕ್ಸ್ 26,131 ಮಂದಿ. ಅದರಲ್ಲಿ ಸುಮಾರು 2,927 ಮಂದಿ ಮೇಜರ್ ಇರಿಗೇಷನ್‌ನಲ್ಲಿ ಕೆಲಸ ಮಾಡುತ್ತಿದ್ದರು. ಹುನಗುಂದ ತಾಲ್ಲೂಕಿನಲ್ಲಿ 1431 ಮಂದಿ ಕೆಲಸಕ್ಕಿದ್ದರು. ಈ ರೀತಿ ಆದರೆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಕುಡಿಯುವ ನೀರಿನ ಸಮಸ್ಯೆ ಎಷ್ಟು ಅಗಾಧವಾಗಿದೆ, ಬರಗಾಲದ ಭೀಕರತೆಯ ಚಿತ್ರಣವನ್ನು ನಾನು ತಮ್ಮ ಮುಂದೆ ಇಡಲು ಬಯಸುತ್ತಿದ್ದೇನೆ. ನಾರ್ಮಲ್ ಆಗಿರುವ ಸಂದರ್ಭದಲ್ಲಿ ಕ್ರಮ ಕೈಕೊಂಡಂತೆ ನೀವು ಮುಂದುವರಿದರೆ ಯಾವುದೇ ಸರ್ಕಾರವಾಗಲೀ ಅದು ನಮ್ಮದಾಗಲೀ ನಿಮ್ಮದಾಗಲೀ ಪರಿಣಾಮಕಾರಿಯಾಗಿ ಈ ಪರಿಸ್ಥಿತಿಯಲ್ಲಿ ಹೋರಾಡಲು ಸಾಧ್ಯವಿಲ್ಲ. ಬಾದಾಮಿ ತಾಲ್ಲೂಕಿಗೆ 8 ಟ್ಯಾಂಕರ್ ಕೊಟ್ಟರೆ ಬಾಗಲಕೋಟೆಗೆ ಒಂದೇ ಒಂದು ಟ್ಯಾಂಕರ್. ಬಾಗಲಕೋಟೆಯಲ್ಲಿ ನೀರಿಗೆ ಬರವೇ ಇಲ್ಲವೆಂದು ಅರ್ಥವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬೋರ್‌ವೆಲ್ ಇಲ್ಲದ ಕಡೆಗಳಲ್ಲಿ ಮಾತ್ರ ಟ್ಯಾಂಕರ್‌ಗಳನ್ನು ಒದಗಿಸಲಾಗಿದೆ. ಬೇರೆ ಕಡೆಗಳಲ್ಲಿ ಹೆಚ್ಚು ಹೆಚ್ಚು ಒದಗಿಸುವ ಅವಶ್ಯಕತೆಯಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಾದರೆ ಬಿಜಾಪುರ ಗುಲ್ಬರ್ಗದ ಕೆಲವು ಹಳ್ಳಿಗಳಿಗೆಹೋದರೆ ಅಲ್ಲಿ ಬೋರ್‌ವೆಲ್‌ಗಳು ಒಣಗಿಹೋಗಿವೆ : ಇದಕ್ಕೇನು ಹೇಳುತ್ತೀರಿ ? ಇದು ಇಡೀ ರಾಜ್ಯದಲ್ಲಿ ಇರತಕ್ಕಂಥ ಚಿತ್ರ.

ಇನ್ನು ಮೇವಿನ ಸರಬರಾಜು ಬಗ್ಗೆ. ರಾಜ್ಯದಲ್ಲಿ 80 ಲಕ್ಷ ದನಗಳು ಇದ್ದಾಗ ಅವುಗಳಿಗೆ ಮೇವಿನ ಸಾಗಾಣಿಕೆ ವೆಚ್ಚ ಎಷ್ಟಾಯಿತು ಎಂಬುದನ್ನು ಹೇಳಿ ? ಇದನ್ನು ನೋಡಿದರೆ ತುಂಬಾ ದುರ್ಬಲ ಗತಿಯ ಹೋರಾಟ ಮಾತ್ರ ಎಂದು ಗೊತ್ತಾಗುತ್ತದೆ. ಧಾರವಾಡದ ಮುಂಡರಗಿಯಲ್ಲಿ ಲೆವೆಲ್ ಆಫ್ ಎಂಪ್ಲಾಯ್‌ಮೆಂಟ್ 1,182 ಮಂದಿ ಎಂದು ಹೇಳಿದ್ದೀರಿ. ಅಲ್ಲಿ ನೀರೇ ಇಲ್ಲ, ಬೋರ್‌ವೆಲ್ ಕೊರೆದರೂ ನೀರು ಇಲ್ಲ.

(ಅಧ್ಯಕ್ಷರು ಪೀಠವನ್ನಲಂಕರಿಸುವರು)

ಅಧ್ಯಕ್ಷರೇ ನಿಮ್ಮ ಧಾರವಾಡ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. ಅಲ್ಲಿ 11 ತಾಲ್ಲೂಕು ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾ, ಅದರಲ್ಲಿ 19,482 ಮಂದಿಗೆ ಮಾತ್ರ ಕೆಲಸ ಕೊಟ್ಟಿದ್ದೀರಿ. ಕುಡಿಯುವ ನೀರಿನ ಸಮಸ್ಯೆ ಮುಂಡರಗಿಯಲ್ಲಿ ಹೇಗಿದೆ ? ಇದು ನಮ್ಮ ಹಿರಿಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲರ ಊರು. ನಿಮಗೂ ಅನುಭವವಿರುವಂತಹ ಕ್ಷೇತ್ರ. ಅವರೂ ಕೂಡ ಮಂತ್ರಿಗಳಾಗಿದ್ದರು. ಪ್ರಸಕ್ತ ಬರಗಾಲದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿರುವ ಪ್ರಮಾಣವೆಂದರೆ ಮುಂಡರಗಿ 1, ರೋಣ 4, ಗದಗ 2, ಹಾವೇರಿಗೆ ಒಂದೂ ಇಲ್ಲ. ಅಂದರೆ ಅಲ್ಲಿ ನೀರು ಯಥೇಚ್ಛವೇ ? ನವಲಗುಂದಕ್ಕೆ 2, ಹಿರೇಕಿರೂರಿಗೆ ಟ್ಯಾಂಕರ್ ಕೊಟ್ಟಿಲ್ಲ. ನಿಜವಾಗಿ ಹೇಳಬೇಕಾದರೆ ಎಲ್ಲಾ ಬರಗಾಲ ಪೀಡಿತ ಗ್ರಾಮಗಳಿಗೂ ನೀರಿನ ಪೂರೈಕೆ ಇರಬೇಕಾಗಿತ್ತು. 1-4-84ರಿಂದ ತೆಗೆದ ಬೋರ್‌ವೆಲ್‌ಗಳ ಸಂಖ್ಯೆ : ಮುಂಡರಗಿ 1, ನಾವು ಬರಗಾಲದೊಂದಿಗೆ ಹೋರಾಡುತ್ತಿದ್ದೇವೆಯೇ ? ರೋಣ 33, ಶಿರಹಟ್ಟಿಗೆ 25 ಹುಬ್ಬಳ್ಳಿ 6 ಇದೇ ಪ್ರಕಾರ ತಮ್ಮ ಹಿರೇಕೆರೂರು 49, ಇದಕ್ಕೆ ತಾಲ್ಲೂಕು ಮಟ್ಟದಲ್ಲಿ ಜಾಸ್ತಿ ಸಿಕ್ಕಿರುವುದು. ಅಧ್ಯಕ್ಷರೇ, ತಮ್ಮಿಂದ ಇದು ಆಗಿರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆದ್ಯತೆ ಅವಶ್ಯಕತೆಗಳಿಗನುಸಾರವಾಗಿ ಇದು ಆಗಿರಬೇಕು ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಾದರೆ ಬರಗಾಲ ಇಲ್ಲವೆಂದು ಚರ್ಚೆ ಮುಗಿಸಿಬಿಡೋಣವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಎರಡು ವರ್ಷಗಳ ಹಿಂದೆ ಎಷ್ಟು ಬೋರ್‌ವೆಲ್ ಇದ್ದವು, ಈಗ ಎಷ್ಟು ಆಗಿವೆ ಎಂಬುದನ್ನು ಹೇಳಿ ? ಹಾಗೇ ಧಾರವಾಡದಲ್ಲಿ ಬೋರ್‌ವೆಲ್ ಇಲ್ಲದ ಹಳ್ಳಿಗಳೆಷ್ಟು ? ಮೊದಲೆಷ್ಟಿದ್ದವು, ಈಗೆಷ್ಟಿವೆ ?

ಶ್ರೀ ವೀರಪ್ಪ ಮೊಯಿಲಿ.—ಇತಿಹಾಸ ಕಲಿಯಲಿಕ್ಕೆ ನಾವು ಇಲ್ಲಿಗೆ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೋ ಒಂದು ಅವಧಿಯೊಳಗೆ ತೆಗೆದಿರುವ ಬೋರ್‌ವೆಲ್‌ಗಳ ಸಂಖ್ಯೆಯನ್ನು ಮಾತ್ರ ತಾವು ಹೇಳುತ್ತಿದ್ದೀರಿ. ಅದಕ್ಕಿಂತ ಹಿಂದೆ ಧಾರವಾಡದಲ್ಲಿ ತೆಗೆದ ಬೋರ್‌ವೆಲ್‌ಗಳೆಷ್ಟು ? ಮುಂಡರಗಿ ತಾಲ್ಲೂಕಿನಲ್ಲಿ ಎಷ್ಟು, ಕೋಲಾರ ಜಿಲ್ಲೆಯಲ್ಲಿ ಎಷ್ಟು ಬೇಕಾದರೆ ಆಮೇಲೆ ಹೇಳಿ ಇದನ್ನೆಲ್ಲಾ ಎಲ್ಲೆಲ್ಲಿ ಬೋರ್‌ವೆಲ್ ಇಲ್ಲವೋ ಅಲ್ಲಿಗೆಲ್ಲ ಟ್ಯಾಂಕರ್ಸ್ ಮುಖಾಂತರ ನೀರನ್ನು ಕೊಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, 2 ಜಿಲ್ಲೆಯ ಬಗ್ಗೆ ಮಾತ್ರ ನಾನು ಹೇಳಿ ಮುಗಿಸುತ್ತೇನೆ. ನಾವು ಇದನ್ನು ಒಂದು ವಿಸ್ತಾರವಾದಂತಹ ರೀತಿಯಲ್ಲಿ ನೋಡುವುದಲ್ಲ. ಸರ್ಕಾರ ಯಾವ ರೀತಿಯಲ್ಲಿ ಹಣ ಖರ್ಚು ಮಾಡುತ್ತಿದೆ, ಅದು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗುತ್ತಿಲ್ಲ ಎಂಬುದಕ್ಕೆ ನಾನು ಉದಾಹರಣೆ ಕೊಡುತ್ತಿದ್ದೇನೆ. ಎಲ್ಲಾ ಸದಸ್ಯರ ಅಭಿಪ್ರಾಯದಂತೆ ಎಲ್ಲಾ ಗ್ರಾಮ ಗಳಲ್ಲಿ ಬರಗಾಲ ಇಲ್ಲ. ಎಲ್ಲಾ ಕಡೆ ನೀರಿನ ಸರಬರಾಜು ಸಮರ್ಪಕವಾಗಿದ್ದು ಎಲ್ಲರೂ ನೆಮ್ಮದಿಯಾಗಿ ದ್ದರೆ ಈ ಚರ್ಚೆ ಬರುತ್ತಿರಲಿಲ್ಲ. ಆದರೆ, ಇವೊತ್ತಿನ ಪರಿಸ್ಥಿತಿ ಬೇರೆಯೇ ಇದೆ. 35 ಲಕ್ಷ ಜನ ಎಂದರೆ, ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್, ಅಗ್ರಿಕಲ್ಚರಲ್ ಲೇಬರರ್ಸ್ ಇವೊತ್ತು ಬರಗಾಲಕ್ಕೆ ಸಿಕ್ಕಿದ್ದಾರೆ. 3 ಲಕ್ಷ ಜನರಿಗೆ ಮಾತ್ರ ಕೆಲಸ ಕೊಟ್ಟು ಬರಗಾಲದ ಕಾಮಗಾರಿ ಮಾಡು ತ್ತೇವೆಂದು ಹೊರಟರೆ ಇದನ್ನು ಯಾರು ನಂಬಬೇಕು ? ನಾಲ್ಕು ವರ್ಷದ ಹಿಂದೆ 2 ಲಕ್ಷ ಜನರಿಗೆ ಕೆಲಸ ಕೊಟ್ಟಿದ್ದೇವೆಂದು ಹೇಳಿ ಆ ಒಂದು ಸಂತೃಪ್ತಿಯ ಮೇಲೆ ಸರ್ಕಾರ ಕಾರ್ಯಾಚರಣೆ ಮಾಡುವುದಿದ್ದರೆ ನಾನು ಏನೂ ಹೇಳಲಿಕ್ಕೆ ಆಗುವುದಿಲ್ಲ. ನಾನು ಇದನ್ನು ಮತ್ತಷ್ಟು ವಿಸ್ತಾರ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಈ ಎರಡು ವರ್ಷಗಳಿಂದ ಸುಮಾರು

3-4 ಮೆಮೊರ್ಯಾಂಡಂ ಕೊಟ್ಟರು. ಅದರಲ್ಲಿ 209.50 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇ ವೆಂದು ಆ ಮೆಮೊರ್ಯಾಂಡಂ ಅನ್ನು ಕೇಂದ್ರಕ್ಕೆ ಕಳಿಸಿಕೊಟ್ಟರು. 1983-84ರಲ್ಲಿ ಇವರು ಖರ್ಚು ಮಾಡಿದ್ದು ಎಷ್ಟು ? ಲೆಕ್ಕದ ಪ್ರಕಾರ ಕಾಮಗಾರಿಗೆ, ಬರಗಾಲಕ್ಕೆ ಖರ್ಚು ಮಾಡುವಂಥಾದ್ದು 30.52 ಕೋಟಿ ರೂಪಾಯಿಗಳು 1984-85ರಲ್ಲಿ ಖರ್ಚು ಮಾಡಿದ್ದುದು 39.87 ಕೋಟಿ ರೂಪಾಯಿಗಳು ಇವೊತ್ತು ಕೇಂದ್ರವನ್ನು 209 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆಂದು ಪತ್ರಿಕೆ ಯನ್ನು ಓದಿ ತಿಳಿದುಕೊಂಡೆ. ಇವರು ಖರ್ಚು ಮಾಡಿದ ಹಣವನ್ನು ಕೇಂದ್ರ ಕೊಡುತ್ತಿಲ್ಲವೇನೋ, ಇವರು ಜೋರಾಗಿ ಕಾಮಗಾರಿ ಮಾಡುತ್ತಿದ್ದಾರೆಂಬ ಅಭಿಪ್ರಾಯ ತೋರಿಕೆಗೆ ಬರುತ್ತದೆ. ಇವರು ನಿಜವಾಗಿ ಖರ್ಚು ಮಾಡಿರತಕ್ಕಂಥಾದ್ದು 1983-84 ಮತ್ತು 1984-85ರಲ್ಲಿ ಬರೀ 70 ಕೋಟಿ ರೂಪಾಯಿಗಳು ಮಾತ್ರ. ಕೇಂದ್ರ ಸರ್ಕಾರದ ಬಾಬತ್ತಿನಿಂದ 2 ವರ್ಷಕ್ಕೆ ಮಾರ್ಜಿನಲ್ ಮನಿ ಪ್ರಕಾರ 4 ಕೋಟಿ ರೂಪಾಯಿಗಳು ಇವರಿಗೆ ಬಂದಿದೆ. 7ನೇ ಹಣಕಾಸಿನ ಆಯೋಗದ ಲೆಕ್ಕದ ಪ್ರಕಾರ 76 ಕೋಟಿ ರೂಪಾಯಿಗಳು ನಮ್ಮ ರಾಜ್ಯಕ್ಕೆ ಅಲೋಕೇಟ್ ಮಾಡುವಂಥಾದ್ದು. ಅವರು ಲೆಕ್ಕ ತೋರಿಸಿದ ಪ್ರಕಾರ ಖರ್ಚು ಮಾಡಿದ್ದುದು 122.53 ಕೋಟಿ, 5 ವರ್ಷಕ್ಕೆ. 1980-81ರಿಂದ 84-85ರವರೆಗೆ ಸೀಲಿಂಗ್ ಪ್ರಕಾರ ಕೇಂದ್ರ ಸರ್ಕಾರದಿಂದ ಬಂದ ಹಣ 67.47 ಕೋಟಿ. ಎಂದರೆ, 10 ವರ್ಷಕ್ಕೆ 2 ಕೋಟಿ ರೂಪಾಯಿಗಳ ಪ್ರಕಾರ ಮಾರ್ಜಿನ್ ಹಣ ಬಂದಿದೆ. 5 ವರ್ಷದಿಂದ ಕೇಂದ್ರ ಸರ್ಕಾರದಿಂದ ಇವರಿಗೆ ಸಂದತಕ್ಕಂತಹ ಹಣ 77 ಕೋಟಿ 47 ಲಕ್ಷ ರೂಪಾಯಿಗಳು. 2 ವರ್ಷದಲ್ಲಿ ಇವರು 209 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು 5 ವರ್ಷಕ್ಕೆ ಖರ್ಚಾದದ್ದು 122.53 ಕೋಟಿ ರೂಪಾಯಿಗಳು. ಆದುದರಿಂದ ಇದರ ಬಗ್ಗೆ ವಾಸ್ತವಿಕವಾದಂತಹ ಒಂದು ವರದಿ ಅಥವಾ ಒಂದು ಲೆಕ್ಕವನ್ನು ಕೇಂದ್ರ ಸರ್ಕಾರಕ್ಕೆ ಕೊಡುವಾಗ ಅದನ್ನು ಸರಿಯಾದ ರೀತಿಯಲ್ಲಿ ಪರಿಗಣನೆ ಮಾಡಿ ನಾವು ವಸೂಲು ಮಾಡತಕ್ಕಂತಹ ಕಾರ್ಯಕ್ರಮವನ್ನು ಮಾಡಿದರೆ ನಮ್ಮ ಕರ್ನಾಟಕ ರಾಜ್ಯಕ್ಕೂ ಒಳ್ಳೆಯ ದಾಗುತ್ತದೆ. ನಮಗೆ ಹೆಚ್ಚು ಹಣ ಬೇಕಾಗಿದೆ ; ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಹೆಚ್ಚು ವ್ಯವಸ್ಥೆಯನ್ನು ಕೂಡ ಮಾಡಬೇಕಾಗಿದೆ. ಇದಕ್ಕೆ ಯಾವ ಕಾರ್ಯಕ್ರಮವನ್ನು ತಾವು ರೂಪಿಸಿದ್ದೀರಿ ? ದೆಲ್ಲಿಗೆ ಲೆಕ್ಕಾಚಾರ ಕೊಡತಕ್ಕಂಥಾದ್ದು, ಪತ್ರಿಕೆಗಳಿಗೆ ಬಿಡುಗಡೆ ಮಾಡತಕ್ಕಂಥಾದ್ದು ಏನಿದೆ ಇದರಿಂದ ಜನರಿಗೆ ನೆಮ್ಮದಿ ಬರುವುದಿಲ್ಲ. ಇದಕ್ಕನುಗುಣವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿದಾಗ, ಇದನ್ನು ಕರ್ನಾಟಕದ ಜನ ಒಕ್ಕೊರಲಿನಿಂದ ಸ್ವಾಗತಿಸುತ್ತಾರೆ. ಕೇಂದ್ರ ಸರ್ಕಾರದವರು 7ನೇ ವಿತ್ತೀಯ ಆಯೋಗದ ಪ್ರಕಾರ ಹಣ ಸಹಾಯ ಮಾಡುತ್ತಾರೆ. ಅದಕ್ಕೆ ಸೀಲಿಂಗ್ ಫಿಕ್ಸ್ ಮಾಡು ತ್ತಾರೆ ಅದಕ್ಕಿಂತಲೂ ತೀವ್ರವಾದಂತಹ ಬರಗಾಲ ಇದ್ದರೆ, ಒಂದು ಸ್ಪೆಷಲ್ ಕೇಸ್ ಎಂದು ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಡತಕ್ಕಂತಹ ಅನುಕೂಲ ಇದೆ. ತಮ್ಮ ಲೆಕ್ಕದ ಪ್ರಕಾರ ಸೀಲಿಂಗ್ ನಲ್ಲಿ ಕೊಡತಕ್ಕಂತಹ ಹಣದಲ್ಲಿ 9 ಕೋಟಿ ರೂಪಾಯಿಗಳ ಹಣವನ್ನು ವಸೂಲು ಮಾಡತಕ್ಕಂತಹ ಕಾರ್ಯ ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ಇಷ್ಟು ಮಾತ್ರವಲ್ಲದೆ ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್‌ನಲ್ಲಿ ಬರಗಾಲಕ್ಕೆ 170 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಸತ್ಯಾಂಶ ಎಷ್ಟು ಎಂಬುದು ಗೊತ್ತಿಲ್ಲ.

ಇನ್ನು ಬೋರ್‌ವೆಲ್‌ಗಾಗಿ 1983-84, 84-85ರಲ್ಲಿ 26 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ತಾವು ಬೋರ್‌ವೆಲ್‌ಗಾಗಿ ಖರ್ಚು ಮಾಡಿದ್ದುದು 17.2 ಕೋಟಿ ರೂಪಾಯಿಗಳು ಮಾತ್ರ. ಇದು ಬರಗಾಲದ ಪ್ರದೇಶದಲ್ಲಿ. 1984-85ರಲ್ಲಿ 20 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದಾ ರೆ.

3-30 p.m.

ಶ್ರೀ ಎಂ. ವೀರಪ್ಪ ಮೊಯಿಲಿ.—ವಾಸ್ತವಿಕಾಂಶವನ್ನು ತಾವು ಕೊಡಬೇಕು. 29ನೇ ತಾರೀಖು ಮಾರ್ಚಿ ತಿಂಗಳು ನೀವು ಹೇಳಿಕೆ ಕೊಟ್ಟಿರಿ. ಆ ದಿವಸದಿಂದ ಇಂದಿನವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಜೂನ್, ಏಪ್ರಿಲ್‌ಗಳಲ್ಲಿ ಎಷ್ಟು ಬಿಡುಗಡೆ ಮಾಡಿದ್ದೀರಿ? ಈಗಾಗಲೇ ನಿಮ್ಮ ಪ್ರಕಾರ ಕಾಮಗಾರಿ ಕೆಲಸಗಳು ಶುರುವಾಗಿಬಿಟ್ಟಿವೆ ಯಾವ ಯಾವ ಕಾಮಗಾರಿಗಳನ್ನು ಎಲ್ಲೆಲ್ಲಿ ಎಷ್ಟೆಷ್ಟು ಕೈಗೊಂಡಿದ್ದೀರಿ ಎಂದೆಲ್ಲಾ ವಿವರ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೋರಿ ನನಗೆ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಾಳೇಕಾಯಿ ಟಿ.ಬಿ. (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಶೇಕಡ 80ರಷ್ಟು ಜನ ಬೇಸಾಯದ ಮೇಲೆ ಅವಲಂಬಿತವಾಗಿರುವುದು ತಮಗೆಲ್ಲರಿಗೂ ಗೊತ್ತಿದೆ. ಒಂದೂವರೆ ದಶಕದಿಂದ ಮಳೆಯ ಅಭಾವ ರಾಜ್ಯದಲ್ಲಿ ಆಗುತ್ತಲೇ ಇದೆ. ಇದರಿಂದ ಕೃಷಿಯನ್ನೇ ನೆಚ್ಚಿಕೊಂಡಿರುವ ಜನರಿಗೆ, ರೈತ ಕೂಲಿಕಾರರಿಗೆ ಅವರ ಜೀವನೋಪಾಯಗಳಿಗೆ ಅವಕಾಶ ಕಲ್ಪಿಸಕೊಡಬೇಕಾಗಿದೆ. ಆದಾಗ್ಯೂ ಕೂಡ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇವೊತ್ತು ಆಯಾ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಸಾಗಿಸುವುದು ಒಳ್ಳೆಯದು. ಮುಖ್ಯವಾಗಿ ಜನರಿಗೆ ಕುಡಿಯುವ ನೀರು ಇಲ್ಲದೆ ಬಳಲಿದ ಪರಿಸ್ಥಿತಿಯನ್ನು ಇಂದು ಕಾಣುತ್ತಿದ್ದೇವೆ. ಶೇತ್ಕಾರಿಗೆ ಮುಳ್ಳಾಗುವ ಈ ಬರಗಾಲದ ವಿರುದ್ಧ ನಾವು ಬಹಳ ಮಾರ್ಮಿಕವಾಗಿ ಸಮರ ಮಾಡಬೇಕಾಗಿದೆ. ಜಾನುವಾರುಗಳ ಸಂತತಿ ಕಡಿಮೆಯಾಗುತ್ತಿದೆ. ಹೀಗೆ ಇದು ಮುಂದುವರಿದರೆ ಮುಂದೆ ಒಂದು ದಿನ ಜೂನಲ್ಲಿ ಮಾತ್ರ ಜಾನುವಾರುಗಳು ನೋಡಲು ಸಿಗುತ್ತವೆ. ಬಡಕಲು ಜಾನುವಾರುಗಳು ಕಣ್ಣೀರು ಸುರಿಸುತ್ತ ಕಟುಕಟ ಅಂಗಡಿಗಳತ್ತ ಹೋಗುವುದನ್ನು ನೋಡಿದಾಗ ನಮಗೆ ಬಹಳ ಖೇದವೆನಿಸುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಮೇವು ನೀರುಗಳ ವ್ಯವಸ್ಥೆಯನ್ನು ಮಾಡಬೇಕು. ಜೊತೆಗೆ ಜನಗಳ ಹೊಟ್ಟೆಬಟ್ಟೆಗೆ ಸರ್ಕಾರ ಒಂದು ಮಾರ್ಗ ಮಾಡುವ ಹೊಣೆಗಾರಿಕೆಯೂ ಇದೆ. ಇದಕ್ಕೆ ಕಾರಣ ಮಳೆ ರಾಜ್ಯದ 17 ಜಿಲ್ಲೆಗಳಲ್ಲಿ ಬರದಿರುವುದು. ಇದರಿಂದ ಅನೇಕ ಸಣ್ಣಪುಟ್ಟ ಕೈಗಾರಿಕೆಗಳೂ ಅಡ್ಡಿ ಆತಂಕಗಳನ್ನನುಭವಿಸುತ್ತಿವೆ. ಈಗ ತಕ್ಷಣ ಮಾಡಬೇಕಾಗಿರುವುದೇನೆಂದರೆ, ಈ ಸದನದ ಸದಸ್ಯರ ಸಮಿತಿಯೊಂದು ಬರಗಾಲದ ಜಿಲ್ಲೆಗಳಿಗೆ ಭೇಟಿಕೊಟ್ಟು ಯಾವ ಕಡೆ ಎಂಥ ಪರಿಹಾರ ಕಾಮಗಾರಿ ಆರಂಭಿಸಬೇಕು ಎಂಬುದನ್ನು ವರದಿ ಮಾಡಿದರೆ ಆದರ ಆಧಾರದ ಮೇಲೆ ದಿಢೀರ್ ಕ್ರಮವನ್ನು ತಾವು ಕೈಗೊಳ್ಳಬೇಕು. ಬರಗಾಲದ ಬವಣೆಗೆ ಈಡಾಗಿರುವ ರಾಜ್ಯದ ಸಮಸ್ಯೆಗಳ ವಿರುದ್ಧ ಹೋರಾಡಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅಧಿಕಾರಿ ವರ್ಗ ಎಲ್ಲರೂ ಟೊಂಕಕಟ್ಟಿ ನಿಲ್ಲಬೇಕಾಗಿದೆ. ಇದನ್ನು ಕರ್ತವ್ಯ ಎಂದು ಪರಿಗಣಿಸಬೇಕು. ಮುಖ್ಯವಾಗಿ ಜಲಾನಯನ ಪ್ರದೇಶಗಳಲ್ಲಿ ನೀರು ಸೋರುವಿಕೆಯನ್ನು ತಡೆಗಟ್ಟುವುದು, ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಭೂಗರ್ಭದಲ್ಲಿ ರಿಗ್ ಮೂಲಕ ನೀರನ್ನು ಹೊರಗಡೆ ತೆಗೆದು ಸಾಮೂಹಿಕ ಚಿಂತುರು ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಅದೂ ಅಲ್ಲದೆ, ಈಗಾಗಲೇ ಅನೇಕ ಕಾರ್ಯಗಳು ರಾಜ್ಯದಲ್ಲಿ ನಡೆಯುತ್ತಿವೆ, ಅದು ಅಷ್ಟು ಸಮರ್ಪಕವಲ್ಲವೆಂದು ನಾನು ಹೇಳುತ್ತಿದ್ದೇನೆ. ನಮಗೆ ಪರಿಹರಿಸಬೇಕಾದ ದಿನನಿತ್ಯದ ಸಮಸ್ಯೆಗಳು ಬೇಕಾದಷ್ಟಿವೆ.

ಮುಖ್ಯವಾಗಿ ರಾಜ್ಯದಲ್ಲಿ ಮೂರು ದಶಕಗಳ ಹಿಂದೆ ಇದ್ದ ಕಾಡು ಸಂಪೂರ್ಣವಾಗಿ ನಶಿಸಿ ಹೋಗುತ್ತಿದೆ. ಅದನ್ನು ಪುನಃ ನಾವು ಬೆಳೆಸಬೇಕಾಗಿದೆ. ಅನೇಕ ಕೈಗಾರಿಕೆಗಳಿಂದ ಹರಡುವ ವಿಷಾನಿಲದ ಪ್ರಭಾವವನ್ನು ಈ ನಿಸರ್ಗದಿಂದ ನಿರ್ನಾಮ ಮಾಡಬಹುದು. ತಜ್ಞರೇ ಇದನ್ನು ಹೇಳುತ್ತಿದ್ದಾರೆ. ಆದ್ದರಿಂದ ಇದೆಲ್ಲದರ ಬಗ್ಗೆ ತಕ್ಷಣ ವರದಿ ನೀಡಲು ಕಾರ್ಯಸಾಧುವಾದ ಸಮಿತಿಯೊಂದರ ರಚನೆಗಾಗಿ ತಮ್ಮ ಮೂಲಕ ಸರ್ಕಾರವನ್ನು ಕೋರಿಕೊಳ್ಳುತ್ತೇನೆ.

* ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಸಭಾಧ್ಯಕ್ಷರೇ, ಅಭಾವ ಸ್ಥಿತಿಯನ್ನು ನಾವು ಇಂದು ಎದುರಿಸುತ್ತಿದ್ದೇವೆ. ಆದರೆ ಸರ್ಕಾರ ಎಷ್ಟರಮಟ್ಟಿಗೆ ಇದರ ನಿವಾರಣೆಗೆ ಪ್ರಯತ್ನ ಮಾಡಬೇಕಾಗಿತ್ತೋ ಅಷ್ಟು ಮಾಡುತ್ತಿಲ್ಲವೆಂದು ನಾನು ಹೇಳಬಯಸುತ್ತೇನೆ. ಸುಮಾರು ನಾಲ್ಕೈದು ತಿಂಗಳು ಹಿಂದಿನಿಂದಲೇ ಸರ್ಕಾರಕ್ಕೆ ಗೊತ್ತಿತ್ತು ಮಳೆ ಬರುತ್ತಿಲ್ಲ, ಅಭಾವಸ್ಥಿತಿ ಶುರುವಾಗಿದೆ ಎಂದು. ಇದನ್ನು ತಿಳಿದು ಸೂಕ್ತ ಕ್ರಮಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಇವರು ಎಚ್ಚರಗೊಳ್ಳಲಿಲ್ಲ. ಆಪತ್ ಸ್ಥಿತಿ ಈಗ ಬಂದಿದೆ. ಇವೊತ್ತು ನಮ್ಮ ಕೊಡಗಿನಲ್ಲೇ ಹೇಳುವುದಾದರೆ ಕೊಡಗಿನ ಚರಿತ್ರೆಯಲ್ಲೇ ಮಳೆಬರದಂತಹ ದಿನ ಇದ್ದಿಲ್ಲ. ಆದರೆ ಕೊಡಗಿನಲ್ಲಿ ಮಳೆ ಇಲ್ಲದೆ ಕಾವೇರಿ ನದಿ ತುಂಬಿ ಹರಿಯುತ್ತಿಲ್ಲ. ಕೆ.ಆರ್.ಎಸ್. ತುಂಬುತ್ತಿಲ್ಲ. ಜನರಿಗೆ ನೀರಿಲ್ಲದೆ ತೊಂದರೆಯಾಗಿದೆ. ಆದರೂ ಸಹ ಇವೊತ್ತು ಕೊಡಗಿನಲ್ಲಿ ಕುಡಿಯುವ ನೀರಿಲ್ಲದೆ ಡಿಸ್ಟ್ರಿಕ್ಟ್ ಡೆವಲಪ್ಮೆಂಟ್ ಕೌನ್ಸಿಲ್ ನೀಡಿರುವ ಶಿಫಾರಸ್ಸನ್ನು

ಸರ್ಕಾರ ಒಪ್ಪದೆ ತಿರಸ್ಕರಿಸಿರುವುದನ್ನು ನೋಡಿದರೆ ಎಷ್ಟರಮಟ್ಟಿಗೆ ಬಡ ಜನತೆಯ ಮೇಲೆ ಪ್ರೇಮ ಈ ಸರ್ಕಾರಕ್ಕಿದೆ ಎಂದು ಗೊತ್ತಾಗುತ್ತದೆ. ಪುನಃ ಅಲ್ಲಿ ಗಲಾಟೆ ಆದ ಮೇಲೆ 16 ಕೊಳವೆ ಬಾವಿಗಳನ್ನು ತೆಗೆಯಲಾಯಿತು. ಆದರೂ ಕುಡಿಯುವ ನೀರಿಲ್ಲ. ಇದು ಮಳೆ ಬರತಕ್ಕಂಥ ಪ್ರದೇಶ ಅಲ್ಲ 120 ರಿಂದ 140 ಇಂಚು ಬರಬೇಕು. 54 ಇಂಚು ಮಾತ್ರ ಈಗ ಬಂದಿದೆ. ಕೊಡಗಿನಲ್ಲಿ ಇಷ್ಟು ದಿನ ಪರಿಹಾರ ಕಾಮಗಾರಿಗಳನ್ನು ಮಾಡದಿದ್ದರೂ ಈಗ ಮಾಡಬೇಕಾಗಿದೆ. ಅದಕ್ಕೋಸ್ಕರ ಕೆರೆಗಳನ್ನು ಮಾಡಬೇಕು ಇರುವ ಕೆರೆಗಳ ಹೂಳು ತೆಗೆಸಿ ಆಳ ಹೆಚ್ಚಿಸಬೇಕಾಗಿದೆ. ಈಗ ಕೇವಲ ಕಾಫಿ, ಕಿತ್ತಳೆಯಂಥವನ್ನು ಮಾತ್ರ ಬೆಳೆಯುವವರು ಕೊಡಗಿನಲ್ಲಿಲ್ಲ. ಅಲ್ಲಿಯೂ ರಾಗಿ, ಭತ್ತ, ಟೊಮೊಟೋ ಬೆಳೆಯಬಹುದು. ಅಲ್ಲಿ ಏಲಕ್ಕಿ ಎಷ್ಟು ಕಷ್ಟಸ್ಥಿತಿಯಲ್ಲಿದೆ ಎಂದರೆ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಹೀಗಾಗಿ 100ಕ್ಕೆ 40ರಷ್ಟು ಬೆಳೆಗಾರರು ಬೆಳೆ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ಯಾವ ಪರಿಹಾರವನ್ನು ಒದಗಿಸಿಲ್ಲ. ಅಷ್ಟೇ ಅಲ್ಲ; 400 ರೂಪಾಯಿಗಳ ಬೆಲೆ ಬಾಳತಕ್ಕ ಏಲಕ್ಕಿ 80 ರೂಪಾಯಿಗಳಿಗೆ ಇಳಿದಿರತಕ್ಕ ಕಾಲದಲ್ಲಿ ಸರ್ಕಾರದವರು ಇಂಥ ಪದಾರ್ಥಗಳಿಗೆ ಬೆಲೆ ನಿಗದಿ ಮಾಡಲು ಮುಂದಾಗಬೇಕೆಂದು ಹೇಳುತ್ತೇನೆ. ಕಳೆದ 4 ತಿಂಗಳುಗಳಿಂದ ಏನೂ ಕೆಲಸ ಮಾಡದೆ ಸುಮ್ಮನೆ ಕುಳಿತಿದ್ದೀರಿ. ಈ ಬಗ್ಗೆ ಮೊನ್ನೆ ಡಿಡಿಸಿ.ಯಲ್ಲಿ ಕೇಳಿದಾಗ ಯಾವ ಅಧಿಕಾರಿಗಳೂ ಸಹ ಸರಿಯಾದ ಉತ್ತರ ಹೇಳಲಿಲ್ಲ. ಮಳೆ ಇಲ್ಲವೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಾಗಲಿ, ವ್ಯವಸಾಯ ಇಲಾಖೆಯ ಅಧಿಕಾರಿಗಳಾಗಲಿ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಲ್ಲವೆಂದು ನಾನು ಹೇಳಬಯಸುತ್ತೇನೆ. 18ರಂದು ಡಿಡಿಸಿ.ಯಲ್ಲಿ ಕೇಳಿದರೂ ಯಾರೂ ವರದಿಯನ್ನು ಕೊಡುತ್ತಿಲ್ಲ. ಆದ್ದರಿಂದ, ಸರ್ಕಾರಕ್ಕೆ ಜನತೆಯ ಬಗ್ಗೆ ಒಳ್ಳೆಯ ಅಭಿಪ್ರಾಯ, ಭಾವನೆ ಇಲ್ಲವೆಂದು ಹೇಳಬೇಕಾಗಿದೆ. ನಮ್ಮ ಕೊಡಗಿಗೆ ಇಷ್ಟು ವರ್ಷದಿಂದ ಇಲ್ಲದ ಬರಗಾಲ ಈ ವರ್ಷ ಬಂದಿದೆ. ಇನ್ನು ಮುಂದೆ ಬಾರದ ಹಾಗೆ ನೋಡಿಕೊಳ್ಳತಕ್ಕ ಹೊಣೆಯನ್ನು ಸರ್ಕಾರ ಹೊತ್ತು ಕೊಳ್ಳಬೇಕು. ಅದಕ್ಕೋಸ್ಕರ ಎಲ್ಲೆಲ್ಲಿ ನೀರನ್ನು ಸಂಗ್ರಹ ಮಾಡಲಿಕ್ಕೆ ಸಾಧ್ಯವಿದೆ ಅಂಥ ಕಡೆಗಳಲ್ಲೆಲ್ಲ ಕೆರೆಕಟ್ಟೆಗಳನ್ನು ಕಟ್ಟಿ, ಬಾವಿಗಳನ್ನು ಮಾಡಿ ಎಂದು ನಾನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಗೆ ನೂರು ಬಾವಿಗಳ ಮಂಜೂರಾದರೂ ಸಹ ಇದುವರೆಗೆ ಒಂದು ಬಾವಿ ಕೂಡ ಪೂರ್ತಿಯಾಗಿಲ್ಲ. ಈ ವಿಚಾರ ಮಂತ್ರಿಗಳಿಗೆ ಕೂಡ ಗೊತ್ತಿದೆ. ಮುಖ್ಯಮಂತ್ರಿಗಳಿಗೆ ಸಹ ಕೊಡಗಿನಲ್ಲಿ ಆಸ್ತಿ ಇದೆ. ಅವರಾದರೂ ಕೊಡಗಿನ ಮೇಲೆ ಮಮತೆ ಇಟ್ಟು ಕೊಡಗಿನ ಜನತೆಯ ಕಷ್ಟವನ್ನು ಪರಿಹಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಜೀವಿಜಯರವರ ಊರಿನಲ್ಲಿ ಇನ್ನೂ ಕಷ್ಟವಿದೆ. ಮಡಕೇರಿಯಲ್ಲಿ ರಾಗಿ ಬೆಳೆ ಬೆಳೆಯುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕಾವೇರಿಯಲ್ಲೇ ನೀರಿಲ್ಲ.

ಶ್ರೀ ಡಿ. ಎಸ್. ಚಿನ್ನಪ್ಪ.—ಇನ್ನು ಎರಡು ತಿಂಗಳು ಮಳೆ ಬಾರದಿದ್ದರೆ ಬೆಂಗಳೂರಿಗೆ ಕೂಡ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ನಮ್ಮ ಜಿಲ್ಲೆಯ ಬಗ್ಗೆ ಹೆಚ್ಚಿನ ಗಮನ ಹರಿಸಿ ಕೊಡಗಿನ ಮೂರು ತಾಲ್ಲೂಕುಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಪರಿಗಣಿಸಿ ಅದಕ್ಕೆ ಕೊಡತಕ್ಕ ಸೌಲಭ್ಯ ಏನೇನು ಇದೆ ಅದನ್ನೆಲ್ಲಾ ಕೊಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂರು ತಾಲ್ಲೂಕುಗಳು ಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿವೆ. ತರೀಕೆರೆ ತಾಲ್ಲೂಕಿನಲ್ಲಿ ಹೇಳಬೇಕಾದರೆ, 246 ಹಳ್ಳಿಗಳ ಪೈಕಿ 221 ಹಳ್ಳಿಗಳು ಪೂರ್ಣವಾಗಿ ಬರಗಾಲದ ದವಡೆಗೆ ಸಿಕ್ಕಿವೆ. ಕೆಲವು ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ತೆಗೆದರೂ ವೈಫಲ್ಯತೆಯನ್ನು ಕಾಣುತ್ತೇವೆ. ಕೊಳವೆ ಬಾವಿಗಳನ್ನು ತೆಗೆಯುವಾಗ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ 2-3 ವರ್ಷಗಳ ಹಿಂದೆ ಏನು ಒಂದು ಗುರುತನ್ನು ಮಾಡಿ ಇಂಥ ಕಡೆ ಕೊಳವೆ ಬಾವಿಗಳನ್ನು ತೆಗೆಯಬಹುದೆಂದು ಹೇಳಿದ್ದಾರೆ ಅಂಥ ಕಡೆ ತೆಗೆಯುತ್ತಿದ್ದಾರೆ. ಹೀಗಾಗಿ ಇವತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ನೀರಿಲ್ಲದೆ ಮೈಲಿಗಟ್ಟಲೆ ದೂರ ಹೋಗಿ ನೀರನ್ನು ತರುತ್ತಿದ್ದಾರೆ. ಆ ಬವಣೆಯನ್ನು ಮೊದಲು ಪರಿಹರಿಸಬೇಕು. ಅಡಿಕೆ ಮತ್ತು ತೆಂಗಿನ ಬೆಳೆಗಾರರಿಗಂತೂ ತುಂಬಾ ತೊಂದರೆಯಾಗುತ್ತಿದೆ. ಕಾರಣ ಅಡಿಕೆ ಬೆಳೆ ಅರ್ಧದಷ್ಟು ಕಡಿಮೆಯಾಗಿದೆ. ಹೀಗಾಗಿ ಅಡಿಕೆ ಗಿಡವನ್ನೇ ಕಡಿಯುವ ಪರಿಸ್ಥಿತಿ ಬಂದಿದೆ. ಆದ್ದರಿಂದ, ರೈತರಿಗೆ ಕೊಳವೆ ಬಾವಿಗಳನ್ನು ರಿಯಾಯಿತಿ ದರದಲ್ಲಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ತೆಂಗು ಕೂಡ ಸಂಪೂರ್ಣವಾಗಿ ಹಾಳಾಗುತ್ತಿದೆ. ಆದ್ದರಿಂದ, ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಳವೆ ಬಾವಿಗಳನ್ನು ತೆಗೆಸಿಕೊಟ್ಟರೆ ಅನುಕೂಲವಾಗುತ್ತದೆ. ಒಂದು ಸಾರಿ ಅಡಿಕೆ ಮರವನ್ನು ಕಡಿದು ಪುನಃ ಬೇರೆ ಮರವನ್ನು ಬೆಳೆಸಿ ಅದರಿಂದ ಫಲ ಪಡೆಯಬೇಕಾದರೆ ಹತ್ತಾರು ವರ್ಷಗಳ ಕಾಲ ಹಿಡಿಯುತ್ತದೆ. ಅಡಿಕೆ ಮತ್ತು ತೆಂಗಿನ ಬೆಳೆಗಾರರಿಗೆ ವಿಶೇಷವಾಗಿ ರಿಯಾಯಿತಿ ಕೊಟ್ಟು ಕೊಳವೆ

ಬಾವಿಗಳನ್ನು ತೆಗೆಸಿಕೊಡಲು ಮಂತ್ರಿಗಳು ಗಮನ ಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ತೋಟ ಹಾಳಾಗಿ ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಇದನ್ನು ಸರ್ಕಾರ ವಿಶೇಷವಾಗಿ ಪರಿಗಣಿಸಿ ಅನುಕೂಲ ಮಾಡಿಕೊಡಬೇಕೆಂದು ಕಂದಾಯ ಮಂತ್ರಿಗಳಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ, ಪ್ರತಿಯೊಂದು ಹಳ್ಳಿಯಲ್ಲಿ ಆಕ್ಷನ್ ಪ್ಲಾನ್ ಎಂದು ಇರುವುದಿಲ್ಲ. ಅದಕ್ಕೆ ಬಿ.ಡಿ.ಓ. ಮತ್ತು ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ಆಕ್ಷನ್ ಪ್ಲಾನ್ ಆಗಿಲ್ಲವಾದ್ದರಿಂದ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ, ಆಕ್ಷನ್ ಪ್ಲಾನ್ ಮಾಡಿ ಕೂಡಲೇ ಕೆಲಸ ಮಾಡುವುದಕ್ಕೆ ಪೂರ್ಣ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 50 ಪಂಚಾಯಿತಿಗಳಿವೆ. ಪ್ರತಿಯೊಂದು ಪಂಚಾಯಿತಿಗೂ 50 ಸಾವಿರ ರೂಪಾಯಿಗಳಂತೆಯೂ ಮತ್ತು ಕಡೂರು ಹಾಗೂ ತರೀಕೆರೆಗೆ ಪುರಸಭೆಗಳಿಗೆ ತಲಾ 25 ಲಕ್ಷ ರೂಪಾಯಿಗಳಂತೆ ಹಣ ಒದಗಿಸಿ ತಕ್ಷಣ ತೆಂಗು ಮತ್ತು ಅಡಿಕೆ ಬೆಳೆಗಾರರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ನೀಡಿದಂತಹ ಹೇಳಿಕೆಯನ್ನು ಕೂಲಂಕಷವಾಗಿ ಓದಿದ್ದೇನೆ. ಹಿಂದೆ ನಾನೂ ಕಂದಾಯ ಮಂತ್ರಿಯಾಗಿದ್ದೆ; ಇಂದು ಅವರು ಆಗಿದ್ದಾರೆ. ಈ ಕೆಲಸವನ್ನು ನಾನು ಹಿಂದೆಯೇ ಮಾಡಿದ್ದೇನೆ. ತಾವು ಏನು ಬರಗಾಲವನ್ನು ಕೊನೆಗಾಣಿಸಬೇಕೆಂದು ಪ್ರಯತ್ನ ಮಾಡಿದ್ದೀರಿ ಅಥವಾ ಬರಗಾಲವನ್ನು ಕೊನೆಗಾಣಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದು ಬಹಳ ಒಳ್ಳೆಯದು. ಅದು ಮೊದಲಿನಿಂದ ಹಾಕಿಕೊಂಡಿರತಕ್ಕ ಕಾರ್ಯಕ್ರಮವಾಗಿದೆ. ಈಗ ನೀವು ಹಾಕಿಕೊಂಡಿರುವುದೇನು ಹೊಸದಲ್ಲ. ಬರಗಾಲ ಬಂದಾಗ, ಮಳೆ ಇಲ್ಲದಾಗ ನಾವು ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ತಾವು ಕೈಗೊಂಡಿದ್ದೀರಿ. ಈಗ ಹಣ ಜಾಸ್ತಿ ಬೇಕು, ಕಡಿಮೆ ಬೇಕೆಂಬುದರ ಬಗ್ಗೆ ವಾದ ವಿವಾದಗಳು ಇವೆ. ಕೇಂದ್ರ ಸರ್ಕಾರದಿಂದ ಹಣ ಕೊಡಿಸಿ ಎಂಬುದು ಒಂದು ವಾದ. ತಮಗೆ ಖರ್ಚು ಮಾಡಲಿಕ್ಕೆ ಹಣ ಇದೆಯೋ ಇಲ್ಲವೇ ಎಂಬುದು ಇನ್ನೊಂದು ವಾದ. ಕಳೆದ ಎರಡು ವರ್ಷಗಳಿಂದ ಬರಗಾಲ ಬಂದಿದೆ ; ಅದಕ್ಕಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ. ಆದರೂ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿಲ್ಲ : ಸಾಕಷ್ಟು ಹಣವನ್ನು ಈ ಬಾಬಿಗೆ ಒದಗಿಸುತ್ತಿಲ್ಲವೆಂಬುದು ನನ್ನ ಸ್ಪಷ್ಟವಾದ ಮಾತು. ಈ ತಿಂಗಳ ಒಂದನೇ ತಾರೀಖಿನವರೆಗೆ ನಮ್ಮ ತಾಲ್ಲೂಕಿನ ಸ್ಥಿತಿಯನ್ನು ಹೇಳಬೇಕಾದರೆ, ಅಲ್ಲಿ ಖರ್ಚು ಮಾಡಲಿಕ್ಕೆ ಹಣ ಇಲ್ಲ. ನಾನೇನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ಸರ್ಕಾರದಿಂದ ಹಣ ಬಂದಿಲ್ಲ, ಬಂದಾಗ ಖರ್ಚು ಮಾಡುತ್ತೇವೆಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ. ಅಂದಮೇಲೆ ನೀವು ಹಣ ಒದಗಿಸುವುದು ಯಾವಾಗ ? ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಪ್ರಾರಂಭ ಮಾಡುವುದು ಯಾವಾಗ ಎಂಬ ಪ್ರಶ್ನೆ ಬರುತ್ತದೆ. ಎನ್.ಆರ್.ಇ.ಪಿ ಮತ್ತು ಆರ್.ಎಲ್.ಇ.ಜಿ.ಪಿ. ಎಂಬ ಕಾರ್ಯಕ್ರಮಗಳನ್ನು ಮಾಡಿದ್ದೀರಿ. ಈ ಎರಡು ಕಾರ್ಯಕ್ರಮಗಳ ಪ್ರಕಾರ ಹಳ್ಳಿಗಾಡಿನಲ್ಲಿರತಕ್ಕ ಬಡವರು ಏನಿದ್ದಾರೆ, ವ ವಸಾಯ ಕಾರ್ಮಿಕರು ಏನಿದ್ದಾರೆ ಅವರಿಗೆ ಅನಾನುಕೂಲವಾಗುತ್ತಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ನನ್ನ ದೃಷ್ಟಿಯಲ್ಲಿ ಅವರಿಗೆ ಈ ಕಾರ್ಯಕ್ರಮಗಳಿಂದ ನೇರವಾಗಿ ಅನುಕೂಲವಾಗುತ್ತಿಲ್ಲ ; ಅವರಿಗೆ ಕೆಲಸ ಸಿಗುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಎಸ್.ಆರ್.ಇ.ಪಿ ಪ್ರೋಗ್ರಾಂ ತೆಗೆದುಕೊಂಡು ಸೇತುವೆ, ರಸ್ತೆ, ಕೆರೆ ನಿರ್ಮಾಣ ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಅದರಲ್ಲಿ ಕಾರ್ಮಿಕರಿಗೆ ಕೆಲಸ ಕೊಡಬೇಕೆಂಬ ಉದ್ದೇಶ ಇದೆಯೇ ಹೊರತು ಕಂಟ್ರಾಕ್ಟ್‌ದಾರರಿಗೆ ಕೆಲಸ ಕೊಡಬೇಕೆಂಬ ಉದ್ದೇಶವಾಗಲಿ ಅಥವಾ ಬೇರೆ ಯಾವುದೇ ಉದ್ದೇಶವಾಗಲಿ ಇಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಹೋಗಿ ನೋಡಿ. ಅಲ್ಲಿ ಕಂಟ್ರಾಕ್ಟರ್‌ಗಳು ಎನ್.ಆರ್.ಇ.ಪಿ. ಕೆಲಸ ಮಾಡುತ್ತಿದ್ದಾರೆಯೇ ವಿನಹ ಕಾರ್ಮಿಕರಿಗೆ ನೇರವಾಗಿ ಕೆಲಸ ಕೊಡತಕ್ಕ ವ್ಯವಸ್ಥೆ ಆಗಿಲ್ಲ, ಆಗುವುದೂ ಇಲ್ಲ, ಅದು ಸಾಧ್ಯವೂ ಇಲ್ಲ ಎಂದು ಹೇಳುತ್ತೇನೆ. ಕಾರಣವೇನೆಂದರೆ ಇವರು ಕೊಡತಕ್ಕ ಕೂಲಿ ಕಡಿಮೆ. 7 ರೂಪಾಯಿ 80 ಪೈಸೆ ಕೂಲಿಯನ್ನು ಇವರು ಕೊಡುತ್ತಿದ್ದಾರೆ. ಈ ಕೂಲಿಗೆ ಕಾರ್ಮಿಕರು ಯಾರೂ ಬರುವುದಿಲ್ಲ. ಏಕೆಂದರೆ ಬೇರೆ ಕಡೆ 10-15 ರೂಪಾಯಿವರೆಗೆ ಕೂಲಿ ಕಾರ್ಮಿಕರಿಗೆ ಕೊಡುತ್ತಿದ್ದಾರೆ. ಸಾಮಾನುಗಳನ್ನು ಒದಗಿಸುವುದಕ್ಕೆ ಎಸ್.ಆರ್. ರೇಟ್ಸ್ ಇಟ್ಟುಕೊಂಡಿದ್ದಾರೆ. ಈ ಎಸ್.ಆರ್. ರೇಟ್ಸ್ ಯಾವುದೋ ಹಳೆಯದು. ಎಕ್ಸ್‌ಕಲೇಷನ್ ಆಫ್ ಪ್ರೈಸಸ್ ಪ್ರಕಾರ ಸಾಮಾನುಗಳ ಬೆಲೆ ಜಾಸ್ತಿಯಾಗುತ್ತದೆ. ಇದರಿಂದ ಎಸ್.ಆರ್. ರೇಟ್ಸ್ ಪ್ರಕಾರ ಸಾಮಾನುಗಳು ಸಿಗುವುದಿಲ್ಲ. ಇವರು ಕೊಡತಕ್ಕ ಕೂಲಿಗೆ ಜನ ಬರುವುದಿಲ್ಲ, ಸಾಮಾನುಗಳೂ ಸಿಗುವುದಿಲ್ಲ, ಮತ್ತೆ ಕೆಲಸ ಮಾಡುವುದು ಯಾವುದು ? ಅದಕ್ಕೋಸ್ಕರ ಕಂಟ್ರಾಕ್ಟರುಗಳನ್ನು ನೇಮಿಸಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಬೇರೆ ಸ್ನೇಹಿತರಿಗೂ ಈ ವಿಷಯ ಗೊತ್ತಿರಬೇಕು. ನಾನು ಸ್ಪಷ್ಟವಾಗಿ ಒಂದು ಮಾತನ್ನು ಹೇಳು

ತ್ತಿದ್ದೇನೆ, ಎಲ್ಲಾ ಕಾರ್ಯಕ್ರಮಗಳಲ್ಲೂ ಕೂಡ, ಅಂದರೆ ಹಳ್ಳಿಗಾಡಿನಲ್ಲಿ ಕೆಲಸ ಇಲ್ಲದೇ ಇರತಕ್ಕ, ಬಳಲತಕ್ಕ ಜನರಿಗೆ ಕೆಲಸ ಕೊಡಬೇಕೆಂಬ ಉದ್ದೇಶ ಇದ್ದರೂ ಕೂಡ ಯಾರಿಗೂ ಇದರಿಂದಾಗಿ ಕೆಲಸ ಸಿಗುತ್ತಿಲ್ಲ, ಕಂಟ್ರಾಕ್ಟರುಗಳ ಮುಖಾಂತರ ಕೆಲಸ ಮಾಡುತ್ತಿದ್ದಾರೆ. ನನ್ನ ತಾಲ್ಲೂಕಿನಲ್ಲಿ ನಾನು ವಿಚಾರ ಮಾಡಿದ್ದೇನೆ. ಕಂಟ್ರಾಕ್ಟರ್ ಬಿಟ್ಟು ಬೇರೆಯವರು ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಸ್ಪಷ್ಟವಾಗಿ ಅವರು ಹೇಳುತ್ತಿದ್ದಾರೆ. ಕಂಟ್ರಾಕ್ಟರ್ ಹೆಸರು ಪುಸ್ತಕದಲ್ಲಿರುವುದಿಲ್ಲ. ಆದರೂ ಕೂಡ ಕಂಟ್ರಾಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. ಎನ್.ಆರ್.ಇ.ಪಿ. ಕೆಲಸ ಮಾಡಬೇಕೆಂದು ಸರ್ಕಾರದವರು ಒತ್ತಾಯ ಮಾಡುತ್ತಾರೆ. ಅದಕ್ಕೋಸ್ಕರ ಯಾವ ರೂಪದಲ್ಲೋ ಕೆಲಸ ತೋರಿಸುತ್ತೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಯಾರನ್ನೋ ಕೆಲಸಕ್ಕೆ ನೇಮಿಸಿಕೊಂಡಂತೆ ಹೆಸರುಗಳನ್ನು ಬರೆದುಕೊಂಡು ಹಾಜರಿ ಕೂಡ ಬರೆಯುತ್ತಾರೆ. ಕೆಲಸ ಮಾತ್ರ ಕಂಟ್ರಾಕ್ಟರ್ ಮಾಡುತ್ತಿದ್ದಾರೆ. ಇದರಿಂದ ಹಳ್ಳಿಗಾಡಿನಲ್ಲಿರತಕ್ಕ ಬಡವರಿಗೆ ಕೆಲಸ ಸಿಗುತ್ತಿಲ್ಲ. ಸಮೃದ್ಧಿ ಕಾಲದಲ್ಲಿ ಬಡವರಿಗೆ ಹೊಟ್ಟೆಗೆ ತಿನ್ನುವುದಕ್ಕೆ ಮಾತ್ರ ಸಿಗುತ್ತದೆ. ಅಭಾವದ ಕಾಲದಲ್ಲಿ ಅವರು ಉಪವಾಸವೇ ಇರಬೇಕಾಗುತ್ತದೆ. ಅವರಿಗೆ ಯಾರೂ ಕೂಡ ಸಹಾಯ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮಂತ್ರಿಯಾಗಿದ್ದಾಗ ಎಂಪ್ಲಾಯ್ಮೆಂಟ್ ಅಫರ್ಮೇಷನ್ ಸ್ಕಿಂ ಎಂದು ಮಾಡಿದ್ದೆ. ಅದನ್ನೇ ನೀವು ಈಗ ಗ್ಯಾರಂಟಿ ಸ್ಕೀಂ ಎಂದು ತಂದಿದ್ದೀರಿ. ಅದು ಬೇರೆ ವಿಚಾರ. ಅದು ಅಖಿಲ ಭಾರತ ಕಾರ್ಯಕ್ರಮ ಆಗಬಹುದು ; ನಿಮ್ಮ ಕಾರ್ಯಕ್ರಮ ಆಗಿರಬಹುದು. ಆದರೆ ಅದನ್ನು ಜಾರಿಗೆ ಕೊಡುವಾಗ ಆತ್ಮಸಾಕ್ಷಿಯಾಗಿ ಸರಿಯಾಗಿ ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಿ. ಕೂಲಿ ಜಾಸ್ತಿ ಮಾಡದೇಹೋದರೆ ಎನ್.ಆರ್.ಇ.ಪಿ ಸ್ಕಿಮ್ ಯಶಸ್ವಿಯಾಗುವುದಿಲ್ಲ. ಎಸ್.ಆರ್. ರೇಟ್ಸ್ ಪ್ರಕಾರ ಕೆಲಸ ಆಗುವುದಿಲ್ಲ. ನೀವು ಕೊಡುವ ದುಡ್ಡಿಗೆ ತಕ್ಕಂತೆ ಕಂಟ್ರಾಕ್ಟರುಗಳು ಕೆಲಸ ಮಾಡುತ್ತಾರೆ. ದುಡ್ಡು ಖರ್ಚು ಮಾಡಿದ್ದಕ್ಕೆ ಸರ್ಟಿಫಿಕೇಟ್ ಕೊಡುತ್ತಾರಷ್ಟೆ. ಇದರಿಂದ ಕಂಟ್ರಾಕ್ಟರಿಗೆ ಸಮಾಧಾನವಾಗಬಹುದು. ನಿಮಗೆ ಸಮಾಧಾನವಾಗಬಹುದು, ಜನರಿಗೆ ಮಾತ್ರ ಸಮಾಧಾನವಾಗುವುದಿಲ್ಲ. ಜನಗಳ ಸೇವೆ ಮಾಡಬೇಕು, ಜನಗಳಲ್ಲಿ ನಂಬಿಕೆ ಇಡಬೇಕು ಎಂದು ನೀವು ಭಾಷಣ ಮಾಡುವುದನ್ನು ಕೇಳಿದ್ದೇನೆ. ಹೇಳಿಕೆಗಳನ್ನು ಕೊಡುವುದನ್ನು ನೋಡಿ ಆನಂದವಾಗಿದೆ. ಜನರು ನಿಮ್ಮ ಬಗ್ಗೆ ಎಲ್ಲಿಯವರೆಗೆ ನಂಬಿಕೆ ಇಟ್ಟಿರುತಾರೋ ಅಲ್ಲಿಯವರೆಗೆ ನೀವು ಅಧಿಕಾರದಲ್ಲಿರುತ್ತೀರಿ. ಈಗ ಜನಗಳು ನಿಮ್ಮ ಬಗ್ಗೆ ನಂಬಿಕೆ ಇಟ್ಟಿದ್ದಾರೆ. ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕಾರ್ಯ ನಿರ್ವಹಣೆ ಮಾಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸರ್ಕಾರದವರು ಈ ಬಗ್ಗೆ ಗಮನ ಹರಿಸಿ ನ್ಯೂನತೆಗಳೇನಿವೆ ಅದನ್ನು ಸರಿಪಡಿಸಿ, ಕೂಲಿ ಜಾಸ್ತಿ ಮಾಡುವ ಕೆಲಸವನ್ನಾಗಲೀ ಅಥವಾ ಬೇರೆ ಕೆಲಸಗಳನ್ನಾಗಲೀ ಮಾಡಿ ಜನರಿಗೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಒಂದೇ ಇಲಾಖೆಯಿಂದ ಎಲ್ಲಾ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿನಲ್ಲಿ ಬಿ.ಡಿ.ಓ. ಆಫೀಸ್ ಇದ್ದರೆ ಆ ಇಲಾಖೆ ಒಂದರಿಂದಲೇ ಎಲ್ಲಾ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಇಲಾಖೆಗಳ ನೌಕರರನ್ನೂ ಸೇರಿಸಿದರೆ ಒಂದು ತಾಲ್ಲೂಕಿನಲ್ಲಿ ಸುಮಾರು 1000ದಿಂದ 1400ರವರೆಗೆ ನೌಕರರಿರುತ್ತಾರೆ. ಮೇಷ್ಟ್ರುಗಳು, ಪೋಲೀಸ್ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯವರು ಇತರ ಎಲ್ಲಾ ಇಲಾಖೆಗಳವರೂ ಸೇರಿದರೆ ಇಷ್ಟು ಜನರಾಗುತ್ತಾರೆ. ಇವರೆಲ್ಲರಿಂದಲೂ ಈ ಕೆಲಸ ಮಾಡಿಸಿ. ಒಬ್ಬ ಜ್ಯೂನಿಯರ್ ಇಂಜಿನಿಯರ್ ಅಥವಾ ಒಬ್ಬ ಎಗ್ಸಿಕ್ಯುಟೀವ್ ಇಜನಿಯರ್‌ನಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಥವಾ ಬಿ.ಡಿ.ಓ.ಗೆ ಕೊಟ್ಟರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಬರಗಾಲದ ವಿಷಯದಲ್ಲಿ ಕೂಲಂಕಷವಾಗಿ ಯೋಜನೆ ಮಾಡಬೇಕು. ವಾರ್‌ಫುಟಿಂಗ್ ಪ್ರೋಗ್ರಾಂ ತರಹ ಇದನ್ನು ಮಾಡಬೇಕೆಂದು ನಮ್ಮ ಸ್ನೇಹಿತರು ಹೇಳಿದರು. ಈ ಕೆಲಸ ಸಮಗ್ರವಾಗಿ ಆಗಬೇಕಾದರೆ ಎಲ್ಲಾ ಇಲಾಖೆ ಅಧಿಕಾರಿಗಳ ಕೋ-ಆರ್ಡಿನೇಷನ್ ಕಮಿಟಿ ಮಾಡಿ ಅವರ ಶಕ್ತ್ಯಾನುಸಾರ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡುವುದಕ್ಕೆ ಕಡ್ಡಾಯವಾಗಿ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಅವರ ಮೇಲೆ ಹೊರೆ ಹೇಳಿದರೆ ಅವರು ಕೆಲಸ ಮಾಡಿಯೇ ಮಾಡುತ್ತಾರೆ. ನಾನು ಇದೇ ರೀತಿ ಎಲ್ಲಾ ಇಲಾಖೆ ಅಧಿಕಾರಿಗಳ ಮೇಲೆ ಹೊರೆ ಹೇರಿ ಕೆಲಸ ಮಾಡಿಸಬೇಕೆಂದಿದ್ದೆ. ಅಷ್ಟರಲ್ಲಿ ನಾವು ಹೋದೆವು. ಆದರೆ ತಾವು ಈ ಕೆಲಸ ಮಾಡಿ. ಎಲ್ಲರೂ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲರೂ ಸರ್ಕಾರಿ ನೌಕರರಾಗಿದ್ದಾರೆ. ಅವರೂ ಹೊರೆ ಹೊರುವುದಕ್ಕೆ ತಯಾರಾಗಿದ್ದಾರೆ, ಈ ಹೊರೆಯನ್ನು ಹೊರಿಸಿ ಕಲಸ ತೆಗೆದುಕೊಳ್ಳಿ. ಬರಗಾಲದಂಥ ಕಷ್ಟ ಪರಿಸ್ಥಿತಿಯಲ್ಲಿ ಎಲ್ಲರ ಸಹಕಾರ ತೆಗೆದುಕೊಳ್ಳಬೇಕು. ಕಾನ್‌ಸ್ಕ್ರಿಪ್‌ಷನ್ ಎಂದು ಹೊರದೇಶದಲ್ಲಿ ಮಾಡುತ್ತಿದ್ದಾರೆ, ಆ ತರಹ ಪ್ರತಿಯೊಬ್ಬರೂ ಕೆಲಸ ಮಾಡಬೇಕು ಎಂದು ಒತ್ತಾಯ ಮಾಡಿ. ನಾನು ಈ ವಿಚಾರದಲ್ಲಿ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಿನ್ನೆ ದಿವಸ ಮಳೆ ಬಗ್ಗೆ ಪ್ರಸ್ತಾಪ ಬಂತು. ಮಳೆಗೂ ಬರಗಾಲಕ್ಕೂ ಸಂಬಂಧ ಉಂಟು. ಮಳೆ ಬರದೇಹೋದರೆ ತೊಂದರೆಗಳಾಗುತ್ತವೆ. ಆದರೆ ಈ ವಿಚಾರದಲ್ಲಿ ಏನೇನೋ ಮಾಡಿ ಜನರ ಮನಸ್ಸನ್ನು ಬೇರೆ ಕಡೆ ಸೆಳೆಯುವುದಕ್ಕೆ ಪ್ರಯತ್ನ

ಮಾಡಬೇಡಿ. ಯಾರು ಬೇಕಾದರೂ ಯಜ್ಞ ಮಾಡಲಿ, ಏನಾದರೂ ಮಾಡಲಿ. ಆದರೆ ಜನರನ್ನು ಪ್ರಜ್ಞಾಹೀನರನ್ನಾಗಿ ಮಾಡಿದರೆ ಅವರು ನಾಗರೀಕರಾಗಿ ಬಾಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ಡೆಮಾಕ್ರಟಿಕ್ ಮತ್ತು ಸೆಕ್ಯುಲರ್ ಸೆಟಪ್ ಇದೆ. ಮತಾತೀತ ರಾಷ್ಟ್ರದಲ್ಲಿ ಮಳೆ ಬರಲಿಲ್ಲ ಎಂದು ಯಾವುದೋ ಧರ್ಮದ ಹೆಸರಿನಲ್ಲಿ ಜನರನ್ನು ಪ್ರಜ್ಞಾಹೀನರನ್ನಾಗಿ ಮಾಡಿದರೆ ಅದಕ್ಕಿಂತ ಅಭಾಸವಾಗಿರತಕ್ಕ ಕೆಲಸ ಯಾವುದೂ ಇಲ್ಲ ಎಂದು ಹೇಳುತ್ತೇನೆ. ಇಂಥ ಕೆಲಸ ಮಾಡಬಾರದು ಎಂದು ಹೇಳಿದರೆ ಬಸವಲಿಂಗಪ್ಪನವರು ನಾಸ್ತಿಕರು ಎಂದು ಹೇಳುತ್ತಾರೆ. ನಾನೂ ನಾಸ್ತಿಕನೂ ಅಲ್ಲ : ಆಸ್ತಿಕನೂ ಅಲ್ಲ. ಪ್ರಕೃತಿ ನಿಯಮದಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ದೇವರು ಇದ್ದಾನೋ ಇಲ್ಲವೋ ಎಂಬ ಪ್ರಶ್ನೆಗೆ ನಾನು ಹೋಗುವುದಿಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ, ನಮ್ಮ ರಾಜ್ಯದಲ್ಲಿ ಒಂದು ಪ್ರಜ್ಞಾವಂತ ಸಮಾಜವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿ. ಎಲ್ಲರನ್ನೂ ಪ್ರಜ್ಞಾಹೀನರನ್ನಾಗಿ ಮಾಡುವಂಥ ಕಾರ್ಯಕ್ರಮ ಮಾತ್ರ ದಯಮಾಡಿ ಮಾಡುವುದಕ್ಕೆ ಹೋಗಬೇಡಿ. ಲಕ್ಷ್ಮೀಸಾಗರ್ ಅಂತೂ ಏನೇನೋ ಮಾಡುತ್ತಿದ್ದಾರೆ. ಅವರು ಮಾಡಿಕೊಂಡು ಹೋಗಲಿ. ಆದರೆ ತಾವು ಮಾತ್ರ ಅಂದಕೆ ಮಾನ್ಯ ಬೊಮ್ಮಾಯಿಯವರಿಗೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ಬಸವಲಿಂಗಪ್ಪನವರು ನಾಸ್ತಿಕತೆ, ಆಸ್ತಿಕತೆ ಬಗ್ಗೆ ಹೇಳಿದ್ದಾರೆ. ನಾನು ಆ ಬಗ್ಗೆ ಒಂದು ವಿಚಾರ ಪ್ರಸ್ತಾಪ ಮಾಡಬೇಕಾದ್ದು ಅವಶ್ಯ ಅನ್ನಿಸಿದೆ. ನಾನೂ ತಮ್ಮ ಹಾಗೆ ರ್‍ಯಾಷನಲಿಸ್ಟ್. ಹಿಂದೆ ಮಳೆ ಬರದೆ ಇದ್ದಾಗ 3ನೇ ಆಗಸ್ಟ್ 1976ರಲ್ಲಿ ಸರ್ಕಾರದಿಂದ ಒಂದು ಸುತ್ತೋಲಿ ಹೊರಡಿಸಿ ಪ್ರಾರ್ಥನೆ ಮಾಡಬೇಕೆಂದು ಹೇಳಿದ್ದಾರೆ.

4 00p.m.

ಶ್ರೀ ಧರ್ಮಸಿಂಗ್.—ತಾವು ಉತ್ತರದಲ್ಲಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚರ್ಚೆಗೆ ಉತ್ತರ ಇದು ಅಲ್ಲ ಅವರು ತಮ್ಮ ಚಿಂತನೆಯ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನೂ ಹೇಳುತ್ತೇನೆ. ನಿನ್ನೆ ಮುಖ್ಯಮಂತ್ರಿಗಳೂ ಸಹಾ ಪ್ರಾರ್ಥನೆಯ ಬಗ್ಗೆ ಹೇಳಿದ್ದಾರೆ. ಹಿಂದೆ ಸರ್ಕಾರದ ಹೊರಡಿಸಿದ ಆದೇಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

"From : The Revenue Commissioner on Scarcity' Government of Karnataka, Revenue Department. To : Depety Commissioners of Districts.

Sir,

Sub : Scarcity Conditions due to failure of rains.

I am directed to state that there have been scanty rainfalls in some districte of the State particularly in the southern region. Government has already taken action to provide relief to the affected people by activising the departmental works and also by providing necessary funds for starting scarcity relief works to the affected areas. The absence of rainfall is causing considerable anxiety to the people. Government feels that in addition to the efforts made by Government to mitigate the hardship caused to the people as quickly as possible, Special prayers may also be offered in all the religious institutions, temples, mosques, churches and Muts invoking early rains. You are requested to issue necessary instructions to all the Asst. Commissioners and Tahsildars to take immediate action in this regard and arrange for prayers. The expenditure, if any, involved on this account may be met from the !unds collected from public."

ಹಿಂದಿನ ಸರ್ಕಾರವೇ ಇದನ್ನು ತಂದಿದೆ. ನಿನ್ನೆಯೂ ಕೂಡಾ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಪ್ರಾರ್ಥನೆ ಮಾಡಿ ಮಳೆ ತಂದರೆ ಅಡ್ಡಿ ಇಲ್ಲ ಎಂದು ಹೇಳಿದ್ದಾರೆ. ಹಿಂದೆ ಚರ್ಚ್‌ಗಳಲ್ಲಿ, ಮಸೀದಿಗಳಲ್ಲಿ ದೇವಸ್ಥಾನಗಳಲ್ಲಿ ಪ್ರಾರ್ಥನೆ ಮಾಡಬೇಕೆಂದು ಹಾಗೂ ಇದಕ್ಕೆ ಖರ್ಚು ಯಾವ ರೀತಿ ಹೊಂದಿಸಿಕೊಳ್ಳಬೇಕೆಂದೂ ಸಹಾ ಸರ್ಕಾರ ಆಜ್ಞೆ ಮಾಡಿದೆ. ಆ ಸರ್ಕಾರದಲ್ಲಿ ಯಾರು ಯಾರು ಮಂತ್ರಿಗಳು ಇದ್ದರು ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಬಸವಲಿಂಗಪ್ಪನವರು ಇದ್ದರೋ ಇಲ್ಲವೋ ನನಗೆ ನೆನಪಿಲ್ಲ.

ಇದನ್ನು ಈ ಮನೆಯ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಒಪ್ಪುವುದು ಬಿಡುವುದು ಪ್ರಶ್ನೆ ಅಲ್ಲ. ಯಾರಿಗೆ ಇಷ್ಟ ಇದೆ ಅವರು ಅದನ್ನು ಮುಂದುವರಿಸಿಕೊಂಡು ಹೋಗಲಿ.

ಶ್ರೀ ಬಿ. ಬಸವಲಿಂಗಪ್ಪ —ಅವರಿಗೆ ದಯಮಾಡಿ ಕೇಳುತ್ತಿದ್ದೇನೆ. ಈ ಒಂದು ಕೆಲಸ ಬೇಡ. ಇದನ್ನು ಇವತ್ತಿಗೆ ಕೊನೆ ಮಾಡೋಣ. ಡೆಮಾಕ್ರಟಿಕ್ ಹಾಗೂ ಸೆಕ್ಯುಲರ್ ಸೆಟ್‌ಅಪ್‌ನಲ್ಲಿ ಈ ರೀತಿಯ ಕೆಲಸ ಮಾಡುವುದಕ್ಕೆ ಹೋಗಬಾರದು. ಇವತ್ತು ಯಾರೇ ಆಜ್ಞೆ ಮಾಡಲಿ, ಯಾರೇ ಪ್ರಾರ್ಥನೆ ಮಾಡಲಿ, ಏನೇ ಕುರಿತು ಮಾಡಲಿ, ಹೇಗಾದರೂ ಪ್ರಾರ್ಥನೆ ಮಾಡಲಿ, ಕೆಳಗೆ ಮೇಲೆ ಮಾಡಿಕೊಂಡು ಪ್ರಾರ್ಥನೆ ಮಾಡಲಿ ನಮ್ಮ ಅಭ್ಯಂತರ ಇಲ್ಲ. ಆದರೆ ಸರ್ಕಾರ ನಡೆಸುವ ನೀವು, ರಾಜ್ಯಾಂಗಕ್ಕೆ ತಲೆ ಬಾಗಿರುವವರು ಸೆಕ್ಯುಲರ್ ಸ್ಟೇಟ್‌ನಲ್ಲಿ ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ.

ಶ್ರೀ ಎಚ್.ಕೆ. ಕುಮಾರ ಸ್ವಾಮಿ (ಬೇಲೂರು),— ಮಾನ್ಯ ಸಭಾಧ್ಯಕ್ಷರೇ ಪ್ರಕೃತಿ ಮುನಿದ ಪರಿಣಾಮವಾಗಿ ನಾವು ಈ ಒಂದು ಬರಗಾಲವನ್ನು ಎದುರಿಸುತ್ತಿದ್ದೇವೆ. ಬಹುಶಃ ಬರಗಾಲ ನಮಗೆ ಹೊಸದು ಅಲ್ಲದೇ ಇದ್ದರೂ ಕೂಡ 1064ರಿಂದ ಒಂದಲ್ಲ ಒಂದು ರೀತಿಯಿಂದ ಇದು ಬರುತ್ತಾ ಇದೆ, ಆದರೆ ಒಂದು ವೈಶಿಷ್ಟ ಎಂದರೆ ಇದರಿಂದ ರಾಷ್ಟ್ರದಾದ್ಯಂತ ಹಣದುಬ್ಬರದ ಪರಿಸ್ಥಿತಿಯನ್ನು ಎದುರಿಸುವ ಸ್ಥಿತಿಯಲ್ಲಿ ನಾವು ಇದ್ದೇವೆ, ಈ ಒಂದು ಹಂತದಲ್ಲಿ ನಮ್ಮ ಬೇಲೂರು ತಾಲ್ಲೂಕಿನಲ್ಲಿ ಸುಮಾರು 5 ಹೋಬಳಿಗಳು ಇದ್ದು ಇದರಲ್ಲಿ 3 ಹೋಬಳಿಗಳನ್ನೂ ಮಲೆನಾಡು ಎಂದು ಹೇಳುತ್ತಿದ್ದಾರೆ. ಹಾಗೂ 2 ಹೋಬಳಿಗಳು ಅರೆ ಮಲೆನಾಡು ಆಗಿರುತ್ತವೆ. ಈ ಒಂದು ದೃಷ್ಟಿಯಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು 2 ಹೋಬಳಿಗಳಿಗೆ ಮಾತ್ರ ಕಾಮಗಾರಿ ಕೆಲಸಗಳನ್ನು ತೊಡಗಿಸುಬೇಕೆಂದು ಹೇಳಿ ನಿಮ್ಮ ಅಧಿಕಾರಿಗಳಿಗೆ ಬರೆದಿದ್ದಾರೆ. ಇದರಿಂದಾಗಿ ಮಿಕ್ಕ ಮಲೆನಾಡು ಏರಿಯಾದ 3 ಹೋಬಳಿಗಳಲ್ಲಿ ಯಾವುದೇ ಕೆಲಸ ಆಗುತ್ತಾ ಇಲ್ಲ, ಮಲೆನಾಡು ಹೋಬಳಿಯಲ್ಲಿ ಕೂಲಿ ಕಾರ್ಮಿಕರೇ ಹೆಚ್ಚು ಇದ್ದು ಅಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡರೆ ಹೆಚ್ಚು ಪ್ರಯೋಜನವಾಗುತ್ತದೆ. ಜೊತೆಗೆ ಅಲ್ಲಿ ಮಳೆ ಕಡಿಮೆಯಾಗಿರುವುದರಿಂದ ಅಲ್ಲಿನ ಕಾಫಿ ಬೆಳೆಗಾರರೂ ಆತಂಕದಲ್ಲಿದ್ದಾರೆ. ಈ ದೃಷ್ಟಿಯಿಂದ ಸರ್ಕಾರದಲ್ಲಿ ನನ್ನ ಒಂದು ಕೋರಿಕೆ ಏನೆಂದರೆ, ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೊಟ್ಟು ಮಲೆನಾಡು ಹೋಬಳಿಗಳಲ್ಲೂ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ಅಲ್ಲಿಯ ಕೂಲಿ ಕಾರ್ಮಿಕರಿಗೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ' ಸರ್ಕಾರದ ವತಿಯಿಂದ ಏನು ಒಂದು ಹೇಳಿಕೆ ಬರುತ್ತಾ ಇದೆ ಆದಕ್ಕೆ ನಾವು ಪ್ರತಿಭಟನೆ ಏಕೆ ಮಾಡಿದ್ದು ಎಂದರೆ ಇದಕ್ಕೂ ಮೊದಲು ಹೋದ ಮಾರ್ಚಿ ತಿಂಗಳಲ್ಲಿ ರೆವಿನ್ಯೂ ಮಂತ್ರಿಗಳು ಇದೇ ರೀತಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ಆಗ ಕೂಡ ನಾವು ಈ ಬಗ್ಗೆ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ತಂದಿದ್ದೆವು. ನಾವು ಈ ಬಗ್ಗೆ ಕೆಲಸ ಮಾಡುತ್ತೇವೆ. ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ ಎಂದಿದ್ದಕ್ಕೆ ಆಗ ನಾವು ಚರ್ಚೆ ಮಾಡಿದ್ದೂ ಆಯಿತು. ಹಿಂದೆ ಕೂಡಾ ಏನು ಹೈದರಾಬಾದ್ ಕರ್ನಾಟಕದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರತಕ್ಕ ಪ್ರದೇಶ ಇದೆ ಅಲ್ಲಿಗೆ ವಿಶೇಷವಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ನಾವು ನಿನ್ನೆ ಕೇಳಿದ್ದು ಏನಂದರೆ. ಬರಗಾಲಕ್ಕೆ ತುತ್ತಾದ ಪ್ರದೇಶದ ಜನರಿಗೆ ಕಳೆದ 3-4 ತಿಂಗಳಿಂದ ಸರ್ಕಾರದ ವತಿಯಿಂದ ಏನು ಕೆಲಸ ಕಾರ್ಯ ನಡೆದಿದೆ ಹಾಗೂ ಆ ಜಾಗದಲ್ಲಿ ಇರತಕ್ಕ ಅಧಿಕಾರಿಗಳಿಗೆ ಸರ್ಕಾರ ಕೆಲಸ ಮಾಡಿಸುವ ಬಗ್ಗೆ ಏನು ಆದೇಶ ಕೊಟ್ಟಿದೆ ಹಾಗೂ ಇದರ ಪರಿಣಾಮವಾಗಿ ಏನು ಕೆಲಸ ಆಗುತ್ತಾ ಇದೆ ಎಂಬುದು ನಮ್ಮ ಉದ್ದೇಶ. ಆದನ್ನೂ ಕೂಡಾ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ರಾಜ್ಯ ಈ ಬಾಬಿಗೆ ಎಷ್ಟು ಖರ್ಚು ಮಾಡಿದೆ ಹಾಗೂ ಕೇಂದ್ರದಿಂದ ಎಷ್ಟು ಕೇಳಿದ್ದೀರಿ ಎಂಬುದು ಹಾಗೂ ಕೇಂದ್ರದಿಂದ ಹಣ ಬರುತ್ತಾ ಇಲ್ಲ ಎಂದು ಹೇಳಿದ್ದನ್ನೂ ನಾವು ಕೇಳಿದ್ದೇವೆ. ಇದನ್ನು ನಾವು ಮುಖ್ಯ ಮಂತ್ರಿಗಳ, ರೆವಿನ್ಯೂ ಮಂತ್ರಿಗಳ ಸ್ಟೇಟ್‌ಮೆಂಟ್‌ಗಳಲ್ಲಿ ಓದಿದ್ದೇವೆ. ಹಾಗೂ ಜಿಲ್ಲಾವಾರು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದಾಗ ಹೇಳಿಕೆಗಳನ್ನು ಓದಿದ್ದೇವೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಜೊತೆ ಡಿ.ಡಿ.ಸಿ ಮೀಟಿಂಗ್ ಮಾಡಿ ವಿಷಯ ತಿಳಿದುಕೊಂಡಿದ್ದೇವೆ. ನಮ್ಮ ಜಿಲ್ಲೆಯನ್ನು ವಹಿಸಿಕೊಂಡಿರುವ ಬಸವಣ್ಣೆಪ್ಪನವರು ಬಂದಿದ್ದಾಗ ಅವರ ಜೊತೆ ಮಾತನಾಡಿದ್ದೇವೆ. ಇವೊತ್ತು ಕೂಡ ನಮ್ಮ ತಾಲ್ಲೂಕಿನಲ್ಲಿ ಮೀಟಿಂಗ್ ಇದ್ದು ನಾನು ಬರಲು ಆಗುವುದಿಲ್ಲ 27ನೇ ತಾರೀಖು ಇಡಿ ಎಂದು ಹೇಳಿದ್ದೇನೆ. ನಾವು ಸರ್ಕಾರದ ಮೇಲೆ ಆಪಾದನೆ ಮಾಡಬೇಕು ಎನ್ನುವುದು ಇಲ್ಲ. ಆದರೆ ಇವೊತ್ತು ಏನು ಒಂದು ವಾಗ್ದಾನವನ್ನು ಕೊಟ್ಟಿದ್ದೀರಿ ಅದನ್ನು ತಾವು ಸರಿಯಾಗಿ ಕಾಪಾಡಿಕೊಂಡು ಹೋಗಿಲ್ಲ. ಜೂನ್ ತಿಂಗಳಲ್ಲಿ ಇವರು ಅಲ್ಲಿಗೆ ಬಂದಿದ್ದಾರೆ. ಇವೊತ್ತು ನಾನು ಹೇಳುತ್ತೇನೆ ಪ್ರತಿ ಜಿಲ್ಲೆಯ ಪ್ರತಿ ತಾಲ್ಲೂಕಿ

ನಲ್ಲಿ ಬರಗಾಲಕ್ಕೆ ತುತ್ತಾಗಿರತಕ್ಕ ಜನರ ಸಂಖ್ಯೆ ಎಷ್ಟು ? ಹಾಗೂ ಪ್ರತಿಯೊಂದು ತಾಲ್ಲೂಕಿನಲ್ಲಿ ಎನ್.ಆರ್.ಇ.ಪಿ., ಆರ್.ಎಲ್.ಇ.ಪಿ. ಮುಖಾಂತರ ಎಷ್ಟು ಹಾಗೂ ಇತರ ಯೋಜನೆಗಳ ಮುಖಾಂತರ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ? ಇವೊತ್ತಿನ ದಿವಸ ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು 25 ಸಾವಿರ ಜನ ಕೆಲಸವನ್ನು ಮಾಡುತ್ತಿದ್ದಾರೆ. ಇವೊತ್ತು ನನ್ನ ತಾಲ್ಲೂಕಿನಲ್ಲಿ 1275 ಜನರು ಕೆಲಸ ಮಾಡುತ್ತಿದ್ದಾರೆ. ಇದನ್ನು ತಾವು ವೆರಿಫೈ ಮಾಡಬೇಕು. ನಾನು ತಮಗೆ ಹೇಳುತ್ತಿದ್ದೇನೆ. ಇವತ್ತು ಯಾವುದೇ ಪಂಚಾಯಿತಿಯಲ್ಲೂ ಎರಡೆರಡು ಕೆಲಸ ಪ್ರಾರಂಭವಾಗಿಲ್ಲ. ಹಾಗೆ ಎರಡೆರಡು ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆಂದು ತಾವು ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ 5 ರೆವಿನ್ಯೂ ಸರ್ಕಲ್‌ಗಳಿವೆ. ಒಂದು ರೆವಿನ್ಯೂ ಸರ್ಕಲ್‌ಗೆ ಎರಡೆರಡು ಕೆಲಸ ಎಂದರೆ 5 ರೆವಿನ್ಯೂ ಸರ್ಕಲ್‌ನಿಂದ ಒಟ್ಟು 10 ಕೆಲಸ ಆಗಬೇಕು. ಇದು ಎಲ್ಲಿಯೂ ಆಗಿಲ್ಲ. ಎರಗೋಡಿನಲ್ಲಿ ಕೆಲಸಕ್ಕಾಗಿ 400 ಜನ ಬಂದಿದ್ದರು. ಆದರೆ ಇಷ್ಟೊಂದು ಜನರಿಗೆ ಕೂಲಿ ಹಣ ಕೊಡಲು ನಮ್ಮಲ್ಲಿ ಹಣ ಇಲ್ಲವೆಂರು ಮಾನ್ಯ ಜಿಲ್ಲಾಧಿಕಾರಿಯವರು ಹೇಳಿದ್ದಾರೆ. ಇದನ್ನೂ ಕೂಡ ತಾವು ವೆರಿಫೈ ಮಾಡಬಹುದು. ತಾವು ಮಾರ್ಚಿ ತಿಂಗಳಲ್ಲಿ, ಏಪ್ರಿಲ್ ತಿಂಗಳಲ್ಲಿ ಮತ್ತು ಮೇ ತಿಂಗಳಲ್ಲಿ ಎಷ್ಟೆಷ್ಟು ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ಹೇಳಿ ? ಹಿಂದೆ 1973–74ರಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ತಾವು ಸಚಿವರಾಗಿದ್ದವರು. ತಮಗೆ ಎಲ್ಲಾ ವಿಚಾರಗಳೂ ಗೊತ್ತಿವೆ. ಆವೊತ್ತು ರಾಜ್ಯದಲ್ಲಿ ಹಲವಾರು ರೀತಿಯ ಯೋಜನೆಗಳನ್ನು ಹಾಕಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಕೆಲವು ಕಡೆ ಹಣ ಸ್ವಲ್ಪ ಮಟ್ಟಿಗೆ ಸೋರಿಹೋಗಿರಬಹುದು. ಆದರೆ ಹಿಂದೆ ಯಾವತ್ತೂ ಆಗದೇ ಇದ್ದಷ್ಟು ಕೆಲಸ ಆ ಕಾಲದಲ್ಲಿ ಆಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಸ್ವಾಮಿ, ಬಿ.ಡಿ.ಒ. ರವರು ಕೆಲಸ ತೆಗೆದುಕೊಳ್ಳಬೇಕೆಂದು ತಾವು ಹೇಳಿದ್ದೀರಿ. ಅವರು ಲ್ಯಾಂಡ್ ಆರ್ಮಿಯವರಿಗೆ ಕೆಲಸ ತೆಗೆದುಕೊಳ್ಳಬೇಕೆಂದು ತಾವು ಹೇಳಿದ್ದೀರಿ. ಅವರು ಲ್ಯಾಂಡ್ ಆರ್ಮಿಯವರಿಗೆ ಕೆಲವು ಕೆಲಸಗಳನ್ನು ಒಪ್ಪಿಸಿದ್ದಾರೆ. ಆದರೆ ಅವರಿಗೆ ಕೊಡಲು ಹಣ ಇಲ್ಲ. ಸ್ಕೇರ್ಸಿಟಿ ವರ್ಕ್ಸ್‌ನಲ್ಲಿ ಕೆಲಸಮಾಡಿದವರಿಗೆ ಕೊಡಲು ಇವೊತ್ತು ನಿಮ್ಮಲ್ಲಿ ಹಣ ಇಲ್ಲ.

ಇನ್ನು ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಹೇಳುವುದಾದರೆ, 1980ರಿಂದ 1983ರವರೆಗೆ ನಮ್ಮ ಸರ್ಕಾರ ಇದ್ದಾಗ 372 ಬೋರ್‌ವೆಲ್‌ಗಳನ್ನು ಕೊರೆಯಲಾಗಿತ್ತು. ಅನಂತರ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ 98 ಬೋರ್‌ವೆಲ್‌ಗಳನ್ನು 2 ವರ್ಷದಲ್ಲಿ ಕೊರೆಸಿದ್ದೀರಿ. ಆದರೆ ಈಗ ನೀವು ಏನು ಹೇಳಿಕೊಳ್ಳುತ್ತಿದ್ದೀರಿ ಎಂದರೆ ನಾವು ಕೊರೆಸಿದ್ದ ಬೋರ್‌ವೆಲ್‌ಗಳನ್ನೂ ಸೇರಿಸಿಕೊಂಡು 470 ಬೋರ್‌ವೆಲ್‌ಗಳನ್ನು ತೆಗೆಸಿದ್ದೇವೆಂದು ಜನರಿಗೆ ಹೇಳುತ್ತಿದ್ದೀರಿ. ಬೋನಸ್ ಸ್ಕೀಂನಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಂ ಎಂದು ಇದೆ. ಇದಕ್ಕೆ ಕೇಂದ್ರ ಸರ್ಕಾರದಿಂದ 2.85 ಕೋಟಿ ರೂಪಾಯಿಗಳ ಸಹಾಯ ಧನ ಬಂದಿದೆ. ಆ ಹಣವನ್ನು ತಾವು ಪೂರ್ತಿಯಾಗಿ ಖರ್ಚುಮಾಡಿದ್ದೀರಿ. ಇದು ಸಂಪೂರ್ಣವಾಗಿ ಸದುಪಯೋಗ ಆಗಿದೆಯೆ ? ಕಳೆದ 3 ತಿಂಗಳಲ್ಲಿ ಯಾವ ಯಾವ ಭಾಗದಿಂದ ಎಷ್ಟೆಷ್ಟು ಜನರು ತಮ್ಮ ಊರುಗಳನ್ನು ಬಿಟ್ಟು ವಲಸೆ ಹೋಗಿದ್ದಾರೆಂಬುದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೆ ಷಹಪುರ, ಜೇವರ್ಗಿ ಕಡೆಯಿಂದ ಸುಮಾರು 11 ಸಾವಿರ ಜನರು ಇತ್ತೀಚೆಗೆ ಬೆಂಗಳೂರಿನ ಕಡೆಗೆ ವಲಸೆ ಬಂದಿದ್ದಾರೆ. ಕೇವಲ ರಾಜಕೀಯಕ್ಕಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ಸರ್ಕಾರದವರು ಏನು ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನು ಸರಿಯಾಗಿ ಮಾಡಿಲ್ಲ. ಹಿಂದೆ ಮಾನ್ಯ ಸಚಿವರಾದ ಬಸವಣಪ್ಪನವರು ನಮ್ಮಲ್ಲಿಗೆ ಪ್ರವಾಸ ಬಂದಿದ್ದಾಗ ಇವರ ಎದುರಿನಲ್ಲೇ ಮಾನ್ಯ ಜಿಲ್ಲಾಧಿಕಾರಿಯವರನ್ನು ಕುರಿತು ನೀವು ಹೊಸದಾಗಿ ಈ ಸಾರಿ ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದೀರಿ ಎಂದು ನಾನು ಕೇಳಿದಾಗ ಈಗ ಅವಶ್ಯಕವಾದ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಬೇಕಾದರೆ 25 ರಿಗ್ಸ್ ಬೇಕಾಗುತ್ತದೆ, ಆದರೆ ಅವರಿಗೆ ಹಣವನ್ನು ಕೊಡಲು ನಮ್ಮಲ್ಲಿ ಹಣ ಇಲ್ಲದಿರುವುದರಿಂದ ಅವುಗಳನ್ನು ಬೇರೆ ಕಡೆಗೆ ವರ್ಗಾಯಿಸಿದ್ದೇವೆಂದು ಹೇಳಿದರು. ತಾವು ಬಡವರ ಉದ್ಧಾರಕ್ಕಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ಏನು ಹಾಕಿಕೊಂಡಿದ್ದೀರಿ ಅವುಗಳನ್ನು ಸರಿಯಾಗಿ ಕಾರ್ಯಗತಮಾಡಿ ಎಂದು ಹೇಳಬಯಸುತ್ತೇನೆ.

ಇನ್ನು ದನಗಳ ಮೇವಿನ ಬಗ್ಗೆ ಹೇಳುವುದಾದರೆ, ಫಾಡರ್ ಬ್ಯಾಂಕ್ ಎಂದು ಮಾಡಿದ್ದೇವೆ ಸಿಕ್ಕತಕ್ಕ ಹುಲ್ಲನ್ನೆಲ್ಲಾ ಅಲ್ಲಿ ಬಣವೆ ಹಾಕಿದ್ದೇವೆ. ನಿಮ್ಮ ಜಿಲ್ಲೆಯಿಂದ ಹುಲ್ಲು ಹೊರಗೆ ಹೋಗುವುದನ್ನು ಬ್ಯಾನ್ ಮಾಡಿದ್ದೇವೆಂದು ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದರು. ಆದರೆ ಅದು ಇನ್ನೂ ನಿಂತಿಲ್ಲ. ಈ ರೀತಿ ಹೊರಗಡೆ ಹುಲ್ಲು ಹೋಗುವುದಾದರೆ ನಮ್ಮ ದನಕರುಗಳಿಗೆ ತುಂಬಾ ತೊಂದರೆ ಬರುತ್ತದೆಂದು ನಾವು ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇವೆ. ಷಹಪುರ, ಜೇವರ್ಗಿ ಸುತ್ತಮುತ್ತ ಸುಮಾರು 600 ಕಿಲೋಮೀಟರ್ ಪ್ರದೇಶದಲ್ಲಿ ದನಗಳಿಗೆ ಹುಲ್ಲು ಬೆಳೆಸುವ ಕಾರ್ಯಕ್ರಮ ತೆಗೆದು

ಕೊಳ್ಳಬೇಕೆಂದು ನಾವು ಹೇಳಿದ್ದೇವೆ. ಹಿಂದೆ ಲಿಫ್ಟ್ ಇರಿಗೇಷನ್‌ನಿಂದ ನೀರನ್ನು ತೆಗೆದುಕೊಳ್ಳಬೇಕಾದರೆ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಅನುಮತಿ ಬೇಕಾಗಿತ್ತು. ಆದರೆ ಈಗ ಚೀಫ್ ಇಂಜಿನಿಯರ್‌ರವರಿಗೆ ಬರಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಏನಿದೆ ಇದು ಬಹಳ ದೊಡ್ಡ ಯೋಜನೆ. ಇದು ವಿಶ್ವ ಬ್ಯಾಂಕ್ ನೆರವಿನಿಂದ ಆಗತಕ್ಕದ್ದು. 1984-85, 1985-86ರಲ್ಲಿ ಇದರ ಕೆಲಸ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಾವೂ ನೋಡಿರಬಹುದು. ಅದೇ ರೀತಿ ಮುಲ್ಲಾ ಮರಿ ಮತ್ತು ಅಮರ್ಜಾ ಪ್ರಾಜೆಕ್ಟ್‌ಗಳ ಕೆಲಸ ಯಾವ ರೀತಿ ನಡೆಯುತ್ತಿದೆ ಎಂಬುದೂ ತಮಗೆ ಗೊತ್ತಿದೆ. ನಾವು ಇದನ್ನು ಕೇಳಲು ಹೋದರೆ, ನಿಮ್ಮ ಸರ್ಕಾರ ಇದ್ದಾಗ ಯಾವ ರೀತಿ ಕೆಲಸ ನಡೆದಿದೆ ಎಂಬುದನ್ನು ತಾವು ಹೇಳಿ ಎಂದು ಮಾನ್ಯ ಲಕ್ಷ್ಮೀಸಾಗರ್‌ರವರು ನಮ್ಮನ್ನೇ ಕೇಳುತ್ತಾರೆ. ನಾನು ತಮಗೆ ಹೇಳುವುದಾದರೆ, ಹಿಂದೆ ನಾವು ಸಾಕಷ್ಟು ಉತ್ತಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ. ಆದರೆ ಈ ಸರ್ಕಾರದವರು ಅವುಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ನಮ್ಮ ಪಕ್ಷದಲ್ಲಿ 139 ಜನ ಸದಸ್ಯರ ಬೆಂಬಲ ಇದೆ ಎನ್ನುವ ಮನೋಭಾವನೆ ಇವರಲ್ಲಿ ಇದೆ. ಇದು ಸರಿಯಲ್ಲ. ಈ ಸರ್ಕಾರ ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲ ಎನ್ನುವ ಭಾವನೆ ಜನರ ಮನಸ್ಸಿನಲ್ಲಿ ಬರಬಾರದು ಎಂಬ ಉದ್ದೇಶದಿಂದ ನಾವು ಈ ಮಾತನ್ನು ಹೇಳುತ್ತಿದ್ದೇವೆ. ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿ ಜನರು ಸಾಯುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದವರು ಜನರ ಜೀವನವನ್ನು ಉಳಿಸಬೇಕು. ರಾಜ್ಯದಲ್ಲಿ ಯಾವ ಭಾಗದಲ್ಲೂ ಕೂಡ ಸಮರ್ಪಕವಾದ ಯೋಜನಾ ಕಾರ್ಯಕ್ರಮಗಳು ಆಗಿಲ್ಲ. ಇವತ್ತು ನಮ್ಮ ಜೊತೆಯಲ್ಲಿ ಯಾರಾದರೂ ಮಾನ್ಯ ಸದಸ್ಯರಾಗಲಿ, ಸಚಿವರಾಗಲಿ ಬಂದರೆ ಕರೆದುಕೊಂಡು ಹೋಗಿ ನಾನು ತೋರಿಸುತ್ತೇವೆ. ನಮ್ಮ ಕಡೆಯಂತೂ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ಇದೇ ರೀತಿಯ ಪರಿಸ್ಥಿತಿ ಮುಂದುವರಿದರೆ ಇನ್ನು ಕೆಲವೇ ದಿವಸದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ, ಈ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಈ ಸದನದ ಒಂದು ಸಮಿತಿಯನ್ನು ನೇಮಕಮಾಡಿ ರಾಜ್ಯದಲ್ಲೆಲ್ಲಾ ಪ್ರವಾಸಮಾಡಿ ನಂತರ ಒಂದು ಕಡೆ ಕುಳಿತು ಉತ್ತಮ ಯೋಜನೆಗಳನ್ನು ಹಾಕಿಕೊಳ್ಳೋಣವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಾಬುರೆಡ್ಡಿ ತುಂಗಲ್ (ಬೀಳಗಿ).—ಸನ್ಮಾನ್ಯ ಅಧ್ಯಕ್ಷರೇ ನೈಸರ್ಗಿಕ ವೈಪರೀತ್ಯದಿಂದಾಗಿ ಇವತ್ತಿನ ದಿವಸ ಕರ್ನಾಟಕದ ಬಹುಭಾಗ ಬರಗಾಲಕ್ಕೆ ತುತ್ತಾಗಿದೆ. ಇಂಥ ಒಂದು ಬರಗಾಲವನ್ನು ನಾವಿಂದು ಎದುರಿಸಬೇಕಾಗಿದೆ. ಇಂಥ ಒಂದು ಪರಿಸ್ಥಿತಿಯನ್ನು ಎದುರಿಸುವುದರಲ್ಲಿ ಯಾವ ರೀತಿಯಾದ ರಾಜಕೀಯ ಪಕ್ಷ ಪಂಗಡಗಳು ಬೇಡವೆಂದು ನನ್ನ ಪ್ರಾಮಾಣಿಕವಾದ ಅಭಿಪ್ರಾಯವಾಗಿದೆ. ನನ್ನ ಜಿಲ್ಲೆಯ ಬಗ್ಗೆ ಹೇಳುವುದಾದರೆ ಕಳೆದ 50 ವರ್ಷಗಳಲ್ಲಿ ಇದು ನಾವು ಕಂಡಿರತಕ್ಕಂಥ 36ನೇ ಬರಗಾಲವಾಗಿರುತ್ತದೆ. ಹಿರಿಯ ತಲೆಮಾರಿನವರೂ ಕೂಡ ಇದು ಒಂದು ಭೀಕರ ಬರಗಾಲವೆಂದು ಹೇಳುತ್ತಿರುತ್ತಾರೆ. ಈವತ್ತು ಜುಲೈ ತಿಂಗಳು ಮುಗಿಯುತ್ತ ಬಂದರೂ ಕೂಡ ನಮ್ಮ ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ಕಾಲುವೆಗಳ ಮುಖಾಂತರ ನೀರನ್ನು ಹಿಡಕಲ್ ಜಲಾಶಯದಿಂದ ಬಿಡುವಂತಹ ಕೆಲಸವಾಗಿಲ್ಲ ನೀರು ಇಲ್ಲದಂತಹ ಹಿಡಕಲ್ ಜಲಾಶಯವನ್ನು ನೋಡಿದರೆ ಎದೆ ಬಿರಿಯುವ ಸನ್ನಿವೇಶವಿರುತ್ತದೆ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಇದು ಒಂದು ಪ್ರಚಾರದ ತಂತ್ರವೆಂದು ಹೇಳಿದರು. ಪ್ರಚಾರದಿಂದ ಯಾರು ಬದುಕಿದರು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿರುತ್ತದೆ. ನಮ್ಮ ಈ ಸದನದ ಹಿರಿಯ ಸದಸ್ಯರುಗಳು ಈ ಕಡೆ ಕುಳಿತಿರುತಕ್ಕಂಥವರು ಮತ್ತು ಆ ಕಡೆ ಕುಳಿತಿರುತಕ್ಕಂಥವರು ಇದನ್ನು ಒಂದು ರಾಜಕೀಯ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಈಗ ಬಂದಿರತಕ್ಕಂಥ ಭೀಕರವಾದ ಸಮಸ್ಯೆಯನ್ನು ನಾವು ಎಲ್ಲರೂ ಕೂಡ ಎದುರಿಸಬೇಕಾಗಿದೆ. ಇದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬುದರ ಬಗ್ಗೆ ಎರಡೂ ಕಡೆಯ ಮಾನ್ಯ ಸದಸ್ಯರು ಯೋಚಿಸಬೇಕಾಗಿದೆ. ಶ್ರೀಮಾನ್ ಧರ್ಮಸಿಂಗ್‌ರವರಿಗೂ ಇದು ಗೊತ್ತಿರುತ್ತದೆ. ಹಿಂದೆ ಅವರು ಅಧಿಕಾರದಲ್ಲಿದ್ದಾಗ ಶ್ರೀಮಾನ್ ಅರಸುಗಂರವರ ನೇತೃತ್ವದಲ್ಲಿ ಆಗಿನ ಸರ್ಕಾರ ಒಂದು ಸಮಿತಿಯನ್ನು ಈ ಸದನ ನೇಮಿಸಿತ್ತು. ಆ ಸಮಿತಿಯಲ್ಲಿ ಮಾನ್ಯ ಬಂಗಾರಪ್ಪನವರು, ವಾಟಾಳ್ ನಾಗರಾಜ್‌ರವರು, ಕೋಣಂದೂರು ಲಿಂಗಪ್ಪನವರು ಸಹ ಸದಸ್ಯರಾಗಿದ್ದರು. ಆಗ ಅವರು ಒಂದು ವರದಿಯನ್ನು ಕೊಟ್ಟರು. ಆ ವರದಿ ಏನಾಯಿತೋ ಗೊತ್ತಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಯಾವ ಮುಚ್ಚುಮರೆಯಿಲ್ಲದೆ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಹತ್ತೊಂಬತ್ತು ಜಿಲ್ಲೆಗಳ ವಿಷಯವನ್ನೂ ನಮ್ಮ ಮುಂದಿಟ್ಟಿದ್ದಾರೆ. ತಾವು ಇದರ ಬಗ್ಗೆ ಅಧ್ಯಯನ ಮಾಡಬೇಕು. ಇದರಲ್ಲಿ ಯಾವ ರಾಜಕೀಯವನ್ನು ಬೆರೆಸಬಾರದು. ಇದು ಕೇವಲ ಅನ್ನದ ಸಮಸ್ಯೆಯಲ್ಲ. ಅನ್ನವಿಲ್ಲವೆಂದು ಯಾರೂ ಕೇಳುವವರಿಲ್ಲ. ಲಕ್ಷಾಂತರ, ಕೋಟ್ಯಾಂತರ ಜನ ಜಾನುವಾರುಗಳ ಸಮಸ್ಯೆ

ಯಾಗಿರುತ್ತದೆ. ನಮ್ಮ ಹಿರಿಯ ಅನೇಕ ಮಾನ್ಯ ಸದಸ್ಯರು ಹೇಳಿದರು. ಮಲೆನಾಡಿಗೆ ಜಾನುವಾರಗಳು ಹೋಗಬೇಕು ಅಲ್ಲಿ ಹುಲ್ಲನ್ನು ಬೆಳೆಸಬೇಕು, ಅಲ್ಲಿಂದ ಹುಲ್ಲಿನ ಹಿಂಡಿಗಳನ್ನು ಕಟ್ಟಿ ಕಳುಹಿಸಿಕೊಡ ಬೇಕೆಂದು. ಆದರೆ ಇದನ್ನು ಯಾರು ಮಾಡಬೇಕಾಗಿತ್ತು ? ನಮ್ಮ ಸರ್ಕಾರದವರು ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳೂ ಕೂಡ ಆಗಿಲ್ಲ, ದೂರಗಾಮಿ ಯೋಜನೆಯನ್ನು ಹಿಂದೆ ಇದ್ದಂಥ ಸರ್ಕಾರದವರು ಅಧಿಕಾರದಲ್ಲಿದ್ದಂಥವರು ಅದನ್ನು ಮಾಡಬೇಕಾಗಿತ್ತು. ನಮ್ಮ ಕಡೆ ಒಂದು ಗಾದೆಯನ್ನು ಹೇಳುತ್ತಾರೆ' ವೇದಾಂತ ಹೇಳಲಿಕ್ಕೆ, ಬದನೇಕಾಯಿ ತಿನ್ನಲಿಕ್ಕೆ'' ಎಂದು. ಹಾಗೆ ಅವರು ಅಧಿಕಾರದಲ್ಲಿದ್ದಾಗ ಯಾವ ಕೆಲಸವನ್ನು ಮಾಡದೆ ಇವೊತ್ತು ರಾಜಕೀಯ ವೇದಾಂತವನ್ನು ಹೇಳಲಿಕ್ಕೆ ಹೊರಟಿದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಕೆ.ಎಚ್. ಪಾಟೀಲ್‌ರವರು ಹುಲ್ಲುಕೋಟೆಯಲ್ಲಿ ಯಾವರೀತಿಯಾದ ಬರಗಾಲವಿಲ್ಲ ವೆಂದು ಹೇಳಿದರು. ಅವರು ಯಾವಾಗಲೂ ಬೆಂಗಳೂರಿನಲ್ಲಿ ಇರತಕ್ಕಂಥವರು ಅವರು ಹುಲ್ಲುಕೋಟೆಗೆ ಬಂದರೆ ಗೊತ್ತಾಗುತ್ತದೆ. ನಮ್ಮ ಸರ್ಕಾರದ ಮುಂದೆ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಒಂದು ಸಲಹೆಯನ್ನು ಇಟ್ಟಿದ್ದಾರೆ. ಆ ಒಂದು ಸಲಹೆ ಏನೆಂದರೆ ಬರಗಾಲದ ಸಂಪೂರ್ಣವಾದ ಒಂದು ಮಾಹಿತಿಯನ್ನು ಕೊಡುವ ಸಲುವಾಗಿ ಸರ್ವಪಕ್ಷದ ಸಮಿತಿಯನ್ನು ಮಾಡ ಬೇಕೆಂದು ಹೇಳಿರುತ್ತಾರೆ. ಮಾನ್ಯ ಬಂಗಾರಪ್ಪನವರು ಮಾಡಿರತಕ್ಕಂಥ ಸಲಹೆಗೆ ನಾನು ಬೆಂಬಲವನ್ನು ಸೂಚಿಸುತ್ತೇನೆ. ಸರ್ಕಾರದವರು ಕಾಲಹರಣ ಮಾಡದೆ ಒಂದು ಸರ್ವಪಕ್ಷದ ಸಮಿತಿಯನ್ನು ಮಾಡ ಬೇಕೆಂದು ಹೇಳುತ್ತೇನೆ. ಆ ಸರ್ವಪಕ್ಷದ ಸಮಿತಿಯು ಒಳ್ಳೆಯ ಸಲಹೆಗಳನ್ನು ಕೊಡವಂಥಾದ್ದಾಗಿರ ಬೇಕು. ಸಮಿತಿಯು ಕೇವಲ ಅಧ್ಯಯನ ಮಾಡುವುದರಲ್ಲಿಯೇ ಕಾಲಕಳೆದರೆ ಹಿಂದಿನ ಚರ್ಚೆಯನ್ನು ಪುನರಾವರ್ತನೆ ಮಾಡಿದಂತಾಗುತ್ತದೆ. ಆರೀತಿ ಮಾಡದೆ ಬರಗಾಲಕ್ಕೆ ಪರಿಹಾರ ಸಿಗುವಂಥ ಯಾವುದೇ ಒಂದು ಒಳ್ಳೆಯ ಅಭಿಪ್ರಾಯಗಳನ್ನು ಸಮಿತಿಯು ಮಾಡಬೇಕು.

ಮಾನ್ಯ ಕಂದಾಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಬರಗಾಲ ಪರಿಹಾರ ಕಾಮಗಾರಿಗಳ ಮಂಗವಾಗಿ ರಸ್ತೆ, ಮುಂತಾದ ನಿರ್ಮಾಣ ಕಾರ್ಯಗಳನ್ನು ಕೈಗೆ ತೆಗೆದುಕೊಳ್ಳಬಾರದು. ಇವೊತ್ತು ಸಾಕಷ್ಟು ಬರಗಾಲ ತಲೆದೋರಿರುವ ಕಡೆಗಳಲ್ಲಿ ಒಂದು ಶಾಶ್ವತವಾದಂಥ ಪರಿಹಾರ ಸಿಕ್ಕು ವಂಥ ಕೆಲಸ ಮಾಡಬೇಕು. 'ಜನರಿಗೆ ಉದ್ಯೋಗವೂ ಸಿಗಬೇಕು ಎನ್ನುವ ದೃಷ್ಟಿಯಿಂದ ಸಾಮೂಹಿಕ ಬಾವಿಗಳನ್ನು ತೋಡತಕ್ಕಂಥ ಕಾರ್ಯಕ್ರಮಗಳನ್ನು ಕೈಗೊಂಡಲ್ಲಿ ಊರಲ್ಲಿರತಕ್ಕಂಥ ಜನರಿಗೆ ಕೆಲಸವೂ ದೊರೆತಂತಾಗುತ್ತದೆ ಮತ್ತು 40–50 ಎಕರೆ ಜಮೀನಿಗೆ ನೀರಾವರಿಯನ್ನೂ ಒದಗಿಸಿದಂತೆಯೂ ಕೂಡ ಆಗುತ್ತದೆಂದು ಇಲ್ಲಿ ಉಪಸ್ಥಿತರಾಗಿರುವ ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಮತ್ತು ಮಾನ್ಯ ಕಂದಾಯ ಮಂತ್ರಿಗಳಿಗೂ ಹೇಳಲು ಇಷ್ಟಪಡುತ್ತೇನೆ.

ನನ್ನ ಜಿಲ್ಲೆ ನಾಲ್ಕು ಮುಖ್ಯನದಿಗಳು ಹರಯು ತಕ್ಕಂಥ ಜಿಲ್ಲೆಯಾಗಿದೆ. ಕೃಷ್ಣಾ, ಭೀಮಾ, ಘಟ ಪ್ರಭಾ, ಮಲಪ್ರಭಾ ಈ ನದಿಗಳು ಹರಿಯ ತಕ್ಕಂಥ ಜಿಲ್ಲೆಯಲ್ಲಿ ಇದನ್ನು ಸಂಪೂರ್ಣವಾಗಿ ಉಪ ಯೋಗಿಸಿಕೊಂಡು ವಿನಾಕಾರಣ ಸಮುದ್ರಕ್ಕೆ ನೀರು ಹರಿದುಹೋಗದಂತೆ ತಡೆಗಟ್ಟಬೇಕು. ಇದಕ್ಕೆ ಒಂದು ಸಮಾಲೋಚನ ಸಮಿತಿಯನ್ನು ಮಾಡಬೇಕು. ನೀರಾವರಿ ತಜ್ಞರನ್ನು ಗುರುತಿಸಿ ಅವರನ್ನೊಳ ಗೊಂಡ ಒಂದು ಸಮಿತಿಯನ್ನು ನೇಮಿಸಬೇಕು. ಈ ನಾಲ್ಕು ನದಿಗಳ ಪ್ರಯೋಜನವನ್ನು ಪಡೆಯುವ ಸಲುವಾಗಿ 4-5 ಕೋಟಿ ರೂಪಾಯಿಗಳ ಒಂದು ಮೂಲಧನವನ್ನು ಇಡಬೇಕು.

ಇನ್ನು ನಮ್ಮ ಬಿಜಾಪುರ ಜಿಲ್ಲೆಯ ಬಗ್ಗೆ ಹೇಳುವುದಾದರೆ 52 ವರ್ಷಗಳಿಂದ ನಾನು ಬಿಜಾಪುರ ಜಿಲ್ಲೆಯಲ್ಲಿರತಕ್ಕಂಥವನಾಗಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಕಂದಾಯ ಮಂತ್ರಿ ಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ 4–5 ಕೋಟಿ ರೂಪಾಯಿಗಳನ್ನು ಮೂಲಧನ ವಾಗಿ ಇಟ್ಟು ಬಿಜಾಪುರ ಜಿಲ್ಲೆಗೆ ಪ್ರತ್ಯೇಕವಾಗಿ ಏತ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡ ಬೇಕು. ಒಂದು ಪ್ರತ್ಯೇಕವಾದ ಕಾರ್ಪೊರೇಷನ್ ನಮ್ಮ ಜಿಲ್ಲೆಗೆ ಮಾಡಿದರೆ, ನಮ್ಮ ಜಿಲ್ಲೆಗೆ ಒಂದು ಶಾಶ್ವತವಾದಂಥ ಬರಗಾಲವದಂಥ ನೀಗಿಸಿದಂಥ ಕೀರ್ತಿ ತಮಗೆ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನು ಆಲಮಟ್ಟಿಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ ಇವೆಲ್ಲಾ ಬಹಳ ದೊಡ್ಡ ಯೋಜನೆ ಗಳಾಗಿರುತ್ತವೆ. ಇವೆಲ್ಲಾ 7 ಸಾವಿರ ಕೋಟಿ ರೂಪಾಯಿಗಳ ಯೋಜನೆಗಳಾಗಿರುತ್ತವೆ. ಇವು ನಾನು 26ನೇ ವಯಸ್ಸಿನಲ್ಲಿದ್ದಾಗ ಆರಂಭವಾದಂಥ ಯೋಜನೆಗಳು. ಈಗ ನನಗೆ 4೮ ವರ್ಷಗಳಾಗುತ್ತಲಿದೇ ಇನ್ನೂ ಈ ಯೋಜನೆಗಳು ಪೂರ್ಣಗೊಂಡಿಲ್ಲ. ಆದ್ದರಿಂದ ಮೊದಲು ಸಣ್ಣ ಸಣ್ಣ ನೀರಾವರಿ ಯೋಜನೆ ಗಳನ್ನು, ಏತ ನೀರಾವರಿ ಯೋಜನೆಗಳನ್ನು ಕೈಗೊಂಡು ನಮಗೆ ಜಿಲ್ಲೆಗೆ ನೀರನ್ನು ಒದಗಿಸತಕ್ಕಂಥ ಪ್ರಯತ್ನ ಮಾಡಬೇಕು. ಬಿಜಾಪುರ ಜಿಲ್ಲೆ ಬರಗಾಲ ಜಿಲ್ಲೆ ಎಂಬ ಶಾಶ್ವತ ಹಣೆ ಪಟ್ಟಿಯನ್ನು ಅಳಿಸ

ಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೃದಯಪೂರ್ವಕವಾಗಿ ಒತ್ತಾಯ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರಮಿಟಕಲ್).—ಮಾನ್ಯ ಅಧ್ಯಕ್ಷರೇ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ. ಅವರು ತಮ್ಮ ವಿಚಾರಧಾರೆಯನ್ನು ಈ ಸದನದ ಮುಂದಿಟ್ಟಿದ್ದಾರೆ. ಸರ್ಕಾರದವರೂ ಕೂಡ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಮತ್ತೆ ಅದೇ ರೀತಿಯಾಗಿ ಚರ್ಚೆ ಮುಗಿದಮೇಲೆ ಮತ್ತೊಂದು ಸ್ಟೇಟ್‌ಮೆಂಟ್ ಮಾಡಿ ಉತ್ತರವನ್ನು ಕೊಡುವವರಿದ್ದಾರೆ.

ಇವತ್ತು ನಿಜವಾಗಿಯೂ ಏನಾಗಿದೆ ಎಂದರೆ, ನಾವು ಇಲ್ಲಿ ಬಹಳವಾಗಿ ಚರ್ಚೆಯನ್ನು ಮಾಡುತ್ತಿರುತ್ತೇವೆ. ಆದರೆ ಹಳ್ಳಿಗಳಲ್ಲಿ ನಿಜವಾಗಿಯೂ ಕೂಡ ಆದರಂತೆ ಕೆಲಸ ನಡೆಯುತ್ತಿಲ್ಲ. ಮತ್ತೆ ಶ್ರೀಮಾನ್ ಬೊಮ್ಮಾಯಿಯವರು ಕೂಡ ಬಹಳ ವಿಚಾರಮಾಡಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅವರು ಕೊಟ್ಟಿರತಕ್ಕಂಥ ಹೇಳಿಕೆಯ ಪ್ರಕಾರ ಸತತವಾಗಿ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಬರಗಾಲದ ದವಡೆಯಲ್ಲಿ ಸಿಕ್ಕಿಬಿದ್ದಿದೆ ಎಂದು ಹೇಳಿದ್ದಾರೆ. ಅವರು ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ 17 ಸಾವಿರ ಹಳ್ಳಿಗಳು ಬರಗಾಲ ಪರಿಸ್ಥಿತಿ ಒಳಗಾಗಿದೆ, ಮತ್ತೆ 25 ಪರ್ಸೆಂಟ್‌ಗಿಂತಲೂ ಮಳೆಯಾಗಿದೆ ಎಂದೂ ಕೂಡ ಹೇಳುತ್ತಿದ್ದಾರೆ. ಅಂದರೆ, ಎಷ್ಟು ಗಂಭೀರವಾಗಿ ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ನಾವು ಯೋಚನೆಯನ್ನು ಮಾಡಬೇಕು ? ಇವತ್ತು 22ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಮಾಡಿದ್ದು ತಾವು ? ಈಗ ಏನೂ ಸದನ ಸೇರುತ್ತಿದೆ, ಜನ ಕೇಳುತ್ತಾರೆ, ಸದಸ್ಯರು ಬಂದು ಕೇಳುತ್ತಾರೆ ಎಂದು ಹೇಳಿ 22 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಹೆಡ್‌ಗಳಲ್ಲಿ ಅಲಾಟ್‌ಮಾಡಬೇಕೆಂದು ನೋಡಿದ್ದೀರಿ. ಆದರೆ ತಮ್ಮ ಹೇಳಿಕೆ ಪ್ರಕಾರ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯಸದಸ್ಯರಾದ ಎಂ.ಎಸ್. ಕೃಷ್ಣನ್ ಅವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು : ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಹಣದ ಕೊರತೆ ಇದ್ದ ಕಾರಣ ಅನೇಕ ಚೆಕ್ಕುಗಳನ್ನು ಹಾನರ್ ಮಾಡಬೇಡಿ ಎಂದು ಖಜಾನೆ ಅಧಿಕಾರಿಗಳಿಗೆ ಸೂಚನೆ ಹೋಗಿತ್ತು ಎಂದು ಯಾವ ಚೆಕ್ಕುಗಳನ್ನು ಹಾನರ್ ಮಾಡಬಾರದು ಎಂದು ಖಜಾನೆಯವರಿಗೆ ಸೂಚನೆ ಕೊಟ್ಟರೆಂದಮೇಲೆ ಕೆಲಸಗಳು ನಡೆಯುವುದು ಹೇಗೆ ಬಂತು ?

4-30 p.m.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ, ಇದರ ಬಗ್ಗೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸತ್ಯಕ್ಕೆ ದೂರವಾದ ಸ್ಟೇಟ್‌ಮೆಂಟ್ ಇವರು ಕೊಟ್ಟಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಎರಡು ತಿಂಗಳಿಂದ ಅನೇಕ ಚೆಕ್ಕುಗಳು ಅನೇಕ ಬ್ಯಾಂಕುಗಳಲ್ಲಿ ಡಿಸ್‌ಹಾನರ್ ಆಗಬೇಕಾದರೆ ಪರಿಸ್ಥಿತಿ ಏನಾಗಬೇಕು ? ಅನೇಕ ಕಂಟ್ರಾಕ್ಟರುಗಳು ಚೆಕ್ಕುಗಳನ್ನು ವಾಪಸ್ಸು ಬಂದಿದೆ ಎಂದು ಹೇಳಿದ್ದಕ್ಕೆ ಇನ್ನೊಂದು ಸಲ ಪ್ರೆಸೆಂಟ್ ಮಾಡಿಯೆಂದು ಹೇಳಿದ್ದಾರೆ. 1980ರಲ್ಲಿ ಒಂದು ಸರ್ಕ್ಯುಲರ್ ಪ್ರಕಾರ ಯಾವ ಹಣ ಖರ್ಚು ಮಾಡಬೇಕಾದರೂ ಪ್ಲಾನ್‌ನಲ್ಲಿ ಮಾಡಬೇಕು ಎನ್ನತಕ್ಕಂಥ ವಾದ ಏನು ತಾವು ಮಾಡಿದ್ದೀರಿ, ಅದು ಹಿಂದಿನ ಸರ್ಕಾರದಲ್ಲೂ ಕೂಡ ಇತ್ತು. ಇದನ್ನು ನಾನು ಒಪ್ಪುತ್ತೇನೆ. ಇದನ್ನು ಪ್ಲಾನ್ ಪ್ರಕಾರವೇ ಖರ್ಚು ಮಾಡಬೇಕಾಗುತ್ತದೆ. ಯಾವುದಾದರೂ ಯೋಜನೆಯ ಕೆಳಗೆ ಎಂದರೆ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಅಥವಾ ಡಿಪಿಎಪಿಯಲ್ಲಿ ರೆಗ್ಯುಲರ್ ಬಡ್ಜೆಟ್ ವರ್ಕ್ಸ್‌ನ್ನು ತೆಗೆದುಕೊಳ್ಳಬೇಕು. ರೆಗ್ಯುಲರ್ ಬಡ್ಜೆಟ್ ವರ್ಕ್ಸ್‌ನಲ್ಲಿ ಕೆಲಸ ತೆಗೆದುಕೊಳ್ಳಬೇಕಾದರೆ, ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟಿನದ್ದು ಇರಬಹುದು, ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನದ್ದು ಇರಬಹುದು, ಅದು ಯಾವುದೇ ಇರಬಹುದು ಡಿಪಾರ್ಟ್‌ಮೆಂಟಿನಲ್ಲಿ ಹಣ ಒದಗಿಸಿಕೊಟ್ಟಾಗ ಮಾತ್ರ ಈ ಹಣ ಮುಟ್ಟುತ್ತದೆ. ಇನ್ ರಿಟರ್ನ್ ಅವರು ಅದನ್ನು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಕೊಡುತ್ತಾರೆ. ಈ ಕೆಲಸ ಇವೊತ್ತು ಆಗಿಲ್ಲ. ಹಣ ಬಿಡುಗಡೆ ಮಾಡಿಲ್ಲ ಎಂದರೆ ಬರಗಾಲ ಪರಿಹಾರ ಕಾಮಗಾರಿಗಳು ನಡೆದಿದೆಯೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ಇಲ್ಲಿ ಒದಗಿಸಿರತಕ್ಕಂಥ ಅಂಕಿಅಂಶಗಳು ಬೋಗಸ್ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಅಲ್ಲಿ 25 ಸಾವಿರ ಜನ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಧಾರಣವಾಗಿ ಪ್ರತಿಯೊಂದು ತಾಲ್ಲೂಕಿಗೆ ಎರಡೂವರೆ ಸಾವಿರ ಆಯಿತು. ಎಂದರೆ ರೂರಲ್ ಡೆವಲಪ್‌ಮೆಂಟ್, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಸಾಯಿಲ್ ಕನ್ಸರ್‌ವೇಷನ್ ವರ್ಕ್ಸ್ ಎಲ್ಲಾ ಸೇರಿಸಿದ್ದರೂ ಸಹ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ? ಒಂದೊಂದು ತಾಲ್ಲೂಕಿನಲ್ಲೂ ಎರಡು ಸಾವಿರದ ಇನ್ನೂರು ಜನ ಮಾತ್ರ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ನಿಜವಾದ ಪರಿಸ್ಥಿತಿ ಏನುಇದೆ ಎಂದು ತಾವು ಅರ್ಥಮಾಡಿಕೊಂಡು, ಪ್ರತಿಯೊಂದು ಪಂಚಾಯಿತಿಯಲ್ಲೂ ಎರಡು ಕೆಲಸ ಕೊಡುವುದಾಗಿ

ಹೇಳಿದ್ದೀರಿ. ಆದರ ಪ್ರಕಾರ ಲೆಕ್ಕಹಾಕಿದರೆ ನನ್ನ ಒಂದು ತಾಲ್ಲೂಕಿನಲ್ಲಿ 90 ಕೆಲಸ ನಡೆಯಬೇಕು. ಇವೊತ್ತು ಅಂಕಿಅಂಶಗಳನ್ನು ತರಿಸಿಕೊಂಡು ನೋಡಿ, ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು. ಐದು ಆರು ತಿಂಗಳುಗಳಲ್ಲಿ ಎಷ್ಟು ಹಣವನ್ನು ತಾವು ಬಿಡುಗಡೆ ಮಾಡಿದ್ದೀರಿ ? ಎಷ್ಟು ಜನ ಕೆಲಸ ಮಾಡಿದ್ದಾರೆ ? ಎಲ್ಲಿಯೂ ಕೂಡ ಹಣ ಇಲ್ಲ. ನಾನು ಕೇಳಿದ್ದಕ್ಕೆ, ಡಿ.ಸಿ. ಮತ್ತು ಬಿ.ಡಿ.ಓ. ಏನು ಹೇಳುತ್ತಿದ್ದಾರೆ ಎಂದರೆ ನಾವು ಏನೂ ಹೇಳುವ ಹಾಗಿಲ್ಲ ಹಣದ ಕೊರತೆ ಇದ್ದ ಕಾರಣ ಯಾವ ಕೆಲಸವನ್ನೂ ತೆಗೆದುಕೊಳ್ಳುವ ಹಾಗಿಲ್ಲಿ ಎಂದು. ಹಿಂದೆ ಎನ್‌ಆರ್‌ಇಪಿ ಪ್ರಾಜೆಕ್ಟ್‌ನಲ್ಲಿ ಫಸ್ಟ್ ಫೇಸ್ ಮತ್ತು ಸೆಕೆಂಡ್ ಫೇಸ್ ಎಂದು ಮಾಡಿದರು. ಈ ರೂಲ್ಸ್ ಪ್ರಕಾರ ನಾವು ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಇದರಲ್ಲಿ ಬರತಕ್ಕಂಥ ಕೆಲಸವನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ, ಬೇರೆ ಇಲ್ಲಿವೆಂದು ಅವರು ಹೇಳುತ್ತಾರೆ. ಈ ಕೆಲಸಕ್ಕಾದರೂ ತಾವು ಹಣ ಒದಗಿಸಬೇಕು. ಅದೂ ಕೂಡ ಇಲ್ಲ. ಹಣವೇ ಇಲ್ಲವೆಂದಮೇಲೆ ಬರಗಾಲ ಪರಿಹಾರ ಕಾರ್ಯಗಳನ್ನು ಹೇಗೆ ತೆಗೆದುಕೊಳ್ಳುತ್ತೀರಿ. ಅಮೇಲೆ ಎಲ್ಲಾ ಕಡೆ ಬೋರ್‌ವೆಲ್ ಪ್ರೋಗ್ರಾಂ. ನನ್ನ ತಾಲ್ಲೂಕಿನಲ್ಲಿ 60 ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ. ಸುಮಾರು ಇಪ್ಪತ್ತೈದು ಮೂವತ್ತು ಬೋರ್‌ವೆಲ್‌ಗಳಲ್ಲಿ ನೀರು ಸರಿಯಾಗಿ ಬರುತ್ತಿಲ್ಲ. ಇದರ ಬಗ್ಗೆ ನಾನು ಸ್ವಂತವಾಗಿ ಕೂಡ ಬರೆದಿದ್ದೇನೆ. ಅಷ್ಟೇ ಅಲ್ಲ, ಕೆಲವು ಹಳ್ಳಿಗಳಲ್ಲಿ ಏನೇನು ಅನುಕೂಲತೆಗಳು ಇಲ್ಲವೆಂದು ಒಂದು ಲಿಸ್ಟ್ ಮಾಡಿ ಸಮೀಕ್ಷೆ ಮಾಡಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್‌ಗೆ ಒಂದು ಪ್ರತಿ, ರೂರಲ್ ಡೆವಲಪ್‌ಮೆಂಟ್ ಮಂತ್ರಿಯವರಿಗೆ ಒಂದು ಪ್ರತಿ ಮತ್ತು ಮುಖ್ಯಮಂತ್ರಿಯವರ ಕಚೇರಿಗೆ ಒಂದು ಪ್ರತಿಯನ್ನು ಕೊಟ್ಟಿದ್ದೇನೆ. ಇಷ್ಟಾದರೂ ಕೂಡ ಈ ಹಳ್ಳಿಗಳಲ್ಲಿ ಇವೊತ್ತಿನ ದಿವಸ ಕೆಲಸ ಇಲ್ಲ. ವಿಶೇಷವಾಗಿ ಪ್ಲಾನ್‌ವೈಸ್ ಕೆಲಸ ತೆಗೆದುಕೊಳ್ಳಬೇಕಾದರೆ ಬಡ್ಜೆಟ್‌ನಲ್ಲಿ ಅದು ಬರಬೇಕು. ಮಾನ್ಯ ದೇವೇಗೌಡರು ಒಳ್ಳೆಯ ಬುದ್ಧಿವಂತಿಕೆ ಮಾಡಿದರು. ಏನು ಮಾಡಿದರು ಎಂದರೆ ಹೋದಸಲ ನಮ್ಮೆಲ್ಲರನ್ನು ಸಂತೋಷಪಡಿಸುವುದಕ್ಕೋಸ್ಕರ ಒಂದೊಂದು ಸಾವಿರ ಟೋಕನ್ ಗ್ರಾಂಟ್ ಇಟ್ಟರು: ಮಾನ್ಯ ಮುಖ್ಯಮಂತ್ರಿಗಳು ಪ್ರಥಮ ಬಡ್ಜೆಟ್ ಅಧಿವೇಶನದಲ್ಲಿ ಈ ಕೆಲಸಗಳಿಗೆ ಹಣ ಕೊಡುತ್ತಾರೆಂದು ನೋಡಿದೆವು. ಆದರೆ ಅದರಲ್ಲೂ ಬರಲಿಲ್ಲ. ಮೊನ್ನೆ ರೆಗ್ಯುಲರ್ ಬಡ್ಜೆಟ್ ಮಂಡನೆ ಆಯಿತು. ಅದರಲ್ಲಾದರೂ ಬರುತ್ತದೆ ಎಂದು ನೋಡಿದರೆ, ಪಿ.ಡಬ್ಲ್ಯೂ.ಡಿ. ವರ್ಕ್ಸ್ ಎಸ್ಟಿಮೇಷನ್‌ನಲ್ಲಿಯೂ ಇಲ್ಲ. ಸಾವಿರ ಟೋಕನ್ ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದ್ದು ಇವತ್ತೂ ಕೂಡ ಹಣ ಇಲ್ಲ. ಒಂದೊಂದು ಕ್ಷೇತ್ರದಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ಯಾವ ಕೆಲಸ ಕೂಡ ಇಲ್ಲ. ಅದಕ್ಕೆ ಮೊನ್ನೆ ನಾನು ಒಂದು ಚೀಟಿಯನ್ನು ಬರೆದಿದ್ದೆ. ತಾವು ರೆಗ್ಯುಲರ್ ಬಡ್ಜೆಟ್ಟಿನಲ್ಲಿ ಸೇರಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಲಿಸ್ಟ್‌ನಲ್ಲಿ ಈ ವರ್ಕ್ಸ್ ಕೂಡ ಇಲ್ಲ. ಗುಲ್ಬರ್ಗಾದಲ್ಲಿ ಹೆಚ್ಚಿನವರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದಿದ್ದಾರ ಎಂದು ಈ ತಾರತಮ್ಯ ಮಾಡಿದ್ದಾರೆಯೆ ಎಂದು ನಾನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರನ್ನೂ ಕೂಡ ಭೇಟಿಯಾಗಿ ನಮ್ಮ ಬಗ್ಗೆ ಲಕ್ಷ್ಯ ಕೊಡಿ ಇಂತಿಂಥ ಕೆಲಸಗಳ ಕಡೆಗೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದು, ಏಕೆಂದರೆ ಕೆಲಸಗಳೆಲ್ಲಾ ನಿಂತುಹೋಗಿವೆ, ಬಡ್ಜೆಟ್ಟಿನಲ್ಲಿ ಕೆಲಸ ಇಲ್ಲವೆಂದರೆ ಖರ್ಚು ಹೇಗೆ ಮಾಡುತ್ತೀರಿ ಎಂದು ಹೇಳಿದ್ದೇನೆ. ಇವೊತ್ತಿನ ದಿವಸ ಈ ಒಂದು ಅನ್ಯಾಯವನ್ನು ನಮ್ಮ ಕಡೆಗೆ ಮಾಡುತ್ತಿದ್ದಾರೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದಕ್ಕೆ ಬೇಕಾದರೆ ಒಂದು ಸದನದ ಸಮಿತಿಯನ್ನು ಬೇಗನೆ ಮಾಡಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರವನ್ನು ಬಹಳ ಬೇಗನೆ ಕೇಳುತ್ತಾರೆ. ಬರಗಾಲದ ಬಗ್ಗೆ ಚರ್ಚೆ ಮಾಡಬೇಕು ಎಂದಾಗ ತಕ್ಷಣ ಒಪ್ಪಿಕೊಂಡರು. ಕುದುರೆಮೋತಿ ಪ್ರಕರಣದ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದಾಗ ಪರವಾಗಿಲ್ಲಿವೆಂದರು. ನಾನು ಅವರನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾ ಬಹಳ ಹಿಂದುಳಿದ ಪ್ರದೇಶವಾಗಿವೆ, ಅದು ಪದೇಪದೇ ಬರಗಾಲಕ್ಕೆ ತುತ್ತಾಗುತ್ತಿದೆ. ಇದರ ಬಗ್ಗೆ ತಾವು ಗಮನ ಕೊಡಬೇಕು. ಹಿಂದಿನ ಸರ್ಕಾರದವರು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗಲಿ, ಮುಲ್ಲಾಮಾರಿ ಪ್ರಾಜೆಕ್ಟ್ ಆಗಲಿ, ಬೆಣ್ಣೆತೋರ ಆಗಲಿ. ಚುಲ್ಕಿನಾಳ, ಕಾರಂಜಾ, ಪ್ರಾಜೆಕ್ಟ್ ಆಗಲಿ, ಸೌದಾಗರ್ ಆಗಲಿ ಅಥವಾ ಆಲಂದಾ ಪ್ರಾಜೆಕ್ಟ್ ಆಗಲಿ ಎಷ್ಟು ಹಣವನ್ನು ಒದಗಿಸಿಕೊಟ್ಟಿದ್ದರು ಎಂದು ಅವರು ಹೇಳಲಿ ? ಇವೆಲ್ಲವೂ ಪ್ಲಾನ್ ವರ್ಕ್ಸ್‌ನಲ್ಲಿ ಬರುವಂಥವುಗಳು. ಆದರೆ ಕಾವೇರಿ ಬೇಸಿನ್‌ನಲ್ಲಿ ನಾನ್‌ಪ್ಲಾನ್‌ನಲ್ಲಿ ಬರತಕ್ಕಂಥ ವರ್ಕ್ಸ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಇವೊತ್ತಿನ ದಿವಸ ಕೊಟ್ಟಿದ್ದಾರೆ.

ಇದನ್ನು ನಾವು ಇಲ್ಲಿ ಹೇಳಿದರೆ ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದಿರಿ ಎಂದು ಕೇಳುತ್ತೀರಿ? ನೀವು ಈಗ ನಮ್ಮ ಭಾಗದ ನೀರಾವರಿ ಯೋಜನೆಗಳಿಗೆ ಏತಕ್ಕೆ ಹಣ ಒದಗಿಸಿಲ್ಲ ಎಂಬ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಇವರು ಹಣವನ್ನು ಯಾವರೀತಿ ನಮ್ಮ ಭಾಗದ ಯೋಜನೆಗಳಿಗೆ ಖರ್ಚು ಮಾಡುತ್ತಿದ್ದಾರೆಂದರೆ, ಹತ್ತು ಜನ ಇಂಜಿನಿಯರ್‌ಗಳನ್ನೋ ಇಲ್ಲವೇ ಸೂಪರ್‌ವೈಜರ್‌ಗಳನ್ನೋ ನೇಮಕ

ಮಾಡಬೇಕಾಗಿದ್ದರೆ ಐದು ಜನರನ್ನು ಮಾತ್ರ ನೇಮಕ ಮಾಡುತ್ತಾರೆ. ಇದರಿಂದ ಹಣ ಖರ್ಚಾಗುವು ದಿಲ್ಲ ಮತ್ತು ಕೆಲಸವೂ ಸಹ ಜಾಗ್ರತೆ ಮುಗಿಯುವುದಿಲ್ಲ. ನಂತರ ಕೊಟ್ಟ ಹಣ ಖರ್ಚಾಗಿಲ್ಲ, ಉಳಿದ ಹಣವನ್ನು ಬೇರೆ ಕಡೆಗೆ ತಿರುಗಿಸಿ ಎಂದು ಹೇಳುತ್ತಾರೆ. ಈ ರೀತಿ ಆದರೆ ಇವರು ನಮಗೆ ಯಾವರೀತಿ ನ್ಯಾಯ ಒದಗಿಸಿಕೊಡುತ್ತಾರೆ ? ಒಂದು ಕಡೆ ಈಗ ಪ್ರಾರಂಭವಾಗಿರುವ ಯೋಜನೆಗಳಿಗೆ ಸಾಕಷ್ಟು ಹಣವನ್ನು ಇವರು ಒದಗಿಸುವುದಿಲ್ಲ ಮತ್ತೊಂದು ಕಡೆ ಈ ಯೋಜನೆಗಳಿಗೆ ನಾನ್-ಪ್ಲಾನ್ ನಿಂದ ಹಣ ಖರ್ಚು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದರೆ ಅಲ್ಲಿನ ಜನ ರಿಗೆ ಕೆಲಸ ಯಾವರೀತಿ ಒದಗಿಸುತ್ತೀರಿ ? ಇಂತಹ ಒಂದು ಭೀಕರ ಬರಗಾಲ ಬಂದಿರುವಾಗ ತಾವು ಮೇಜರ್ ಮತ್ತು ಮೈನರ್ ಇರಿಗೇಷನ್ ಕೆಲಸಗಳಿಗೆ ಸಾಕಷ್ಟು ಹಣವನ್ನು ಒದಗಿಸಿ ಕೆಲಸ ಪ್ರಾರಂಭ ಮಾಡಿದರೆ ಜನರಿಗೆ ಕೆಲಸ ಒದಗಿಸಬಹುದು. ಇವೊತ್ತು ನಮ್ಮ ಭಾಗದ ಒಂದೊಂದು ತಾಲ್ಲೂಕ್ ನಲ್ಲಿಯೂ ಹತ್ತು ಸಾವಿರ ಜನ ಕೆಲಸಕ್ಕೆ ಬರಲು ತಯಾರಿದ್ದಾರೆ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ 22 ರಿಂದ 23 ಲಕ್ಷದಷ್ಟು ಜನಸಂಖ್ಯೆ ಇದೆ. ಇದರಲ್ಲಿ ಶೇಕಡ 30ರಷ್ಟು ವ್ಯವಸಾಯ ಕೂಲಿಗಾರರು ಮತ್ತು ಸಣ್ಣ ಸಣ್ಣ ರೈತರು ಇದ್ದಾರೆಂದು ಲೆಕ್ಕ ಹಾಕಿದರೂ ಸಹ 3 ಲಕ್ಷ ಜನರಿಗೆ ಕೆಲಸ ಕೊಡಬೇಕಾಗುತ್ತದೆ. ಮೂರು ಲಕ್ಷ ಜನರಿಗೆ ಕೆಲಸ ಕೊಡಲು ಸಾಧ್ಯವಾಗದಿದ್ದರೆ ಕೊನೆಯಪಕ್ಷ 50 ಸಾವಿರ ಜನರಿಗಾದರೂ ಕೆಲಸ ಒದಗಿಸುವ ವ್ಯವಸ್ಥೆಯನ್ನು ಇವರು ಮಾಡಬೇಕಾಗುತ್ತದೆ. ಇಷ್ಟೊಂದು ಜನರಿಗೆ ಕೆಲಸ ಒದಗಿಸ ಬೇಕಾದರೆ ಎಲ್ಲಾ ಪ್ರಾಜೆಕ್ಟ್‌ಗಳ ಕೆಲಸವನ್ನು ಇವರು ಪ್ರಾರಂಭ ಮಾಡಬೇಕಾಗುತ್ತದೆ. ಎಲ್ಲರಿಗೂ ಕೆಲಸ ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿ ಅವರಿಗೆ ನೀವು ನಿಗದಿ ಮಾಡಬೇಕು. ಅವರನ್ನು ಜಿಲ್ಲಾ ಕ್ಯಾಪ್ಟನ್ ಎಂದು ಮಾಡಿ ಪ್ರತಿ ಹಳ್ಳಿಯಲ್ಲಿಯೂ ಕೆಲಸ ಇಲ್ಲದವರಿಗೆ ಕೆಲಸ ಒದಗಿಸುವ ಜವಾ ಬ್ದಾರಿಯನ್ನು ಅವರ ಮೇಲೆ ಹೊರಿಸಬೇಕು. ಕೆಲಸ ಒದಗಿಸದಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆ ದುಕೊಳ್ಳಿ. ಆದರೆ ಈಗ ಅವರಿಗೆ ಸಾಕಷ್ಟು ಅಧಿಕಾರವನ್ನೇ ಕೊಟ್ಟಿಲ್ಲ. ಈಗ ಯಾವುದೇ ಒಂದು ಹಳ್ಳಿಯಲ್ಲಿ ಒಂದು ಬೋರ್‌ವೆಲ್ ಹಾಕಬೇಕಾದರೆ ಅವರು ಮಂಜೂರಾತಿಗಾಗಿ ಪಿ.ಎಚ್.ಇ. ಚೀಫ್ ಇಂಜಿನಿಯರ್ ಅವರಿಗೆ ಕಳುಹಿಸಿಕೊಡಬೇಕು. ಅವರು ಮಂಜೂರಾತಿ ಕೊಟ್ಟ ನಂತರವೇ ಕೆಲಸ ತೆಗೆದುಕೊಳ್ಳಬೇಕಾಗಿದೆ ಜಿಲ್ಲಾಧಿಕಾರಿ ಅವರಿಗೆ ನೇರವಾಗಿ ಈ ಕೆಲಸ ತೆಗೆದುಕೊಳ್ಳುವ ಅಧಿಕಾರವನ್ನು ಕೊಟ್ಟಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಎಲ್ಲಾ ಡಿ ಸಿ.ಗಳನ್ನು ಇಲ್ಲಿಗೆ ಕರೆದುಕೊಂಡು ಒಂದು ಮೀಟಿಂಗ್ ಮಾಡಬೇಕು ಮತ್ತು ಎಲ್ಲಾ ಕಡೆಯೂ ಕೆಲಸಗಳನ್ನು ತೆಗೆದುಕೊಳ್ಳುವ ಬಗ್ಗೆ ಅವರುಗಳಿಗೆ ವಿಶೇಷವಾದಂಥ ಅಧಿಕಾರ ವನ್ನು ಕೊಡಬೇಕು. ಎಲ್ಲಿಯವರೆಗೆ ಈ ಬರಗಾಲ ಇರುತ್ತದೆಯೋ ಅಲ್ಲಿಯವರೆಗಾದರೂ ಈ ವಿಶೇಷ ವಾದಂಥ ಅಧಿಕಾರವನ್ನು ಕೊಡಿ.

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ,

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಕೆಲಸಗಳನ್ನು ಒದಗಿಸುವ ಬಗ್ಗೆ, ಆಹಾರವನ್ನು ಹಂಚುವ ಬಗ್ಗೆ ಮತ್ತು ಮೇವನ್ನು ಹಂಚುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವಿಶೇಷ ಅಧಿಕಾರವನ್ನು ಕೊಟ್ಟರೆ ತೊಂದ ರೆಗೆ ಒಳಗಾದ ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಆದ್ದರಿಂದ ತಾವು ಬೇಗನೆ ಮುಗಿಸಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಗಿಸಿಬಿಡುತ್ತೇನೆ. ಇನ್ನು ನಮ್ಮ ಭಾಗದಲ್ಲಿ ಮೇವಿನ ಸಮಸ್ಯೆ ದೊಡ್ಡದಾಗಿದೆ. ಏಕೆಂದರೆ, ಇಡೀ ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟ ಜಮೀನಿನ ವ್ಯಾಪ್ತಿ ಶೇಕಡ 21ರಷ್ಟು ಇದ್ದರೆ ನಮ್ಮ ಜಿಲ್ಲೆಯಲ್ಲಿ ಕೇವಲ ನಾಲ್ಕು ಪರ್ಸೆಂಟ್ ಮಾತ್ರವಿದೆ. ಮಾನ್ಯ ಅಧ್ಯ ಕ್ಷರ ಕ್ಷೇತ್ರದಲ್ಲಿ ಮಲೆನಾಡು ಭಾಗವೂ ಸಹ ಬರುತ್ತದೆ. ತಮ್ಮ ಭಾಗದಲ್ಲಿ ನೀರಾವರಿ ಮೂಲಕ ವ್ಯವ ಸಾಯ ಮಾಡುವ ಪ್ರದೇಶದ ಪ್ರಮಾಣ ಜಾಸ್ತಿ ಇದೆ. ಆದರೆ ಬಿಜಾಪುರ, ಗುಲ್ಬರ್ಗ, ಮುಂತಾದ ಕೆಲವು ಜಿಲ್ಲೆಗಳಲ್ಲಿ ನೀರಾವರಿಗೆ ಒಳಪಟ್ಟ ಪ್ರದೇಶ ಕಡಿಮೆ ಇರುವುದರಿಂದ ಮತ್ತು ಖಾಯಂ ಆಗಿ ಬರ ಗಾಲ ಇರುವುದರಿಂದ ಅಲ್ಲಿ ದನಕರುಗಳಿಗೆ ಬೇಕಾದ ಮೇವು ಸಿಗುವುದಿಲ್ಲ. ಆದಕ್ಕಾಗಿ ಪ್ರತಿಯೊಂದು ರೆವಿನ್ಯೂ ಕೇಂದ್ರದಲ್ಲಿ ಫಾಡರ್ ಸೆಂಟರ್‌ಗಳನ್ನು ಪ್ರಾರಂಭ ಮಾಡಬೇಕು. ರೆವಿನ್ಯೂ ಇನ್‌ಸ್ಪೆಕ್ಟರ್ ಹಾಗೂ ಗ್ರಾಮ ಸಹಾಯಕರಿಂದ ಒಳಗೊಂಡ ಒಂದೊಂದು ಕಮಿಟಿಯನ್ನು ಮಾಡಿ ಅದರ ಮೂಲಕ ರೈತರಿಗೆ ಮೇವನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್ ಅವರು ಮತ್ತು ಮಾನ್ಯ ಬಸವಲಿಂಗಪ್ಪನವರು ಕೊಟ್ಟ ಸಮಯದಲ್ಲಿಯೇ ಮುಗಿಸಿದರು. ತಾವು ಏತಕ್ಕೆ ಮುಗಿಸಬಾರದು ? ಇನ್ನೂ ಬಹಳ ಜನ ಮಾತನಾಡು ವವರಿದ್ದಾರೆ. ತಾವು ಮುಗಿಸದಿದ್ದರೆ ನಾನು ಬೇರೆಯವರನ್ನು ಮಾತನಾಡಲು ಕರೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೆಲವು ಸಲಹೆಗಳನ್ನು ಮಾತ್ರ ಕೊಟ್ಟು ನನ್ನ ಭಾಷಣ ಮುಗಿಸುತ್ತೇನೆ. ನಮ್ಮ ಭಾಗದಲ್ಲಿ ಬರಗಾಲ ಬಂದಿರುವ ಪ್ರಯುಕ್ತ ಜನರು ಕೆಲಸ ಹುಡುಕಿಕೊಂಡು ಬೆಂಗಳೂರು, ಮುಂಬೈ ಮುಂತಾದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ, ಇಂತಹ ಸಂದರ್ಭಗಳಲ್ಲಿ ತಮ್ಮ ಮಕ್ಕಳನ್ನು ಹಾಸ್ಟಲ್‌ಗಳಲ್ಲಿ ಸೇರಿಸಬೇಕಾಗುತ್ತದೆ. ಆದಕಾರಣ ಹಾಸ್ಟಲ್‌ಗಳಲ್ಲಿ ಈಗ ನೂರು ಹುಡುಗರನ್ನು ಸೇರಿಸಿಕೊಳ್ಳುತ್ತಿರುವ ಕಡೆಗಳಲ್ಲಿ ನೂರೈವತ್ತು ಹುಡುಗರನ್ನು ಸೇರಿಸಿ ಕೊಳ್ಳುವ ಒಂದು ವ್ಯವಸ್ಥೆಯನ್ನು ಸಹ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಈ ಹಾಸ್ಟಲ್‌ಗಳ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕಾಗುತ್ತದೆ. ಏಕೆಂದರೆ ಈ ಹಾಸ್ಟಲ್‌ಗಳಿಗೆ ಸೇರಲು ಹೆಚ್ಚಿನ ಸಂಖ್ಯೆ ಯಲ್ಲಿ ಹುಡುಗರು ಮುಂದೆ ಬರುತ್ತಿದ್ದಾರೆ.

ಅಧ್ಯಕ್ಷರು.—ತಾವೂ ಸಹ ಮಂತ್ರಿಗಳಾಗಿ ಕೆಲಸ ಮಾಡಿದವರು. ತಾವು ಬೇರೆಯವರಿಗೆ ಮಾತ ನಾಡಲು ಅವಕಾಶ ಮಾಡಿಕೊಡದಿದ್ದರೆ ಹೇಗೆ ? ತಾವು ಈಗ ಮುಗಿಸಿಬಿಡಿ. ಮುಂದೆ ಬಡ್ಜೆಟ್ ಮೇಲೆ ಮಾತನಾಡಲು ತಮಗೆ ಅವಕಾಶ ಮಾಡಿಕೊಡುತ್ತೇನೆ.

(ಈ ಹಂತದಲ್ಲಿ ನಾಲ್ಕೈದು ಜನ ಮಾನ್ಯ ಸದಸ್ಯರು ಎದ್ದುನಿಂತು ಮಾತನಾಡಲು ಅವಕಾಶಬೇಕೆಂದು ಕೇಳಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯವಾಗಿ ನಾನು ಹೇಳುವುದಿಷ್ಟೆ, ನಮ್ಮ ಭಾಗಕ್ಕೆ ಸಾಕಷ್ಟು ಮೇವನ್ನು ಸರಬರಾಜು ಮಾಡಬೇಕು. ದನಗಳಿಗೆ ಈ ಖಾಯಿಲೆ ಬಂದರೆ ನೋಡಿಕೊಳ್ಳಲು ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರ್‌ಗಳಿಲ್ಲ. ಎಲ್ಲಾ ಕಡೆಗೂ ಡಾಕ್ಟರ್‌ಗಳನ್ನು ನೇಮಕ ಮಾಡಬೇಕು ಮತ್ತು ಸಾಕಷ್ಟು ಪ್ರಮಾಣದಲ್ಲಿ ಔಷಧಗಳನ್ನು ಒದಗಿಸಬೇಕು. ಈಗ ಅನೇಕ ಜಿಲ್ಲೆಗಳಲ್ಲಿ ಬರಗಾಲ ಬಂದಿರುವು ದರಿಂದ ಸಾಲದ ವಸೂಲಿಯನ್ನು ಮುಂದಕ್ಕೆ ಹಾಕಬೇಕು, ಇಲ್ಲದಿದ್ದರೆ ಬಡವರಿಗೆ ತೊಂದರೆಯಾಗುತ್ತದೆ. ಈಗ ಮಾನ್ಯ ಸಹಕಾರ ಸಚಿವರು ಸಭೆಯಲ್ಲಿ ಇಲ್ಲ. ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಇರುವಂತಹ ಬಾವಿಗಳನ್ನು ಇನ್ನೂ ಆಳವಡಿಸಬೇಕು. ಈಗ ಕೆಲವು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕುತ್ತಿದ್ದಾರೆ. ಅದರ ಜೊತೆಗೆ ತೆರೆದ ಬಾವಿಗಳನ್ನು ಸಹ ತೆಗೆಯಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಸಾಕಷ್ಟು ಹಣ ವನ್ನು ಸರ್ಕಾರದವರು ಒದಗಿಸಬೇಕು.

ಅಧ್ಯಕ್ಷರು.—ತಾವು ಇದೇರೀತಿ ಮಾತನಾಡುತ್ತಾ ಹೋದರೆ ಹೇಗೆ ? ತಾವು ಕೊಟ್ಟ ಸಮಯ ಕ್ಕಿಂತ ಹೆಚ್ಚು ಕಾಲ ಮಾತನಾಡಿದ್ದೀರಿ. ತಾವು ಮುಗಿಸದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ ತಾವು ಈ ರೀತಿ ಮಾಡಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಿದ್ದರೆ ನಾನು ಮಾತನಾಡುವುದೇ ಇಲ್ಲ, ಕುಳಿತು ಕೊಳ್ಳುತ್ತೇನೆ.

ಶ್ರೀ ಕುಮಾರಗೌಡ ಪಾಟೀಲ್ (ಬಸವನ ಬಾಗೇವಾಡಿ) —ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ತಲೆದೋರಿರುವಂತ ಕ್ಷಾಮ ನಿವಾರಣೆ ಮಾಡಲಿಕ್ಕೆ ಒಂದು ಶಾಶ್ವತವಾದಂತಹ ಯೋಜನೆಯನ್ನು ನಾವು ಕೈಗೊಳ್ಳಬೇಕು. ಈ ರೀತಿ ಕ್ಷಾಮ ನಿವಾರಣೆಗೆ ಕೈಗೊಳ್ಳುವ ಯೋಜನೆಗೆ ಯಾವುದೇ ರೀತಿಯ ರಾಜಕೀಯವನ್ನು ಬೆರಸಬಾರದು. ಈ ಬರಗಾಲ ಪರಿಸ್ಥಿತಿಯು ಒಂದು ಜ್ವಲಂತ ಸಮಸ್ಯೆಯಾಗಿದೆ. ಇದನ್ನು ಶಾಶ್ವತವಾಗಿ ಪರಿಹಾರ ಮಾಡಲೇ ಬೇಕು. ಸಾಧಾರಣವಾಗಿ, ನಮ್ಮ ಬಿಜಾಪುರ ಜಿಲ್ಲೆಯಲ್ಲಿ 3 ವರ್ಷದಲ್ಲಿ 2 ಸಲ ಬರಗಾಲ ಬಂದೇ ಬರುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಸಭೆಯನ್ನು 5-30 ನಿಮಿಷದವರೆಗೂ ನಡೆಸೋಣ. ಕುಮಾರಗೌಡರೆ, ಮಾತನಾಡಿ.

ಶ್ರೀ ಕುಮಾರಗೌಡ ಪಾಟೀಲ್.—ಈ ಕ್ಷಾಮವನ್ನು ಹೇಗೆ ನಿವಾರಣೆ ಮಾಡಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಬೇಕು. ಅಧ್ಯಯನ ಮಾಡಲು ಒಂದು ಸಮಿತಿ ಇರಬೇಕು, ಸಾಮಾನ್ಯವಾಗಿ ಎಂ.ಎಲ್.ಎ.ಗಳನ್ನು ಸೇರಿಸಿ ಒಂದು ಸಮಿತಿ ಮಾಡಿ ಅಧ್ಯಯನ ಮಾಡಿಸುತ್ತಿದ್ದರು. ಈ ಸಾರಿ ಎಂ. ಎಲ್.ಎ.ಗಳ ಸಮಿತಿಗೆ ಬದಲಾಗಿ ಅಧಿಕಾರಿಗಳ ಮತ್ತು ತಜ್ಞರ ಸಮಿತಿಯನ್ನು ಮಾಡಿ ಅವರಿಂದ ಈ ಕ್ಷಾಮ ನಿವಾರಣೆಯನ್ನು ಶಾಶ್ವತವಾಗಿ ಹೇಗೆ ಪರಿಹರಿಸಬಹುದು ಎಂಬುದನ್ನು ಅಧ್ಯಯನ ಮಾಡಿಸಿ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು. ಎಲ್ಲೆಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳ ಬಹುದೋ ಅಂತಹ ಕಡೆಗಳಲ್ಲೆಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಮಹಾರಾಷ್ಟ್ರ ರಾಜ್ಯ ದಲ್ಲಿ ಹತ್ತು ಮೈಲುಗಳ ಅಂತರದಲ್ಲಿ ಒಂದೊಂದು ಸಣ್ಣ ಸಣ್ಣ ನೀರಾವರಿ ಬ್ಯಾರೇಜ್ ಯೋಜನೆಗಳನ್ನು ಮಾಡಿರುತ್ತಾರೆ, ಇದರಿಂದ ನೀರು ಎಲ್ಲಾ ಕಡೆಗೂ ಹರಿದು ವ್ಯವಸಾಯಕ್ಕೆ ಅನುಕೂಲವಾಗುತ್ತದೆ

ಹಾಗೂ ಕ್ಷಾಮ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಮಲಪ್ರಭಾ, ಘಟಪ್ರಭಾ ಮತ್ತು ಅಪ್ಪರ್‌ಕೃಷ್ಣಾ ಯೋಜನೆಗಳಿಂದ ಬಹಳಷ್ಟು ಉಪಯೋಗ ಆಗಬಹುದು. ಆದರೆ ಇದರಿಂದ ನಮ್ಮ ಜಿಲ್ಲೆಯಲ್ಲಿ 150 ಗ್ರಾಮಗಳು ಮುಳುಗಡೆಯಾಗುತ್ತವೆಯೇ ಹೊರತು ಈ ಯೋಜನೆಗಳಿಂದ ಯಾವುದೇ ರೀತಿಯ ನೀರಾವರಿ ಸೌಲಭ್ಯಗಳು ನಮ್ಮ ಜಿಲ್ಲೆಗೆ ಸಿಗುವುದಿಲ್ಲ. ಆದುದರಿಂದ ನಮ್ಮ ಜಿಲ್ಲೆಗೆ ಏತ ನೀರಾವರಿ ಯೋಜನೆಗಳನ್ನು ವ್ಯಾಪಕವಾಗಿ ಕೈಗೊಳ್ಳಬೇಕು. ನಮ್ಮ ಜಿಲ್ಲೆಯಿಂದ ಈ ದಿನ ಬಹಳ ಜನ ಸ್ವಾತಂತ್ರ್ಯ ಹೋರಾಟಗಾರರು ಇಲ್ಲಿಗೆ ಬಂದಿದ್ದಾರೆ, ಅವರು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಜಿಲ್ಲೆಯ ಸಮಸ್ಯೆಗಳನ್ನು ಅವರಿಗೆ ಭಿನ್ನವಿಸಿಕೊಂಡಿದ್ದಾರೆ. ಏತ ನೀರಾವರಿ ಯೋಜನೆಗಳನ್ನು ಸರ್ಕಾರದ 7ನೆಯೋಜನೆಯಲ್ಲಿ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗಿನ ಕಾಲದಲ್ಲಿ ಮಳೆಯು ಸಕಾಲದಲ್ಲಿ ಬಾರದೆ ಇರುವುದಕ್ಕೆ ಮತ್ತೊಂದು ಕಾರಣವೆಂದರೆ, ರಾಜ್ಯದಲ್ಲಿ ಮರಗಿಡಗಳು ಕಡಿಮೆಯಾಗಿರುವುದು. ಆದುದರಿಂದ ಇನ್ನು ಮುಂದೆ ಎಲ್ಲಾ ಕಡೆಗಳಲ್ಲೂ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಅರಣ್ಯ ಇಲಾಖೆಯವರು ಹೆಚ್ಚು ಹೆಚ್ಚಾಗಿ ಹಾಕಿಕೊಳ್ಳಬೇಕು. ಗಿಡಮರಗಳನ್ನು ಬೆಳೆಸಿದರೆ ಮಳೆಯು ಚೆನ್ನಾಗಿ ಬರುತ್ತದೆ. ಹಾಗೂ ಮಣ್ಣಿನ ಕೊರೆತವನ್ನೂ ತಡೆಗಟ್ಟಬಹುದು. ಆಗ ಪ್ರಕೃತಿದತ್ತವಾಗಿ ಮಳೆಯು ಸಕಾಲಕ್ಕೆ ಸರಿಯಾಗಿ ಬರುತ್ತದೆ. ಗಿಡಗಳನ್ನು ನೆಡುವಾಗ ಸುಬಾಬುಲ್ ಎಂಬ ಒಂದು ರೀತಿಯ ಗಿಡ ಇದೆ, ಅದನ್ನು ಬೆಳೆಸುವುದರಿಂದ ದನಕರುಗಳಿಗೆ ಮೇವು ಸಿಗುತ್ತದೆ ಹಾಗೂ ಮರಗಳನ್ನು ಬೆಳೆಸಿದಂತೆಯೂ ಆಗುತ್ತದೆ. ಆದುದರಿಂದ ಅರಣ್ಯ ಇಲಾಖೆಯವರು ಈ ಸುಬಾಬುಲ್ ಮರಗಳನ್ನು ಬೆಳೆಸುವುದು ಒಳ್ಳೆಯದು. ಕ್ಷಾಮ ಪರಿಹಾರವನ್ನು ಮಾಡಲು ಮಾನ್ಯ ಸದಸ್ಯರಾದ ಬಾಬುರೆಡ್ಡಿಯವರು ಹೇಳಿದ ಪ್ರಕಾರ ಪ್ರತಿ ಹಳ್ಳಿಯಲ್ಲೂ ಹತ್ತು ಹದಿನೈದು ಜನಕ್ಕೆ ಒಂದರಂತೆ, ಅಂದರೆ ಸಾಮೂಹಿಕವಾಗಿ ಬಾವಿ ಮತ್ತು ಬೋರ್‌ಗಳನ್ನು ಸರ್ಕಾರದವರು ತೋಡಿಸಿಕೊಟ್ಟರೆ ತುಂಬಾ ಒಳ್ಳೆಯದಾಗುತ್ತದೆ. ರೈತರುಗಳು ಬಾವಿ ಮತ್ತು ಬೋರ್‌ಗಳನ್ನು ಹಾಕಿಸುವಾಗ ಸರ್ಕಾರದವರು ಅವರಿಗೆ ಸಬ್‌ಸಿಡಿಗಳನ್ನು ಕೊಡಬೇಕು. ಈಗೀಗ ಮಧ್ಯಮವರ್ಗದ ರೈತರುಗಳು ಸಹ ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯವಿಲ್ಲವಾಗಿರುವುದರಿಂದ ಅವರುಗಳಿಗೂ ಸಹ ಸರ್ಕಾರದವರು ವ್ಯವಸಾಯವನ್ನು ಮಾಡಲಿಕ್ಕೆ ಪ್ರೋತ್ಸಾಹ ಕೊಡಬೇಕು. ಇನ್ನು ಬಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರವು ಕೂಡಲೇ ರಿಗ್ ಯಂತ್ರಗಳನ್ನು ಕಳುಹಿಸಿ ಕೊಳವೆ ಬಾವಿಗಳನ್ನು ತೋಡಿಸಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಹವಗಪ್ಪ ಪಾಟೀಲ್ (ಹುಮ್‌ನಾಬಾದ್).—ಮಾನ್ಯ ಅಧ್ಯಕ್ಷರೇ, ಬೀದರೆ ಜಿಲ್ಲೆಯಲ್ಲಿ 3 ವರ್ಷದಲ್ಲಿ 2 ಸಲ ಬರಗಾಲ ಬಂದಹಾಗೆ ಆಗಿದೆ. ಕೆಲವು ದಿನಗಳ ಹಿಂದೆ ಸುಮಾರಾಗಿ ನಮ್ಮ ಜಿಲ್ಲೆಯಲ್ಲಿ ಮಳೆ ಬಿದ್ದಿತ್ತು. ಇದನ್ನು ಕಂಡು ರೈತರು ಇನ್ನು ಮುಂದೆಯು ಮಳೆ ಸರಿಯಾಗಿ ಬರಬಹುದೆಂದು ನಂಬಿ, ಹೊಲಕ್ಕೆ ಎಲ್ಲಾ ಗೊಬ್ಬರವನ್ನು ಹಾಕಿ ಮನೆಯಲ್ಲಿದ್ದ ಬೀಜವನ್ನೆಲ್ಲಾ ಬಿತ್ತನೆ ಮಾಡಿದರು. ಆದರೆ ಮಳೆಯು ಮತ್ತೆ ಬರಲೇ ಇಲ್ಲ. ಮಳೆ ಆಗದೇ ಇದ್ದುದರಿಂದ ರೈತರು ಬೀಜ ಮತ್ತು ಗೊಬ್ಬರವನ್ನು ಕಳೆದುಕೊಂಡಿದ್ದಾರೆ. ಈ ರೀತಿ ಎರಡೂ ರೀತಿಯಿಂದ ನಮ್ಮ ಜಿಲ್ಲೆಯ ರೈತರಿಗೆ ಬಹಳ ತೊಂದರೆಯಾಗಿದೆ. ಇನ್ನು ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನಾಗಿದೆಯೆಂದರೆ, ಜನರು ಕುಡಿಯಲು ನೀರು ಸಿಗದೆ ಕಂಗಾಲಾಗಿದ್ದಾರೆ, ಪರಿಸ್ಥಿತಿಯಂತೂ ಬಹಳ ಭೀಕರವಾಗಿದೆ. ಆದುದರಿಂದ ಸರ್ಕಾರವು ಕೂಡಲೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಬೋರ್‌ವೆಲ್‌ಗಳನ್ನು ಹಾಕಿಸಬೇಕು. ನಮ್ಮ ಜಿಲ್ಲೆಯಲ್ಲಿ ಓಪನ್ ವೆಲ್ಸ್ ಬಹಳ ಇವೆ, ಆದರೆ ಅವುಗಳಲ್ಲಿ ನೀರು ಇಲ್ಲವೇ ಇಲ್ಲ. ಎಲ್ಲಾ ಬಾವಿಗಳು ಒಣಗಿ ಹೋಗಿವೆ. ದನಕರುಗಳಿಗೆ ಮೇವು ಇಲ್ಲದೆ ಪರಿಸ್ಥಿತಿಯು ಬಹಳ ಗಂಭೀರವಾಗಿದೆ. ಸರ್ಕಾರವು ಯಾವುದಾದರೂ ಒಂದು ಸ್ಪೆಷಲ್ ಸಾಲದ ಯೋಜನೆಯನ್ನು ಮಾಡಿ ರೈತರಿಗೆ ಹಣವನ್ನು ಕೊಟ್ಟು ಸಹಾಯ ಮಾಡಬೇಕು ಎಂದು ಮುಖ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ನಾನು ಅವರನ್ನು ಕಂಡು ನಮ್ಮ ಜಿಲ್ಲೆಗೆ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದೆ. ಆಗ ಅವರು ನಿಮ್ಮ ಜಿಲ್ಲೆಗೆ 57 ಲಕ್ಷ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಾಗಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ನಾನು ಇದನ್ನು ರಾಜಕೀಯ ದೃಷ್ಟಿಯಿಂದ ಹೇಳುತ್ತಾ ಇಲ್ಲ. ನಿಜವಾಗಿಯೂ ಇದು ಸತ್ಯ ಸಂಗತಿಯಾಗಿದೆ. ಇದಕ್ಕಾಗಿ ಇರಿಸಿದ 57 ಲಕ್ಷರೂಪಾಯಿಗಳಲ್ಲಿ ಒಂದು ಲಕ್ಷ ಬರುತ್ತಾ ಇದೆ ಎಂದು ಅಧಿಕಾರಿಯವರು ಹೇಳಿದರು. ಆದರೆ, ಇದುವರೆಗೂ ಹಣ ಬಂದಿಲ್ಲ. ಆದುದರಿಂದ ಯಾವುದೇ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಆಗಿಲ್ಲ. ಅಧ್ಯಕ್ಷರೇ ನಮ್ಮ ಬೀದರ್ ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆ, ನಮ್ಮಲ್ಲಿ ಯಾವ ಬೆಳೆಯೂ ಚೆನ್ನಾಗಿ ಬರುತ್ತಾ ಇಲ್ಲ, ಮಳೆಯೂ ಇಲ್ಲ. ಅದಕ್ಕಾಗಿ ಮಾನ್ಯ ಮಂತ್ರಿಯವರು ಇದನ್ನು ನೋಡಿಕೊಂಡು ನಮ್ಮ ಜಿಲ್ಲೆಗೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

5-00 p m.

ಕಾರಂಜ ಪ್ರೊಜೆಕ್ಟ್ ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳೂ ನೋಡುವವರೆಗೂ ಮಾಡಿಕೊಡುತ್ತಾರೋ ಇಲ್ಲವೊ ಎಂದು ನನಗೆ ಬಲವಾದ ಸಂಶಯವಿದೆ.

ಇನ್ನು ಧಾನ್ಯದ ವಿಷಯವಾಗಿ ಹೇಳಿದರು, ಧಾನ್ಯಗಳ ಸರಬರಾಜು ಮಾಡುತ್ತಾ ಇದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿಯ ಬಡಜನರು ಮತ್ತು ಬಹುಸಂಖ್ಯೆಯ ಜನರು ಜೋಳವನ್ನು ತಿನ್ನುವವರಾಗಿದ್ದಾರೆ. ಆದರೆ ನಮ್ಮ ಜನರಿಗೆ ಈಗ ಹುಳುಕು ಗೋಧಿಯನ್ನು ಸರಬರಾಜು ಮಾಡುತ್ತಾ ಇದ್ದಾರೆ. ಆದ್ದರಿಂದ ಜೋಳ ತಿನ್ನುವ ನಮ್ಮ ಜನರಿಗೆ ಬಿಳಿಜೋಳವನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಇದರಿಂದಾಗಿ ನಮ್ಮ ಬಡಜನರಿಗೆ ಬಹಳವಾಗಿ ಅನುಕೂಲವಾಗುತ್ತದೆ. ನಮ್ಮಲ್ಲಿಗೆ ಅಕ್ಕಿಯು ಬರಬೇಕಾದರೆ ಅದಕ್ಕೆ ಒಂದು ಪ್ರಮಾಣವಿದೆ. ಹುಮ್ನಾಬಾದನ 120 ಹಳ್ಳಿಗಳಿಗೆ ಒಂದು ನೂರು ಚೀಲ ಅಕ್ಕಿಯು ಬಂದರೆ, ಅದನ್ನು ಎಷ್ಟು ಜನರಿಗೆ ವಿತರಿಸಬಹುದು? ನೀವೇ ಅಂದಾಜು ಮಾಡಿ, ನನ್ನ ಮಾತು ಸುಳ್ಳಾದರೆ ತಾವುಗಳು ಬೇಕಾದರೆ ರಿಪೋರ್ಟ್‌ನ್ನು ತರಿಸಿ ನೋಡಬಹುದು. ಹೀಗಾದರೆ, ಕೂಲಿಗಾರರು, ರೈತರು, ಅಕ್ಕಿಯನ್ನು ಪಡೆಯಲು ಸಾಧ್ಯವೇ ?

ಇನ್ನು ದನ-ಜಾನುವಾರುಗಳಿಗಾಗಿ ಮೇವನ್ನು ಸಪ್ಲೈ ಮಾಡಿದ್ದೇವೆಂದು ಹೇಳಿದ್ದಾರೆ. ಅದು ಎಲ್ಲಿ ಬಂದಿದೆ ಎಂದು ನನಗೇ ಗೊತ್ತಿಲ್ಲ. ನನ್ನ ತಾಲ್ಲೂಕಿಗೆ ಒಂದು ಸಿವುಡು ಕೂಡಾ ಮೇವು ಬಂದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ವಿಷಯವನ್ನು ತರಬಯಸುತ್ತೇನೆ. ಈಗಗಾಲೇ ನಮ್ಮ ಜಿಲ್ಲೆಯಲ್ಲಿ ರೈತರು ಎರಡೆರಡು ಸಲ ಭಿತ್ತನೆ ಮಾಡಿದ್ದರು, ಬೀಜ ಹಾಕಿದ್ದರು, ಮೊದಲು ಸ್ವಲ್ಪ ಮಳೆ ಬಂತು, ಆಶಾದಾಯಕವಾಗಿತ್ತು. ಈಗ ಮತ್ತೆ ಮಳೆ ಇಲ್ಲವಾಗಿದೆ ಭಿತ್ತಿದ್ದ ಬೆಳೆಗಳೆಲ್ಲಾ ಒಣಗಿ ಹೋಗಿವೆ. ಇವೊತ್ತು ನಾಳೆ ಮಳೆ ಬಂದರೂ ಬಡ ರೈತರಲ್ಲಿ ಪುನಃ ಬೀಜ ಬಿತ್ತಲು ಸಾಮರ್ಥ್ಯವಿಲ್ಲ. ಆದುದರಿಂದ ದಯವಿಟ್ಟು ಸರಕಾರದ ವತಿಯಿಂದ ಅವರಿಗೆ ಬೀಜಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಗೆ ಮಾನ್ಯ ಸರಕಾರ ಮಂತ್ರಿಯವರು ಭೇಟಿ ಕೊಟ್ಟಾಗ ನಾನು ಊರಿನಲ್ಲಿ ಇರಲಿಲ್ಲ. ಬರಗಾಲ ಪರಿಸ್ಥಿತಿಯಿಂದಾಗಿ ನಮ್ಮ ಜನರು ಗಾಬರಿಯಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಎಲ್ಲಾ ಕಡೆಗಳಲ್ಲಿಯೂ ಬರಗಾಲ ಪರಿಸ್ಥಿತಿ ಇದೆಯೆಂದು ಒಪ್ಪಿಕೊಂಡ ಸಮಯದಲ್ಲಿ, ಬರಗಾಲದಿಂದ ಕಷ್ಟಕ್ಕೊಳಗಾಗಿರುವವರಲ್ಲಿ ಅವರ ಸಾಲ ವಸೂಲು ಮಾಡುವುದು ತಪ್ಪು. ಆದುದರಿಂದ ಯಾವುದೇ ರೀತಿಯಿಂದ ಸಾಲ ವಸೂಲು ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ಮತ್ತು ಜಾನುವಾರುಗಳಿಗೆ ಅದಷ್ಟು ಬೇಗ ಮೇವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ನಡೆಸಿಲ್ಲ. ಬರಗಾಲ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಕಾಮಗಾರಿಯನ್ನು ಅದಷ್ಟು ಬೇಗ ಪ್ರಾರಂಭ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನನ್ನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಒಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಆರ್.ಎಂ. ಪಾಟೀಲ (ಅರಭಾವಿ ಕ್ಷೇತ್ರ) .—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರಕಾರದವರು ಇಂದಿನ ಈ ಪರಿಸ್ಥಿತಿಯಲ್ಲಿ ಬರಗಾಲ ಪರಿಹಾರ ಕಾಮಗಾರಿಯನ್ನು ಯುದ್ಧದೋಪಾದಿಯಲ್ಲಿ ತೆಗೆದು ಕೊಂಡಿದ್ದಕ್ಕಾಗಿ ಮೊದಲು ಅವರನ್ನು ಅಭಿನಂದಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಏನು ಬರಗಾಲ ಬರುತ್ತಿದೆ, ಅದರ ಪರಿಣಾಮ ನಮ್ಮ ಕ್ಷೇತ್ರಕ್ಕೂ ಆಗಿವೆ, ಮಳೆಯ ಅಭಾವದಿಂದಾಗಿ ನಮ್ಮ ಜನರಿಗೂ ಬಹಳಷ್ಟು ತೊಂದರೆಯಾಗಿದೆ. ಈ ವರ್ಷದ ಬರಗಾಲವನ್ನು ನೋಡಿದರೆ ನನ್ನ ಕ್ಷೇತ್ರದಲ್ಲಿ ಬರತಕ್ಕಂತಹ 70 ಹಳ್ಳಿಗಳು ನೀರಾವರಿ ಪ್ರದೇಶಗಳು ಆಗಿವೆ. ಆದರೆ ಈ ಭಾರಿಯ ಮಳೆಯ ಅಭಾವದಿಂದಾಗಿ ಮಾರ್ಕಾಂಡೆಯ, ಘಟಪ್ರಭಾ, ನದಿ ನೀರಿನ ಕಡಿಮೆಯಿಂದಾಗಿ 36ರಲ್ಲಿ 35 ಹಳ್ಳಿಗಳಿಗೆ ಬೆಳೆಗೆ ನೀರಿಲ್ಲವಾಗಿದೆ. ನಾನು ಆ ಪ್ರದೇಶಗಳಿಗೆ ಹೋಗಿ ಹೆಚ್ಚು ಬೆಳೆ ಮಾಡಬೇಡಿ ಎಂದು ಹೇಳಿ ಬಂದಿದ್ದೇನೆ, ನನ್ನ ಮತಕ್ಷೇತ್ರದಲ್ಲಿ ಅರ್ಧ ಭಾಗದಷ್ಟು ಬರಗಾಲ ಪೀಡಿತ ಪ್ರದೇಶವಾಗಿದೆ. ಅರಭಾವಿ ಕ್ಷೇತ್ರ ನೀರಾವರಿ ಪ್ರದೇಶವೆಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಆದರೆ ನನ್ನ ಕ್ಷೇತ್ರದ ಅರ್ಧ ಪ್ರದೇಶ ಕಳೆದ ಮೂರು ವರ್ಷಗಳಿಂದ ಅಲ್ಲಿ ಯಾರೂ ನೋಡದಿರತಕ್ಕಂತಹ ಪರಿಸ್ಥಿತಿ ಒಳಗಾಗಿದೆ, ಅಲ್ಲಿನ ಜನರು ಇವೊತ್ತಿನ ದಿವಸ ತೊಂದರೆಗೊಳಗಾಗಿದ್ದಾರೆ. ಮುಂದೆ ಅವರುಗಳು ಕಷ್ಟಕ್ಕೊಳಗಾಗದಂತೆ ಆ ಭಾಗದ ಜನರನ್ನು ರಕ್ಷಣೆ ಮಾಡತಕ್ಕಂದಾದ್ದು ಅತ್ಯಾವಶ್ಯಕವಾಗಿದೆ. ಇದನ್ನು ಮಾನ್ಯ ಸರಕಾರದವರು ಗಮನದಲ್ಲಿಟ್ಟುಕೊಂಡು, ಯುದ್ಧದೋಪಾದಿಯಲ್ಲಿ, ನೀರಾವರಿ ಯೋಜನೆಗಳನ್ನು ಮಾಡಿದರೆ, ಮುಂದೆ ಬರತಕ್ಕಂತಹ ಬರಗಾಲವನ್ನು ತಡೆಯಬಹುದಾಗಿದೆ. ಇವೊತ್ತಿನ ದಿವಸ ಘಟಪ್ರಭ ಬಲದಂಡೆ ಕಾಲುವೆ ನಿರ್ಮಾಣ ಯೋಜನೆ ಏನು ಇದೆ ಅದಕ್ಕೆ ಹೆಚ್ಚು ಗಮನವನ್ನು ಸರಕಾರದವರು ಕೊಟ್ಟರೆ, ನಮಗಷ್ಟೇ

ಅಲ್ಲದೇ ಬಿಜಾಪುರ ಜಿಲ್ಲೆಯ ಕೆಲವು ಭಾಗಗಳವರಿಗೂ ಅನುಕೂಲವಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಧೂಪದಾಳ ಕಾಲುವೆಯ ಪ್ರದೇಶದಲ್ಲಿ ನಡುವೆ ಇರತಕ್ಕಂತಹ ಖಾಲಿ ಪ್ರದೇಶದಲ್ಲಿ ಬರೀ ಜಾಲಿ ಗಿಡಗಳು ಬೆಳೆದಿವೆ. ಆ ಜಾಗವನ್ನು ರೈತರಿಗೆ ಮಣ್ಣು ತೆಗೆಯಲು ಹಂಚಿದರೆ ಅವರು ಅದನ್ನ ಸದುಪಯೋಗ ಪಡಿಸಿಕೊಂಡಾರು, ಅಥವಾ ಆ ಪ್ರದೇಶದಲ್ಲಿ ಏನಾದರೂ ಮಾಡಬಹುದು. ಅಲ್ಲಿ ಪಕ್ಷಿ ಧಾಮವನ್ನು ಮಾಡಬೇಕೆಂದು ಈ ಹಿಂದೆ ನಿಶ್ಚಯ ಮಾಡಿದ್ದರು. ಆದರೆ ಪಿ.ಡಬ್ಲ್ಯೂ.ಡಿ ಸಚಿವರು ಬಂದಾಗ ಆ ಪ್ರದೇಶದ ಮಣ್ಣನ್ನು ಬೇರೆ ಕಡೆಗೆ ಒಯ್ಯಲು ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಪಕ್ಷಿ ಧಾಮವನ್ನು ಅಲ್ಲಿ ಮಾಡುವುದರ ಬಗ್ಗೆ ಹೆಚ್ಚು ಗಮನ ಕೊಟ್ಟು ಅಲ್ಲಿರತಕ್ಕಂತಹ ಮಣ್ಣನ್ನು ಬೇರೆ ಕಡೆಗೆ ಸಾಗಿಸಿದರೆ ಅನುಕೂಲವಾದೀತು. ಈಗಾಗಲೇ ಮೂರು ವರ್ಷಗಳಿಂದ ಬರಗಾಲ ಇರತಕ್ಕಂತಹ ನನ್ನ ಮತಕ್ಷೇತ್ರದಲ್ಲಿ ಪಿ.ಎಲ್.ಡಿ ಬ್ಯಾಂಕ್ ಮತ್ತು ಸರಕಾರ ಸಂಘಗಳಿಂದ ಸಾಲ ವಸೂಲು ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ನನ್ನ ಕ್ಷೇತ್ರದ ಬಗ್ಗೆ ಕೊಟ್ಟಿರತಕ್ಕಂತಹ ಏತ ನೀರಾವರಿ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸಲಿಲ್ಲ. ದಯವಿಟ್ಟು ಅದನ್ನು ಸೇರಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಕಾಮಗಾರಿಗಳಿಗೆ ಹಣ ಬಂದಿದೆ, ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು, ಆದರೆ ಕೆಳಗಿನ ಅಧಿಕಾರಿಗಳು ಬೇರೆ ಹೇಳುತ್ತಿದ್ದಾರೆ. ಅವರುಗಳು ಒಂದು ರೀತಿಯ ಕುಂಟು ನೆಪ ಹೇಳುತ್ತಿದ್ದಾರೆ. ಆದುದರಿಂದ ಬರಗಾಲ ಪರಿಹಾರ ಕಾಮಗಾರಿ ಯೋಜನೆಯಲ್ಲಿ ಕೆಳಗಿನ ಅಧಿಕಾರಿಗಳು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದರ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು. ಇಲ್ಲವಿದ್ದಲ್ಲಿ ಅವರುಗಳು ಮಾಡುತ್ತಿರುವ ನಿರ್ಲಕ್ಷತೆಯಿಂದಾಗಿ ಜನರಿಗೆ ಸರಕಾರದ ಬಗ್ಗೆ ವಿರೋಧ ಭಾವನೆ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳ ಬಯಸುತ್ತೇನೆ. ಒಟ್ಟಿನಲ್ಲಿ ನನ್ನ ಕ್ಷೇತ್ರದ ಬಗ್ಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ರಾಮಯ್ಯ (ಹಿರಿಯೂರು).--ಸನ್ಮಾನ್ಯ ಅಧ್ಯಕ್ಷರೇ ಕಳೆದ ಎರಡು ದಿವಸಗಳಿಂದ ಸನ್ಮಾನ್ಯ ಮಿತ್ರರು ಬರಗಾಲ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡಿ ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಈ ಬರಗಾಲ ಪರಿಸ್ಥಿತಿ ಎಂಬುದು ಮಾನವನಿಗೆ ತಾನು ಜೀವಿಸಿ ಬದುಕಿರುವ ತನಕ ಇರತಕ್ಕಂಥ ಒಂದು ಯಾತನೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿಷಯವಾಗಿ ಚೀನಾ ದೇಶದ ಒಬ್ಬ ತಜ್ಞ ಒಂದು ಮಾತನ್ನು ಹೇಳಿದ್ದಾನೆ. ಅದೇನೆಂದರೆ ದೇಶದಲ್ಲಿ ಬರಗಾಲ ಪರಿಸ್ಥಿತಿ ಹೆಚ್ಚಾದಂತೆಲ್ಲಾ ಮನುಷ್ಯ ಹಣ ಮಾಡಲು ಮುಂದಾಗುತ್ತಾನೆಂದು. ಈ ಮಾತನ್ನು ಇವೊತ್ತು ನಾವು ನಮ್ಮ ರಾಜ್ಯದಲ್ಲಿ ವಿಮರ್ಶೆಮಾಡಿ ನೋಡಿದಾಗ ನಿಜವೆಂದು ನಮಗೆ ಅನಿಸುತ್ತದೆ. ನಮ್ಮ ರಾಜ್ಯದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಈ ಬರಗಾಲ ಪರಿಸ್ಥಿತಿಯ ನಿವಾರಣೆಗೆ ಅನೇಕ ಕಾಮಗಾರಿಗಳನ್ನು ಕೈಗೊಂಡಿದ್ದಾರೆ, ಈ ಕಾಮಗಾರಿಗಳಿಗೆ ಸಾಕಷ್ಟು ಹಣವನ್ನು ಸಹ ಒದಗಿಸಿದ್ದಾರೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿರತಕ್ಕಂಥ ಅಧಿಕಾರಿಗಳು ಈ ಕಾಮಗಾರಿಗೆ ಕೊಟ್ಟಿರತಕ್ಕಂಥ ಹಣವೆಲ್ಲಾ ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದ ನಿಜವಾಗಿ ಯಾರಿಗೆ ಪರಿಹಾರ ಸಿಗಬೇಕಾಗಿತ್ತೋ ಅವರಿಗೆ ಪರಿಹಾರ ಸಿಕ್ಕಂತೆ ಆಗಲಿಲ್ಲ. ನನ್ನ ಕ್ಷೇತ್ರದಲ್ಲಿ ಇಂತಹ ಅನೇಕ ಪ್ರಕರಣಗಳನ್ನು ನಾನು ಪಟ್ಟಿಮಾಡಿ ಮಾನ್ಯ ಕಂದಾಯ ಸಚಿವರಿಗೆ ಒಂದು ಪತ್ರವನ್ನು ಸಹ ಬರೆದಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಆ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆಂದು ನನಗೆ ಭರವಸೆ ಕೊಟ್ಟಿದ್ದಾರೆ. ಆದರೆ ಆ ವಿಷಯ ಎಲ್ಲಿಗೆ ಬಂದು ಮುಟ್ಟಿದೆಯೋ ನನಗಂತೂ ಗೊತ್ತಿಲ್ಲ. ಈ ಬರಗಾಲ ಪರಿಸ್ಥಿತಿಗೆ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರಲಿಲ್ಲವೆಂದು ದೂರುವ ಬದಲು ಈ ರೀತಿಯಾಗಿ ಹಣ ದುರುಪಯೋಗವಾಗುವುದನ್ನು ತಡೆಗಟ್ಟಿದರೆ ಒಳ್ಳೆಯದೆಂದು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಮಾಡಬಯಸುತ್ತೇನೆ. ಈಗ ಆಡಳಿತ ಪಕ್ಷದಲ್ಲಿರತಕ್ಕಂಥ ಸದಸ್ಯರು ಹಿಂದೆ ವಿರೋಧಪಕ್ಷದಲ್ಲಿ ಕುಳಿತಿದ್ದರು. ಆಗ ಇದ್ದಂತಹ ಆಡಳಿತ ಪಕ್ಷವನ್ನು ಇವರು ದೂರುತ್ತಿದ್ದರು. ನಿಮ್ಮ ಕಾರ್ಯಕ್ರಮಗಳು ಸರಿಯಾಗಿಲ್ಲ, ನಿಮ್ಮ ನೀತಿ ರೀತಿಗಳು ಸರಿಯಾಗಿಲ್ಲ ಇನ್ನೂ ಅನೇಕ ರೀತಿಯ ಅಪವಾದಗಳನ್ನು ಬೀದಿಯಲ್ಲಿ ನಿಂತು ಮಾಡುತ್ತಿದ್ದರು. ಆದರೆ ಇವೊತ್ತು ತಾವು ಅಧಿಕಾರದಲ್ಲಿ ಇದ್ದೀರಿ. ತಾವು ಯಾವ ರೀತಿಯ ಹೊಸ ಬದಲಾವಣೆಗಳನ್ನು ಸಹ ಮಾಡಿಲ್ಲ. ಹಿಂದೆ ಇದ್ದಂತಹ ಆಡಳಿತ ಪಕ್ಷದ ಧಾಟಿಯಲ್ಲಿಯೇ ತಾವು ಕೂಡ ಹೋಗುತ್ತಿದ್ದೀರಿ. ತಮ್ಮ ಯಾವ ಕೃತಿಯಲ್ಲಿ ಕಿಂಚಿತ್ತೂ ಕೂಡ ವ್ಯತ್ಯಾಸವಿಲ್ಲ. ಮಾನ್ಯ ಕಂದಾಯ ಸಚಿವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಿ ಆ ಹೇಳಿಕೆಯಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಇಂತಹ ಅಂಕಿಅಂಶಗಳನ್ನು ಕೊಡುವ ಬದಲು ರಾಜ್ಯದಲ್ಲಿ ಬರಗಾಲ ನಿವಾರಣೆಗಾಗಿ ಶಾಶ್ವತವಾದಂಥ ಒಂದು ಯೋಜನೆಯನ್ನು ರೂಪಿಸುವುದು ಒಳ್ಳೆಯದು. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ನದಿಗಳ ನೀರನ್ನು ಸರಿಯಾಗಿ

ಉಪಯೋಗಿಸಿಕೊಂಡರೆ ಕೆಲವೊಂದು ಭಾಗಗಳಲ್ಲಿ ಆದರೂ ಕೂಡ ಸರ್ಕಾರದವರು ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡಬಹುದು. ಈಗ ನಾವು ಜುಲೈ ತಿಂಗಳಲ್ಲಿ ಕಾಲಿಟ್ಟಿದ್ದೇವೆ.. ಇದುವರೆವಿಗೂ ಸರಿಯಾಗಿ ಮಳೆಯಾಗಿಲ್ಲ. ಬಿತ್ತನೆ ಮಾಡುವಂತಹ ಕಾಲ ಮಿಂಚಿಹೋಗಿದೆ. ಹಾಲಿ ಬಿತ್ತನೆ ಮಾಡಿರತಕ್ಕಂಥ ಬೀಜ ಭೂಮಿಯಲ್ಲಿ ಒಣಗಿ ಹೋಗಿದೆ. ಒಂದು ವೇಳೆ ಇನ್ನು ಮೇಲಾದರೂ ದೇವರ ದಯೆಯಿಂದ ಮಳೆ ಬಂದರೆ ಸರಿಯಾಗಿ ಬಿತ್ತನೆ ಯಾದರೆ ಫಸಲು ರೈತನ ಕೈಗೆ ಬರಲು ಇನ್ನೂ 5–6 ತಿಂಗಳಾದರೂ ಆಗುತ್ತದೆ. ಆದ್ದರಿಂದ ಅಲ್ಲಿಯುವರೆವಿಗೂ ರೈತನಿಗೆ ಸರ್ಕಾರದವರು ಕಾಮಗಾರಿ ಕೆಲಸಗಳನ್ನು ಕೊಟ್ಟು ಸಹಾಯ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಕಾಮಗಾರಿ ಕೆಲಿಸ ಕಾರ್ಯಗಳನ್ನು ಮಾಡುವಾಗ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಸೃಷ್ಟಿಸಿ ಕೊಡುತ್ತಾರೆ. ಇದರಿಂದ ಸರ್ಕಾರದ ಹಣ ದ ದುಪಯೋಗವಾಗುತ್ತದೆ. ನಾನು ಈ ವಿಷಯುವನ್ನು ಟಿ.ಡಿ.ಬಿ. ಮೀಟಿಂಗ್‌ನಲ್ಲಿ ಕೂಡ ಪ್ರತಿ ತಿಂಗಳೂ ಪ್ರಸ್ತಾಪ ಮಾಡಿದ್ದೇನೆ. ಇನ್ನು ಪಶುಗಳಿಗೆ ಸರ್ಕಾರದವರು ಮೇವು ಒದಗಿಸಿಕೊಡಬೇಕು ನಾವು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಸ್ಸಿನಲ್ಲಿ ಬರುವಾಗ ಬಸ್ಸಿಗೆ ಅಡ್ಡವಾಗಿ ಏನಾದರೂ ದನಕರುಗಳು ಬಂದರೆ ಅವು ಆ ರಸ್ತೆಯನ್ನು ಧಾಟಿ ಹೋಗಲು ಕೂಡ ತ್ರಾಣವಿರುವುದಿಲ್ಲ. ಅಷ್ಟು ಬಡಕಲು ಆಗಿವೆ. ಎಷ್ಟೇ ದೂರ ಬಂದರೂ ಕೂಡ ಹಸಿರು ಕ್ರಾಂತಿ ನಮ್ಮ ಕಣ್ಣಿಗೆ ಇದುವರೆವಿಗೂ ಕಾಣುತ್ತಿಲ್ಲ. ರೈತನ ವ್ಯವಸಾಯಕ್ಕೆ ದನಕರುಗಳು ಅಗತ್ಯವಾಗಿ ಬೇಕಾಗಿವೆ. ಆದರೆ ಇವೊತ್ತಿನ ದಿವಸ ಒಂದು ಜೊತೆ ಎತ್ತುಗಳನ್ನು ರೈತ ಕೊಳ್ಳಲು ಹೋದರೆ ಸುಮಾರು 4–5 ಸಾವಿರ ರೂಪಾಯಿಗಳ ಬೆಲೆಯನ್ನು ತೆತ್ತಬೇಕಾಗಿದೆ. ಪ್ರತಿ ದಿವಸ ನೂರಾರು ಜೊತೆ ಎತ್ತು ಮತ್ತು ಹಸುಗಳು ಮಹಾನಗರಗಳ ಕಸಾಯಿ ಅಂಗಡಿಗಳಿಗೆ ಬರುತ್ತಿರುವುದನ್ನು ನಾವು ಕಂಡಿದ್ದೇವೆ. ಆದ್ದರಿಂದ ಸರ್ಕಾರದವರು ಇನ್ನು ಮುಂದಾದರೂ ಈ ಪಶುಗಳಿಗೆ ಮೇವು ಒದಗಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಲಿಹೆ ಕೊಡುತ್ತೇನೆ. ಮತ್ತು ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಬಳಗಿ (ಬ್ಯಾಡಗಿ) .—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಸರ್ಕಾರವನ್ನು ಒತ್ತಾಯ ಮಾಡಿ ರಾಜ್ಯದಲ್ಲಿರತಕ್ಕಂಥ ಬರಗಾಲಪರಿಸ್ಥಿತಿಯನ್ನು ಚರ್ಚೆ ಮಾಡಲು ಶುರು ಮಾಡಿಸಿದರು. ಈ ಬರಗಾಲ ಪರಿಸ್ಥಿತಿಯ ಬಗ್ಗೆ ಮಾನ್ಯ ಮಂತ್ರಿಗಳು ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಿದರು, ಆದರಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ ವಿರೋಧಪಕ್ಷದವರಿಗೆ ಕೆಲಸ ಕಡಿಮೆ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವಿರೋಧ ಪಕ್ಷದ ಸದಸ್ಯರು ಹೇಳಿದಂತೆ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ಬಗಗಾಲ ಪರಿಸ್ಥಿತಿ ಒದಗಿತ್ತೋ ಅಲ್ಲೆಲ್ಲಾ ಸಾಕಷ್ಟು ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟಿದೆ. ಈ ಮಾತನ್ನು ನಾನು ನನ್ನ ಕ್ಷೇತ್ರದ ಅನುಭವದಿಂದ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಕಳೆದ ಭಾರಿ ಇದ್ದಂತಹ ಬರಗಾಲ ಪರಿಸ್ಥಿತಿಗಿಂತ ಇನ್ನೂ ಹೆಚ್ಚಿನ ಬರಗಾಲಪರಿಸ್ಥಿತಿ ಒದಗಿತ್ತು. ಆದರೆ ನಾನು ಈ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸಿಕೊಂಡಾಗ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಇಡೀ ನನ್ನ ಕ್ಷೇತ್ರದಲ್ಲಿ ನಾನಾ ರೀತಿಯ ಕಾಮಗಾರಿ ಕೆಲಸಕಾರ್ಯಗಳನ್ನು ಕೈಗೊಂಡಿದ್ದಾರೆ. ಇದೇ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕಾಮಗಾರಿ ಯೋಜನೆಗಳನ್ನು ರೂಪಿಸಿ ಆಯಾಯಾ ತಾಲ್ಲೂಕುಗಳ ಶಾಸಕರುಗಳನ್ನು ಒಳಗೊಂಡಂತೆ ಉಪ ವಿಭಾಗ ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಆಯಾಯಾ ತಾಲ್ಲೂಕಿನ ಅಧಿಕಾರಿಗಳನ್ನು ಸೇರಿಸಿ ಒಂದು ಸಮಿತಿಯನ್ನು ರಚಿಸಿ ಸಮಿತಿಯ ಸಲಹೆಯಂತೆ ಕಾಮಗಾರಿ ಕೆಲಸಕಾರ್ಯಗಳನ್ನು ಕೈಗೊಂಡಿದ್ದಾರೆ. ಕಳೆದ 15 ದಿವಸಗಳ ಹಿಂದೆ ನನ್ನ ಕ್ಷೇತ್ರದಲ್ಲಿ ಕೂಲಿ ಕೆಲಸಕ್ಕೆ ಜನರು ಸಿಗುತ್ತಿರಲ್ಲ. ಆದರೆ ಈಗ ಮಳೆ ಪೂರ್ತಿಯಾಗಿ ಹೋಗಿರುವುದರಿಂದ ಒಂದು ದಿವಸಕ್ಕೆ 200–300 ಜನರು ಕೂಲಿ ಕೆಲಸಕ್ಕೆ ಬರುತ್ತಿದ್ದಾರೆ. ಪ್ರತಿದಿವಸ ನಾನು ಕಣ್ಣಾರೆ ಕಂಡು ಬಂದು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಕಾಮಗಾರಿ ಕೆಲಸಕಾರ್ಯಗಳನ್ನು ಟಿ.ಡಿ.ಬಿ. ಯವರು ಮತ್ತು ಲೋಕೋಪಯೋಗಿ ಇಲಾಖೆಯವರು ಹಂಚಿಕೊಂಡು ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 357 ಕೆರೆಗಳು ಇದ್ದವು. ಆ ಎಲ್ಲಾ ಕೆರೆಗಳು ಹೂಳು ತುಂಬಿಕೊಂಡು ಹೋಗಿದ್ದವು. ಆದರೆ ಈ ಸಾರಿ ನಮ್ಮ ಸರ್ಕಾರದವರು ಆ ಎಲ್ಲಾ ಕೆರೆಗಳಲ್ಲಿ ಹೂಳು ತೆಗೆಸುವುದರ ಮೂಲಕ ಕಾಮಗಾರಿ ಕೆಲಸಗಳನ್ನು ಮಾಡಿದ್ದಾರೆ. ಇವತ್ತು ಪ್ರತಿಯೊಂದು ಕೆಲಸವನ್ನೂ ಶುರುಮಾಡಿದ್ದಾರೆ, ಕೆರೆಗಳ

---

* ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೂಳು ತೆಗೆಯುವಂತಹ ಕೆಲಸಗಳನ್ನು ಶುರು ಮಾಡಿದ್ದಾರೆ. ರಸ್ತೆ ಮಾಡುವ ಕೆಲಸಗಳನ್ನು ತೆಗೆದು ಕೊಂಡಿದ್ದಾರೆ. ಬರಗಾಲ ಕಾಮಗಾರಿಗಳ ಅಡಿಯಲ್ಲಿ ರಸ್ತೆ ಮಾಡುವ ಕೆಲಸ ತೆಗೆದುಕೊಂಡು, ಅದಕ್ಕೆ ಮಣ್ಣು ಹಾಕುವುದಷ್ಟೇ ಅಲ್ಲ, ಮುರಮ್ ಹಾಕಿ ರಸ್ತೆಯನ್ನು ಗಟ್ಟಿಮುಟ್ಟಾಗಿಯೇ ಮಾಡಬೇಕೆಂದು ಹೇಳುತ್ತೇನೆ. ನಾನಾ ರೀತಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ಕೆಲಸಕಾರ್ಯಗಳನ್ನು ಶುರುಮಾಡಿದ್ದಾರೆ, ನಡೆಯುತ್ತಿವೇ. ಈ ಸಂದರ್ಭದಲ್ಲಿ ನನ್ನ ತಾಲ್ಲೂಕಿನ ಪರಿಸ್ಥಿತಿಯ ಬಗ್ಗೆ ಕೆಲವೊಂದು ಅಂಕಿ ಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಅಂಕಿಅಂಶಗಳು ಇದ್ದರೆ ಅದನ್ನು ಮಾನ್ಯ ಬೊಮ್ಮಾಯಿಯವರ ಕಡೆ ಬರೆದು ಕಳುಹಿಸಿಕೊಡಿ.

ಶ್ರೀ ಕೆ.ಎಸ್. ಬೀಳಗಿ.—ನಮ್ಮ ತಾಲ್ಲೂಕಿನಲ್ಲಿ ಮಳೆ ಯಾವರೀತಿ ಆಗುತ್ತದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ. 1983ನೇ ಇಸವಿ ಜೂನ್ ತಿಂಗಳಲ್ಲಿ 95 ಮಿಲಿಮೀಟರ್ ಮಳೆ ಯಾಗಿದ್ದರೆ 1984ನೇ ಇಸವಿ ಜೂನ್ ತಿಂಗಳಲ್ಲಿ 104 ಮಿಲಿಮೀಟರ್ ಮಳೆಯಾಗಿದೆ ಆದರೆ ಈ ವರ್ಷ ಜೂನ್ ತಿಂಗಳಲ್ಲಿ ಕೇವಲ 33 ಮಿಲಿ ಮೀಟರ್ ಮಳೆಯಾಗಿದೆ. ಅದೇ ರೀತಿ ಜುಲೈ 83ರಲ್ಲಿ 76 ಮಿಲಿ ಮೀಟರ್ ಮಳೆಯಾಗಿದ್ದು. ಜುಲೈ 84ರಲ್ಲಿ 160 ಮಿಲಿಮೀಟರ್ ಮಳೆಯಾಗಿತ್ತು. ಆದರೆ ಈ ವರ್ಷ ಜುಲೈ ತಿಂಗಳಲ್ಲಿ ಬರೀ 6.8 ಮಿಲಿಮೀಟರ್ ಮಳೆಯಾಗಿದೆ. ಇದರಿಂದ ನಮ್ಮ ತಾಲ್ಲೂಕಿನಲ್ಲಿ ಈ ವರ್ಷ ಎಂತಹ ಗಂಭೀರ ಪರಿಸ್ಥಿತಿ ಇದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬಹುದು. ನಮ್ಮ ತಾಲ್ಲೂಕಿನಲ್ಲಿ 63 ಹಳ್ಳಿಗಳು ಇದ್ದು, 55 ಹಳ್ಳಿಗಳು ಖರೀಫ್ ಕ್ರಾಪನ್ನೇ ಅವಲಂಬಿಸಿದ್ದರೆ ಉಳಿದ 8 ಹಳ್ಳಿಗಳು ಮಾತ್ರ ಹಿಂಗಾರಿ ಪೀಕಿನ ಮಳೆಯನ್ನೇ ಅವಲಂಬಿಸಿವೆ. ಇಂತಹ ಒಂದು ಪರಿಸ್ಥಿತಿಯಲ್ಲಿ, ನಮ್ಮ ತಾಲ್ಲೂಕಿನಲ್ಲಿ ಶೇಕಡಾ 25 ಭಾಗ ಮಲೆನಾಡು ಎಂದು ಪರಿಗಣಿಸಲ್ಪಡುತ್ತದೆ. ಅಲ್ಲಿ ಕೂಡಾ ಮಳೆಗಾಲ ಇಲ್ಲ. ಇದರಿಂದ ಇಡೀ ತಾಲ್ಲೂಕು ಬಹಳ ಗಂಭೀರ ಪರಿಸ್ಥಿತಿಯಲ್ಲಿದೆ. ಇದೂ ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ಹಾಗೂ ಪಕ್ಕದ ಹಾವೇರಿ ಹಾಗೂ ಇತರ ತಾಲ್ಲೂಕುಗಳನ್ನು ತೆಗೆದುಕೊಂಡರೂ ಸಹ ಅಲ್ಲಿ ಯಾವುದೇ ನೀರಾವರಿ ಯೋಜನೆಗಳೂ ಇರುವುದಿಲ್ಲ. ಇಲ್ಲಿ ನೀರಾವರಿ ಯೋಜನೆ ಆಗದೇ ಹೋದರೆ ನಮ್ಮ ತಾಲ್ಲೂಕಿಗೆ ಪರ್ಮನೆಂಟ್ ಆಗಿ ಬರಗಾಲದ ಭಯ ಇರುತ್ತದೆ. ಆದಕಾರಣ ನಾನು ಸರಕಾರದಲ್ಲಿ ಬಹಳ ಕಳಕಳಿಯಿಂದ ಕೇಳುವುದೆಂದರೆ, ನಮ್ಮ ತಾಲ್ಲೂಕಿಗೆ ಅನುಕೂಲ ಆಗತಕ್ಕ ಬ್ಯೆರಂಪಾಡ್ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ಸುತ್ತಮುತ್ತಲ ತಾಲ್ಲೂಕುಗಳಿಗೆ ನೀರನ್ನು ಒದಗಿಸಿಕೊಡಬೇಕು. ಇದರಿಂದ ನಮ್ಮ ತಾಲ್ಲೂಕಿಗೆ ಬರಗಾಲದ ಭಯ ಬರುವುದಿಲ್ಲ ಎಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಖರೀಫ್ ಬೆಳೆಯನ್ನು 26,670 ಹೆಕ್ಟೇರ್‌ನಲ್ಲಿ ತೆಗೆಯುತ್ತಾರೆ. ರಬಿ ಕ್ರಾಪ್ 6025 ಹೆಕ್ಟೇರ್‌ನಲ್ಲಿ ಬೆಳೆಯುತ್ತಾರೆ. ಖರೀಫ್ ಬೆಳೆ ವಿಫಲವಾದರೂ ರಬಿ ಬೆಳೆಯಲ್ಲಿ ಆಸೆ ಇಟ್ಟುಕೊಂಡರೆ ಅದರ ಪ್ರಮಾಣ ಬಹಳ ಕಡಿಮೆ ಇದೆ. ಆದುದರಿಂದ ಇವೊತ್ತಿ ದಿವಸ ಬ್ಯೆರಂಪಾಡ್ ಯೋಜನೆಯನ್ನು ಸರಕಾರದವರು ಆದಷ್ಟು ತೀವ್ರತೆಯಿಂದ ಮಾಡಿ ನಮ್ಮ ತಾಲ್ಲೂಕಿನಲ್ಲಿ ಬರಗಾಲವನ್ನು ಹೋಗಲಾಡಿಸಬೇಕು. ಇದರಿಂದ ಜನಗಳಿಗೆ ತೊಂದರೆ ಬರುವುದಿಲ್ಲ, ಈಗ ಮಳೆ ಬಂದರೂ ಸಹ ಸರಕಾರದವರು ಬರಗಾಲ ಪರಿಹಾರ ಕಾಮಗಾರಿಗಳನ್ನು ಬಂದ್ ಮಾಡಬಾರದು ಎಂದು ಹೇಳಿಕೊಳ್ಳುತ್ತೇನೆ. ಇನ್ನೂ ಹೆಚ್ಚಿನ ಪ್ರಮಾಣ ದಲ್ಲಿ ಹಣವನ್ನು ನಮ್ಮ ತಾಲ್ಲೂಕಿಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬರಗಾಲದಮೇಲಿನ ಚರ್ಚೆ ನಾಳೆ ಮುಂದುವರಿಯುತ್ತದೆ. ಸಭೆ ಈಗ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುತ್ತದೆ.

(ಸಭೆಯು 5 ಗಂಟೆ 35 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 24-7-85ನೇ ಬುಧವಾರ ದಂದು ಬೆಳ್ಳಿಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು.)